ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜೂನ್ 2 ಸೋಮವಾರ 2025

₹4

ಸಂಪುಟ: 46 | ಸಂಚಿಕೆ: 47 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಲೋಕಾರ್ಪಣೆಗೊಂಡು ವರ್ಷ ಕಳೆದರೂ ಅನುಮತಿ ನೀಡದ ಕಸ್ಟಮ್ಸ್ ಇಲಾಖೆ

ಬಿಕೋ ಎನ್ನುತ್ತಿರುವ ಮೈಸೂರಿನ ಕಡಕೊಳದ ಕಂಟೈನರ್ ಯಾರ್ಡ್

ಬಾಪುಲಿಂಗರಾಜ್ ಅರಸ್



ಮೈಸೂರು, ಜೂ.1– ಮೈಸೂರಿನ ಕಡಕೊಳದಲ್ಲಿ ಕಂಟೈನರ್ ಕಾರ್ಪೊರೇಷನ್ ಆಫ್ ಇಂಡಿಯಾ ನೂರು ಕೋಟಿ ವೆಚ್ಚದಲ್ಲಿ ನಿರ್ಮಿಸಿರುವ ಕಂಟೈನರ್ ಯಾರ್ಡ್ ಉದ್ಘಾಟನೆಗೊಂಡು ಒಂದು ವರ್ಷ ಕಳೆದರೂ ಕೇಂದ್ರ ಸರ್ಕಾರದ ಕಸ್ಟಮ್ಸ್ ಇಲಾಖೆಯ ನಿರ್ಲಕ್ಷ್ಯದಿಂದ ಈ ತನಕ ಆಮದು ಮತ್ತು ರಫ್ತು ವಹಿವಾಟು ಆರಂಭಗೊಳ್ಳದೆ ಬಿಕೋ ಎನ್ನುತ್ತಿದೆ.

ಮೈಸೂರಿನಲ್ಲಿ ರಫ್ತು ಪ್ರಮಾಣ ಪ್ರತಿ ವರ್ಷ ಹೆಚ್ಚಾಗುತ್ತಲೇ ಇದೆ. 2022–23ರಲ್ಲಿ 6,300 ಕೋಟಿ, 2023–24ರಲ್ಲಿ 7000 ಕೋಟಿ ಮೌಲ್ಯದ ವಸ್ತುಗಳು ರಫ್ತಾಗಿದೆ. ಇದರಲ್ಲಿ ಶೇಕಡ 40ರಷ್ಟು ಸಣ್ಣ ಹಾಗೂ ಅತೀ ಸಣ್ಣ ಕೈಗಾರಿಕೆಗಳ ಉತ್ಪನ್ನಗಳೇ ರಫ್ತಾಗಿವೆ. ರಫ್ತಿನ ಪ್ರಮಾಣದಷ್ಟೇ ಆಮದು ಪ್ರಮಾಣ ಕೂಡ ಹೆಚ್ಚಾಗುತ್ತಿದೆ.

ಮೈಸೂರಿನಲ್ಲಿರುವ ಏಷಿಯನ್ ಪೈಂಟ್ಸ್, ಜೆ.ಕೆ.ಟೈರ್ಸ್, ರಿಶಿ ಕೇಬಲ್ ಅಂಡ್ ಪ್ಲಾಸ್ಟಿಕ್ ಮೆಟೀರಿಯಲ್, ನೆಸ್ಲೆ ಸೇರಿದಂತೆ ಹಲವು ಭಾರಿ ಹಾಗೂ ಸಣ್ಣ ಕೈಗಾರಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ರಫ್ತು ವಹಿವಾಟು ಮಾಡುತ್ತಿವೆ.

ಮೈಸೂರಿನ ಕೈಗಾರಿಕಾ ಉತ್ಪನ್ನಗಳು ತಮಿಳುನಾಡಿನ ಚೆನ್ನೈ, ಕೇರಳದ ಕೊಚ್ಚಿನ್ ಹಾಗೂ ಮಂಗಳೂರು ಬಂದರಿನಿಂದ ರಫ್ತಾಗುತ್ತಿವೆ. ಈ ಹಿನ್ನೆಲೆಯಲ್ಲಿ ಮೈಸೂರಿನ ಸುತ್ತಮುತ್ತಲ ಕೈಗಾರಿಕಾ ಉತ್ಪನ್ನಗಳ ರಫ್ತು ಮತ್ತು ಆಮದು ವಹಿವಾಟಿಗೆ ಪೂರಕವಾಗಿ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿ ಕಂಟೈನರ್ ಯಾರ್ಡ್ ಸ್ಥಾಪಿಸಲಾಯಿತು. ಕಂಟೈನರ್ ಯಾರ್ಡ್‌ಗೆ ನೇರ ಹಾಗೂ ಪ್ರತ್ಯೇಕವಾಗಿ ಗೂಡ್ಸ್ ರೈಲು ಸಂಪರ್ಕ ಕೂಡ ಕಲ್ಪಿಸಲಾಯಿತು.

ಈ ಕಂಟೈನರ್ ಯಾರ್ಡ್ ಅನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವರ್ಚ್ಯುವಲ್ ಮೂಲಕ ಉದ್ಘಾಟನೆ ಮಾಡಿದ್ದರು. ಹೀಗೆ ಲೋಕಾರ್ಪಣೆಗೊಂಡ ಕಂಟೈನರ್ ಯಾರ್ಡ್ ಒಂದು ವರ್ಷ ಕಳೆದರೂ ಇನ್ನು ಕಾರ್ಯಾರಂಭ ಮಾಡಿಲ್ಲ.

ಮೈಸೂರು ಜಿಲ್ಲೆಯಲ್ಲಿ 180ಕ್ಕೂ ಹೆಚ್ಚು ರಫ್ತು ಉದ್ದಿಮೆಗಳಿವೆ. ಸಾವಿರಾರು ಕೋಟಿ ಮೌಲ್ಯದ ವಸ್ತುಗಳು ಪ್ರಸ್ತುತ ಚೆನ್ನೈ, ಕೊಚ್ಚಿನ್ ಹಾಗೂ ಮಂಗಳೂರು ಬಂದರಿಗೆ ಸಾಗಾಣೆಯಾಗಿ ಅಲ್ಲಿ ಕಸ್ಟಮ್ಸ್‌ನವರಿಂದ ಕ್ಲಿಯರೆನ್ಸ್ ಪಡೆಯಬೇಕಿದೆ.

ಕಸ್ಟಮ್ಸ್‌ನವರು ಕ್ಲಿಯರೆನ್ಸ್ ನೀಡಿದ್ದರೆ ಸ್ಥಳೀಯ ಉದ್ಯಮಿಗಳಿಗೆ ಹಣ ಉಳಿತಾಯವಾಗುತ್ತಿತ್ತು. ಒಂದು ವರ್ಷ ಕಳೆದರೂ ಈ ತನಕ ನಂಜನಗೂಡು ಸಮೀಪವಿರುವ ಕಡಕೊಳದ ಕಂಟೈನರ್ ಯಾರ್ಡ್‌ನಿಂದ ಒಂದೇ ಒಂದು ವಸ್ತು ರಫ್ತಾಗಿಲ್ಲ. ಸ್ಥಳೀಯ ಉದ್ಯಮಿಗಳು ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಉದ್ಯಮಿಗಳಿಂದ ಭಾರಿ ಬೇಡಿಕೆ ಇದೆ

“ ಮೈಸೂರಿನ ಕಡಕೊಳದ ಕಂಟೈನರ್ ಯಾರ್ಡ್‌ನಿಂದ ರಫ್ತು ಹಾಗೂ ಆಮದು ವಹಿವಾಟಿಗೆ ಭಾರಿ ಬೇಡಿಕೆ ಇದೆ. ಇದು ಯಾವಾಗ ಕಾರ್ಯಾರಂಭಗೊಳ್ಳುತ್ತದೋ ಎಂದು ಉದ್ಯಮಿಗಳು ಕಾದು ಕುಳಿತ್ತಿದ್ದಾರೆ. ಆದರೆ, ಕಸ್ಟಮ್ಸ್ ಇಲಾಖೆಯವರು ಇನ್ನು ಅಧಿಸೂಚನೆ ಹೊರಡಿಸಿಲ್ಲ. ಕೇಂದ್ರ ಹಣಕಾಸು ಸಚಿವಾಲಯದ ವ್ಯಾಪ್ತಿಯಲ್ಲಿ ಕೆಲಸ ನಿರ್ವಹಿಸುವ ಈ ಇಲಾಖೆ ಇನ್ನಷ್ಟೇ ಪ್ರಕ್ರಿಯೆ ಆರಂಭಿಸಬೇಕಿದೆ. ದೆಹಲಿಯಲ್ಲಿ ಕಸ್ಟಮ್ಸ್‌ನವರು ದಾಖಲಾತಿ ಪರಿಶೀಲನಾ ಪ್ರಕ್ರಿಯೆ ಪೂರ್ಣಗೊಳಿಸಿದ ನಂತರ ಕಡಕೊಳ ಕಂಟೈನರ್ ಯಾರ್ಡ್‌ಗೆ ಭೇಟಿ ನೀಡುತ್ತಾರೆ. ಬಳಿಕವೇ ಇಲ್ಲಿ ರಫ್ತು ಮತ್ತು ಆಮದು ವಹಿವಾಟು ಮಾನದಂಡಗಳೇನು, ನಿಯಮಗಳೇನು, ಯಾವ ವಸ್ತುಗಳ ರಫ್ತು ಮತ್ತು ಆಮದು, ಇವುಗಳಿಗೆ ಅಬಕಾರಿ ಸುಂಕ ಎಷ್ಟಿರುತ್ತದೆ ಎಂಬುದು ಸೇರಿದಂತೆ ಹಲವು ಕಾನೂನಾತ್ಮಕ ಪ್ರಕ್ರಿಯೆ ಪೂರ್ಣಗೊಳಿಸುತ್ತಾರೆ. ನಂತರವೇ ರಫ್ತು ಮತ್ತು ಆಮದಿಗೆ ಅನುಮತಿ ನೀಡುತ್ತಾರೆ. ಕಡಕೊಳ ಕಂಟೈನರ್ ಯಾರ್ಡ್‌ನಲ್ಲಿ ಗೂಡ್ಸ್ ರೈಲು ಸಂಪರ್ಕ ಇರುವ ಹಿನ್ನೆಲೆಯಲ್ಲಿ ಇಲ್ಲಿ ತನಕ ಸುಮಾರು 7 ಟನ್ ಸಿಮೆಂಟ್ ಆಮದಾಗಿದೆ. ಕಂಟೈನರ್ ಯಾರ್ಡ್ ಕಾರ್ಯಾರಂಭಗೊಂಡರೆ ರಫ್ತು ಮತ್ತು ಆಮದು ಮಾಡಲು ಉದ್ಯಮಿಗಳು ಮುಂದೆ ಬರುತ್ತಾರೆ. **–ವಿಜಯಕುಮಾರ್, ಡಿಜಿಎಂ, ಕಂಟೈನರ್ ಕಾರ್ಪೋರೇಷನ್ ಆಫ್ ಇಂಡಿಯಾ**

ಫೈಲ್‌ಗಳ ತಳ್ಳಿದರೆ ಮಾತ್ರವೇ ಮುಂದೆ ಹೋಗುತ್ತವೆ

“ ಕಡಕೊಳ ಕಂಟೈನರ್ ಯಾರ್ಡ್ ಕಾರ್ಯಾರಂಭವಾಗದ ಕಾರಣ ಅಲ್ಲಿ ಬಂಡವಾಳ ಹೂಡಿರುವ ಕೋಟ್ಯಾಂತರ ರೂಪಾಯಿಗೆ ಬೆಲೆ ಇಲ್ಲದಾಗಿದೆ. ಹೂಡಿಕೆಯಿಂದ ಕಳೆದ ಒಂದು ವರ್ಷದಿಂದ ಲಾಭವೇ ಇಲ್ಲ, ಬರೀ ನಷ್ಟವಾಗುತ್ತಿದೆ. ಕಂಟೈನರ್ ಯಾರ್ಡ್ ಕಾರ್ಯಾರಂಭ ಮಾಡಿದ್ದರೆ ಇಲ್ಲಿನ ಕಸ್ಟಮ್ಸ್‌ನವರೇ ರಫ್ತು ಮತ್ತು ಆಮದು ಮಾಡಲು ಅನುಮತಿ ನೀಡುತ್ತಿದ್ದರು. ಆದರೆ ಈಗ ಚೆನ್ನೈ, ಕೊಚ್ಚಿನ್, ಮಂಗಳೂರಿಗೆ ಉದ್ಯಮಿಗಳು ಹೋಗಿ ಅಲ್ಲಿ ಅನುಮತಿ ಪಡೆಯಬೇಕಿದೆ. ಸರ್ಕಾರದ ಮಟ್ಟದಲ್ಲಿ ಪ್ರತಿಯೊಂದು ಪ್ರಕ್ರಿಯೆಗೆ ಅನುಮತಿ ದೊರೆತು ಕಡತಗಳು ಒಂದು ಇಲಾಖೆಯಿಂದ ಮತ್ತೊಂದು ಇಲಾಖೆಗೆ ಹೋಗಲು ತಡವಾಗುತ್ತಿದೆ. ಫೈಲ್‌ಗಳಿಗೆ ಬೇರಿಂಗ್, ಚಕ್ರಗಳಿಲ್ಲ, ತಳ್ಳಿದರೆ ಮಾತ್ರವೇ ಮುಂದೆ ಹೋಗುತ್ತವೆ. ಇಲ್ಲವೆಂದರೆ ಅಲ್ಲೇ ಧೂಳಿಡಿಯುತ್ತಾ ಇರುತ್ತವೆ. ಕಡಕೊಳ ಕಂಟೈನರ್ ಯಾರ್ಡ್ ಕಾರ್ಯಾರಂಭಕ್ಕೆ ಕಸ್ಟಮ್ಸ್‌ನವರು ಇನ್ನು ಅನುಮತಿ ನೀಡದಿರುವುದರಿಂದ ಉದ್ಯಮಿಗಳಿಗೆ ಸಾಕಷ್ಟು ನಷ್ಟವಾಗುತ್ತಿದೆ.

–ಸುರೇಶ್‌ಕುಮಾರ್ ಜೈನ್, ಪ್ರಧಾನ ಕಾರ್ಯದರ್ಶಿ, ಮೈಸೂರು ಕೈಗಾರಿಕೆಗಳ ಸಂಘ

ಮೈಸೂರಿನಿಂದ ಆಮದು ಮತ್ತು ರಫ್ತು ವಹಿವಾಟು ಆರಂಭವಾದರೆ ಕಸ್ಟಮ್ಸ್ ಇಲಾಖೆಯ ಕಚೇರಿ (ಕಸ್ಟಮ್ಸ್ ಹೌಸ್) ಸ್ಥಾಪನೆಯಾಗುತ್ತದೆ. ಹಲವು ಅಧಿಕಾರಿಗಳು ಮತ್ತು ಸಿಬ್ಬಂದಿ ಇಲ್ಲೇ ವಾಸ್ತವ್ಯ ಹೂಡುತ್ತಾರೆ.

ಅಧಿಕ ಸಂಖ್ಯೆಯಲ್ಲಿ ಬ್ರಾಹ್ಮಣ ಮಹಾಸಭಾ ಸದಸ್ಯರಾಗಿ

ಮಹಾಸಭಾದ ಉಪಾಧ್ಯಕ್ಷ ಹೆಚ್.ವಿ.ರಾಜೀವ್ ಸಲಹೆ



ಮೈಸೂರು, ಜೂ.1(ಬಿಎಲ್‌ಯು)– ಮೈಸೂರು ಮತ್ತು ಚಾಮರಾಜನಗರದಲ್ಲಿರುವ ವಿಪ್ರರು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸದಸ್ಯರಾಗಬೇಕೆಂದು ಮಹಾಸಭಾದ ಉಪಾಧ್ಯಕ್ಷರೂ ಆದ ಮಾಜಿ ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್ ಸಲಹೆ ನೀಡಿದ್ದಾರೆ.

ನಗರದ ಚಾಮುಂಡಿಪುರಂನ ತಮ್ಮ ಕಚೇರಿಯಲ್ಲಿ ಮಹಾಸಭಾದ ಸದಸ್ಯರಿಗೆ ಗುರುತಿನ ಚೀಟಿ ವಿತರಿಸಿ ಮಾತನಾಡಿದ ಅವರು, ರಾಜ್ಯದಲ್ಲಿ ನೋಂದಣಿ ಕಾರ್ಯ ಭರದಿಂದ ಸಾಗುತ್ತಿದೆ. ಇದರಲ್ಲಿ ಮೈಸೂರು ಮತ್ತು ಚಾಮರಾಜನಗರದ ವಿಪ್ರರು ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತ್ವ ಪಡೆಯಬೇಕು ಎಂದು ಹೇಳಿದರು.

ಈಗಾಗಲೇ ಈ ಎರಡು ಜಿಲ್ಲೆಯಲ್ಲಿ 200ಕ್ಕೂ ಹೆಚ್ಚು ಸದಸ್ಯರು ನೋಂದಾಯಿಸಿಕೊಂಡಿದ್ದಾರೆ ಎಂದು ರಾಜೀವ್ ತಿಳಿಸಿದರು. ಇದೇ ವೇಳೆ ಮಾತನಾಡಿದ ಮಹಾಸಭಾದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಸ್.ರಂಗನಾಥ್ ಅವರು, ಮೈಸೂರಿನ ಹಲವು ಕಡೆ ಸದಸ್ಯರಾಗ ಬಯಸುವವರು ನನ್ನ ದೂರವಾಣಿ ಸಂಖ್ಯೆ 9964524275 ಅನ್ನು ಸಂಪರ್ಕಿಸಬಹುದು ಎಂದರು. 50ರಿಂದ 60 ಸದಸ್ಯರು ಒಟ್ಟಿಗೆ ಇದ್ದಲ್ಲಿ ಅವರು ಇರುವ ಸ್ಥಳಕ್ಕೆ ಹೋಗಿ ನೋಂದಣಿ ಮಾಡಿಸಲಾಗುವುದು ಎಂದರು. ಈ ವೇಳೆ ವಿಪ್ರ ಮುಖಂಡರಾದ ಶೇಷ ಪ್ರಸಾದ್, ಹೊಯ್ಸಳ ಕರ್ನಾಟಕ ಸಂಘದ ನಿರ್ದೇಶಕ ಪ್ರಶಾಂತ್ ಭರದ್ವಾಜ್ ಹಾಜರಿದ್ದರು.

ಐಟಿಐ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಮೈಸೂರು: ಎನ್‌ಐಇ ಕೈಗಾರಿಕಾ ತರಬೇತಿ ಸಂಸ್ಥೆ ವತಿಯಿಂದ 14ರಿಂದ 32 ವರ್ಷ ವಯೋಮಿತಿಯ ಎಸ್‌ಎಸ್‌ಎಲ್‌ಸಿ ಅರ್ಹ ವಿದ್ಯಾರ್ಥಿಗಳಿಗೆ ನೇರ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ. ಎಲೆಕ್ಟ್ರಿಷಿಯನ್ 2 ಘಟಕಗಳು 2 ವರ್ಷ ಅವಧಿ, ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್ 2 ಘಟಕಗಳು 2 ವರ್ಷ, ಮೆಕ್ಯಾನಿಕ್ ರೆಫ್ರಿಜರೇಷನ್ & ಏರ್‌ಕಂಡೀಷನಿಂಗ್ 1 ಘಟಕ 2 ವರ್ಷ, ಟರ್ನರ್ 1 ಘಟಕ 2 ವರ್ಷ, ಮೋಟಾರ್ ಮೆಕ್ಯಾನಿಕ್ ವೆಹಿಕಲ್ 1 ಘಟಕ 2 ವರ್ಷ ಅವಧಿ ಇರುತ್ತದೆ. ಬೆಳಗ್ಗೆ 10ರಿಂದ ಸಂಜೆ 5 ರವರೆಗೆ ಅರ್ಜಿ ಪಡೆಯಬಹುದು. ಎಲ್ಲ ವೃತ್ತಿಗಳಿಗೆ ನಿಯಮದಂತೆ ಪ್ರವೇಶ ಮಾಡಲಾಗುವುದು. ಮಾಹಿತಿಗಾಗಿ 8892628009/ 9900244955/ 8660206282.

ಹಾಸನ ಮಿತ್ರ

ಚಿನ್ನಕ್ಕಾಗಿ ಕಾರ್ಮಿಕರಿಂದಲೇ ಕಂಟ್ರಾಕ್ಟರ್ ಬರ್ಬರ ಹತ್ಯೆ





ಹಾಸನ, ಜೂ. 1– ಗುತ್ತಿಗೆದಾರನ ಬರ್ಬರ ಹತ್ಯೆ ಮಾಡಿ, ಮೈಮೇಲಿದ್ದ ಚಿನ್ನದ ಒಡವೆಗಳನ್ನು ದೋಚಿ ಆರೋಪಿಗಳು ಪರಾರಿಯಾಗಿರುವ ಘಟನೆ ಅರಸೀಕೆರೆ ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಮುಂಭಾಗ ನಡೆದಿದೆ.

ವಿಜಯಕುಮಾರ್ (46) ಬರ್ಬರವಾಗಿ ಕೊಲೆಯಾದ ಕಂಟ್ರಾಕ್ಟರ್. ಬಿಹಾರ ಮೂಲದ ವಿಕ್ರಂ ಮತ್ತು ಸಚಿನ್ ಕೊಲೆ ಆರೋಪಿಗಳು.

ಅರಸೀಕೆರೆ ಪಟ್ಟಣದ ವಿಜಯಕುಮಾರ್, ಕಟ್ಟಡ ಹಾಗೂ ಲೇಬರ್ ಗುತ್ತಿಗೆದಾರರಾಗಿದ್ದರು. ಕೆಎಸ್‌ಆರ್‌ಟಿಸಿ ಮುಂಭಾಗ ನಿರ್ಮಾಣವಾಗುತ್ತಿರುವ ಹೊಸ ಹೋಟೆಲ್ ಕಟ್ಟಡದ ಗಾರೆ ಕೆಲಸಕ್ಕೆ ವಿಕ್ರಂ ಹಾಗೂ ಸಚಿನ್‌ನನ್ನು ಕರೆತಂದಿದ್ದರು. ಕೆಲವು ದಿನಗಳಿಂದ ವಿಕ್ರಂ ಹಾಗೂ ಸಚಿನ್, ವಿಜಯ್ ಕುಮಾರ್ ಜೊತೆಯಲ್ಲೇ ಕೆಲಸ ಮಾಡುತ್ತಿದ್ದರು.

ವಿಜಯಕುಮಾರ್ ಯಾವಾಗಲೂ ಕೊರಳಿನಲ್ಲಿ ದಪ್ಪದಾದ ಚಿನ್ನದ ಸರ, ನಾಲ್ಕೈದು ಚಿನ್ನದ ಉಂಗುರಗಳನ್ನು ಹಾಕಿಕೊಳ್ಳುತ್ತಿದ್ದರು. ವಿಜಯಕುಮಾರ್ ಮೈಮೇಲಿದ್ದ ಚಿನ್ನದ ಒಡವೆಗಳ ಮೇಲೆ ವಿಕ್ರಂ ಹಾಗೂ ಸಚಿನ್ ಕಣ್ಣು ಹಾಕಿದ್ದು ಅದನ್ನು ಪಡೆಯಲು ಮಾಸ್ಟರ್ ಪ್ಲಾನ್ ಮಾಡಿದ್ದರು.

ಶುಕ್ರವಾರ ತಡರಾತ್ರಿ ವಿಕ್ರಂ ಹಾಗೂ ಸಚಿನ್, ವಿಜಯಕುಮಾರ್ ಅವರಿಗೆ ಕರೆ ಮಾಡಿ ನಮಗೆ ಆರೋಗ್ಯ ಸರಿಯಿಲ್ಲ. ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ, ನಾವು ಹೊರಗಡೆ ಹೋದರೆ ಅನುಮಾನಪಡುತ್ತಾರೆ ಎಂದಿದ್ದರು. ತಕ್ಷಣವೇ ವಿಜಯಕುಮಾರ್ ಕಟ್ಟಡದ ಮಾಲೀಕ ಶ್ರೀನಿವಾಸ್‌ಗೆ ಕರೆ ಮಾಡಿ ವಿಷಯ ತಿಳಿಸಿದ್ದರು.

ಶ್ರೀನಿವಾಸ್ ಈಗ ನೀನು ಹೋಗುವುದು ಬೇಡ, ನಾಳೆ ನೋಡೋಣ ಬಿಡು ಎಂದು ವಿಜಯಕುಮಾರ್‌ಗೆ ಹೇಳಿದ್ದರು. ಆದರೆ ಕಾರ್ಮಿಕರಿಗೆ ಏನಾದರೂ ಹೆಚ್ಚು ಕಡಿಮೆ ಆದರೆ ನಾನು ಹೊಣೆಗಾರನಾಗಬೇಕಾಗುತ್ತದೆ. ಹೋಗಿ ನೋಡಿಕೊಂಡು ಬರುತ್ತೇನೆ ಎಂದು ತಮ್ಮ ಸ್ಕೂಟಿಯಲ್ಲಿ ಕಟ್ಟಡದ ಬಳಿಗೆ ವಿಜಯಕುಮಾರ್ ತೆರಳಿದ್ದರು. ಅವರು ನಿರ್ಮಾಣ ಹಂತದ ಕಟ್ಟಡದ ಮುಂದೆ ಸ್ಕೂಟಿ ನಿಲ್ಲಿಸಿ ಒಳಗೆ ಹೋಗುತ್ತಿದ್ದಂತೆ ಆರೋಪಿಗಳು, ಕಬ್ಬಿಣದ ರಾಡ್‌ನಿಂದ ಬಲವಾಗಿ ತಲೆಗೆ ಹೊಡೆದಿದ್ದು, ಪರಿಣಾಮ ಆ ಕೂಡಲೇ ವಿಜಯಕುಮಾರ್ ನೆಲಕ್ಕೆ ಬಿದ್ದಿದ್ದರು. ನಂತರ ಸಣ್ಣ ಗ್ಯಾಸ್ ಸಿಲಿಂಡರ್‌ನಿಂದ ತಲೆ, ಮುಖವನ್ನು ಜಜ್ಜಿ ಭೀಕರವಾಗಿ ಕೊಲೆ ಮಾಡಿ, ಅವರ ಕೊರಳಿನಲ್ಲಿದ್ದ ಚಿನ್ನದ ಚೈನ್, ಕೈಯಲ್ಲಿದ್ದ ಮೂರು ಉಂಗುರುಗಳನ್ನು ಕಸಿದುಕೊಂಡಿದ್ದರು. 1 ಉಂಗುರ ಬೆರಳಿನಿಂದ ಬಾರದಿದ್ದಾಗ ಬೆರಳನ್ನು ತುಂಡರಿಸಿ ಬೆರಳಿನ ಸಮೇತ ಉಂಗುರವನ್ನು ಎತ್ತಿಕೊಂಡು ವಿಜಯಕುಮಾರ್ ಅವರ ಸ್ಕೂಟಿಯಲ್ಲಿಯೇ ಸ್ಥಳದಿಂದ ಹೊರಟಿದ್ದರು. ಬಳಿಕ ಪಟ್ಟಣದ ಹೋಟೆಲ್‌ವೊಂದರ ಮುಂದೆ ಸ್ಕೂಟಿ ನಿಲ್ಲಿಸಿ ಎಸ್ಕೇಪ್ ಆಗಿದ್ದಾರೆ. ಆರೋಪಿಗಳು ವಿಜಯಕುಮಾರ್ ಅವರನ್ನು ಕೊಲೆ ಮಾಡಿ ಸ್ಕೂಟಿಯಲ್ಲಿ ಎಸ್ಕೇಪ್ ಆಗುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಸ್ಥಳಕ್ಕೆ ಅರಸೀಕೆರೆ ನಗರಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು ಸಿಸಿಟಿವಿ ದೃಶ್ಯ ಆಧರಿಸಿ ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

ಶ್ರೀ ರಾಮಕೃಷ್ಣ ಆಶ್ರಮದಲ್ಲಿ ತಂಬಾಕು ವಿರೋಧಿ ದಿನ ಆಚರಣೆ



ಶ್ರೀ ರಾಮಕೃಷ್ಣ ಆಶ್ರಮದಲ್ಲಿ ವಿಶ್ವ ತಂಬಾಕು ವಿರೋಧಿ ದಿನ ಆಚರಿಸಲಾಯಿತು. ಈ ವೇಳೆ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಜಾಥಾಗೆ ಚಾಲನೆ ನೀಡಿದರು.

ಮೈಸೂರು, ಜೂ. 1– ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ ಸೇವಾ ಚಟುವಟಿಕೆಗಳು ಮತ್ತು ಕಾರ್ಯಕ್ರಮದ ಅಂಗವಾಗಿ ವಿಶ್ವ ತಂಬಾಕು ವಿರೋಧಿ ದಿನವನ್ನು ಆಶ್ರಮದ ಆವರಣದಲ್ಲಿ ಆಚರಿಸಲಾಯಿತು. ಮೈಸೂರಿನ ವಿವಿಧ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಯುವಕರು ಈ ಸಂದರ್ಭದಲ್ಲಿ ಹಾಜರಿದ್ದರು.

ಕಾರ್ಯಕ್ರಮವನ್ನು ಶ್ರೀ ರಾಮಕೃಷ್ಣ ಆಶ್ರಮ, ವಿವೇಕ ಗ್ರೂಪ್ ಆಫ್ ಹಾಸ್ಪಿಟಲ್ಸ್ ಮತ್ತು ಶ್ರೀ ರಾಮಕೃಷ್ಣ ವಿದ್ಯಾಲಯದ ಅಲ್ಯೂಮ್ನಿ ಸಹಯೋಗದಲ್ಲಿ ಆಯೋಜಿಸಲಾಗಿತ್ತು. ಈ ವರ್ಷ ತನ್ನ ಸೇವೆಯ 100 ವರ್ಷಗಳನ್ನು ಆಚರಿಸುತ್ತಿರುವ ಶ್ರೀ ರಾಮಕೃಷ್ಣ ಆಶ್ರಮದ ಶತಮಾನೋತ್ಸವ ಆಚರಣೆ ಲೋಗೋ ಬಿಡುಗಡೆ ಮಾಡಲಾಯಿತು. ಜಾಥಾಕ್ಕೆ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಚಾಲನೆ ನೀಡಿದರು. ವಿವೇಕ ಆಸ್ಪತ್ರೆಯ ಡಾ.ನರೇನ್, ಮನುಷ್ಯನ ದೇಹದಲ್ಲಿ ತಂಬಾಕಿನಿಂದಾಗುವ ಪರಿಣಾಮಗಳ ಬಗ್ಗೆ ಮಾತನಾಡಿದರು. ಆಶ್ರಮದ ಶತಮಾನೋತ್ಸವ ಆಚರಣೆಯ ಕುರಿತು ಎಸ್.ಬಾಲಾಜಿ ಮಾತನಾಡಿದರು.

ಪಿಯು ಉಪನ್ಯಾಸಕರಿಗೆ ವರ್ಗಾವಣೆ ಆಯ್ಕೆ ಅವಕಾಶಕ್ಕೆ ಎಂಎಲ್‌ಸಿ ವಿವೇಕಾನಂದ ಮನವಿ



ಕೆ.ವಿವೇಕಾನಂದ

ಮೈಸೂರು, ಜೂ. 1(ಎಂಕೆ) –ಪ್ರಸಕ್ತ ಸಾಲಿನ ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಾರ್ವತ್ರಿಕ ವರ್ಗಾವಣೆಯಲ್ಲಿ ಶೇ.40ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳಿಗೆ ಸ್ಥಳ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಬೇಕು ಎಂದು ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು ಹಾಗೂ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರದ ಮೂಲಕ ಮನವಿ ಮಾಡಿದ್ದಾರೆ.

ರಾಜ್ಯದಲ್ಲಿ 1238 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿದ್ದು, ಬಹುತೇಕ ಗ್ರಾಮಾಂತರ ಪ್ರದೇಶದಲ್ಲಿವೆ. ಅಲ್ಲದೆ 4500 ಉಪನ್ಯಾಸಕ ಹುದ್ದೆಗಳು ಖಾಲಿ ಇದ್ದು, ವಿದ್ಯಾರ್ಥಿಗಳ ಕಲಿಕಾ ಗುಣಮಟ್ಟ ಕಡಿಮೆಯಾಗುತ್ತಿದೆ. ಆದ್ದರಿಂದ ಗ್ರಾಮೀಣ ಪ್ರದೇಶ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಹಾಗೂ ಗುಣಮಟ್ಟದ ಶಿಕ್ಷಣ ನೀಡುವ ನಿಟ್ಟಿನಲ್ಲಿ ಶೇಕಡಾ 40ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಕಾಲೇಜುಗಳಲ್ಲಿ ಖಾಲಿ ಇರುವ ಎಲ್ಲ ಹುದ್ದೆಗಳನ್ನು ಕೌನ್ಸಿಲಿಂಗ್ ಮೂಲಕ ಆಯ್ಕೆ ಮಾಡಿಕೊಳ್ಳಲು ಅವಕಾಶ ನೀಡಬೇಕು ಎಂದು ಅವರು ಕೋರಿದ್ದಾರೆ.

ಬೀದಿನಾಯಿಗಳ ದಾಳಿಗೆ ತುತ್ತಾದ ನವಿಲು ರಕ್ಷಣೆ: ಪಿಎಫ್‌ಎಯಿಂದ ಚಿಕಿತ್ಸೆ–ಆರೈಕೆ

ಮೈಸೂರು,ಜೂ.1(ಪಿಎಂ/ಕೆಎಸ್)– ಬೀದಿನಾಯಿಗಳ ದಾಳಿಗೆ ಒಳಗಾಗಿ ತೀವ್ರತರವಾಗಿ ಗಾಯಗೊಂಡು ನರಳಾಡುತ್ತಿದ್ದ ನವಿಲನ್ನು ಪಿಎಫ್‌ಎಯಿಂದ (ಪೀಪಲ್ ಫಾರ್ ಅನಿಮಲ್) ರಕ್ಷಿಸಲಾಗಿದೆ.

ಮೈಸೂರಿನ ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದ ಸಮೀಪ ಶನಿವಾರ ಸಂಜೆ ಬೀದಿನಾಯಿಗಳು ಈ ನವಿಲಿನ ಮೇಲೆ ದಾಳಿ ನಡೆಸಿದ್ದು, ಈ ವೇಳೆ ನವಿಲಿನ ಕುತ್ತಿಗೆಗೆ ತೀವ್ರತರವಾದ ಗಾಯವಾಗಿದೆ. ಆದಾಗ್ಯೂ ನಾಯಿಗಳ ಹಿಡಿತದಿಂದ ತಪ್ಪಿಸಿಕೊಂಡ ನವಿಲು, ಬಳಿಕ ಸಮೀಪದ ಚರಂಡಿಯೊಳಗೆ ಆಶ್ರಯ ಪಡೆದಿತ್ತು. ಇದನ್ನು ಕಂಡ ದಾರಿಹೋಕರು, ಪಿಎಫ್‌ಎಯವರಿಗೆ ಕರೆ ಮಾಡಿ ತಿಳಿಸಿದ್ದು, ಕೂಡಲೇ ಸ್ಥಳಕ್ಕೆ ಪಿಎಫ್‌ಎ ವ್ಯವಸ್ಥಾಪಕ ಅನಿಲ್ ನೇತೃತ್ವದ ತಂಡ ಅನಿಮಲ್ ಆಂಬುಲೆನ್ಸ್‌ನೊಂದಿಗೆ ಧಾವಿಸಿ ಬಂದು ನವಿಲಿಗೆ ಪ್ರಾಥಮಿಕ ಚಿಕಿತ್ಸೆ ಹಾಗೂ ಆರೈಕೆ ನೀಡಿ, ಮೈಸೂರಿನ ಬೋಗಾದಿಯ ರೂಪನಗರದಲ್ಲಿರುವ ಪಿಎಫ್‌ಎ ಆರೈಕೆ ಕೇಂದ್ರಕ್ಕೆ ಕೊಂಡೊಯ್ದರು. ಇಲ್ಲಿ ಡಾ.ಅಮರ್‌ದೀಪ್ ಸಿಂಗ್ ಮತ್ತು ಕರ್ನಲ್ ಡಾ.ನವಾಜ್ ಅವರು ನವಿಲಿಗೆ ಚಿಕಿತ್ಸೆ ನೀಡಿ ಉಪಚರಿಸಿದ್ದರು. ಭಾನುವಾರ ಬೆಳಗ್ಗೆ ಮುಂದುವರೆದ ಚಿಕಿತ್ಸೆಗಾಗಿ ಸದರಿ ನವಿಲನ್ನು ಬೆಂಗಳೂರಿನ ಕೆಂಗೇರಿಯಲ್ಲಿರುವ ಪಿಎಫ್‌ಎ ವನ್ಯಜೀವಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು. ನವಿಲು ವನ್ಯಜೀವಿಯಾದ ಕಾರಣ ಹಾಗೂ ನಗರದ ಪಿಎಫ್‌ಎ ಘಟಕದಲ್ಲಿ ವನ್ಯಜೀವಿ ಚಿಕಿತ್ಸೆ ಮತ್ತು ಆರೈಕೆಗೆ ವ್ಯವಸ್ಥೆಗಳು ಇಲ್ಲದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ.




ಪಿಎಫ್‌ಎ ವ್ಯವಸ್ಥಾಪಕ ಅನಿಲ್, ಗಾಯಗೊಂಡ ನವಿಲು ರಕ್ಷಣೆ ಮಾಡಿ ತಮ್ಮ ಕೇಂದ್ರಕ್ಕೆ ಕೊಂಡೊಯ್ಯುತ್ತಿರುವುದು.



ಕೆಂಗೇರಿಯಲ್ಲಿರುವ ಪಿಎಫ್‌ಎ ವನ್ಯಜೀವಿ ಪುನರ್ವಸತಿ ಕೇಂದ್ರದಲ್ಲಿ ಭಾನುವಾರ ನವಿಲಿಗೆ ಚಿಕಿತ್ಸೆ ನೀಡುತ್ತಿರುವುದು.

ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪಿಎಫ್‌ಎ ವ್ಯವಸ್ಥಾಪಕ ಅನಿಲ್, ಮೈಸೂರಿನ ಪಿಎಫ್‌ಎ ಕೇಂದ್ರದಲ್ಲಿ ಸಾಕುಪ್ರಾಣಿಗಳನ್ನು ಮಾತ್ರ ಇಟ್ಟುಕೊಳ್ಳಲು ಅವಕಾಶವಿದೆ. ಹೀಗಾಗಿ ಬೆಂಗಳೂರಿನ ನಮ್ಮ ಕೇಂದ್ರಕ್ಕೆ ಸ್ಥಳಾಂತರ ಮಾಡಲಾಗಿದೆ. ಇದು ಹೆಣ್ಣು ನವಿಲಾಗಿದ್ದು, ಇದರ ಕುತ್ತಿಗೆಗೆ ತೀವ್ರವಾದ ಗಾಯವಾಗಿದೆ ಎಂದು ತಿಳಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

02.06.2025 ಸೋಮವಾರ, ಮಳೆ ನಕ್ಷತ್ರ: ರೋಹಿಣಿ, 25.05.2025 ರಿಂದ 07.06.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಜ್ಯೇಷ್ಠ ಮಾಸ, ಶುಕ್ಲ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಮಖ, ರಾಹುಕಾಲ: ಬೆಳಗ್ಗೆ 7.30 ರಿಂದ 9 ರವರೆಗೆ

■ **ಧನ್ಯ ಸ್ಕೂಲ್ ಆಫ್ ಯೋಗ ಹಾಗೂ ಮುದ್ರಾ ಪ್ರಾಣಾಯಾಮ ರಿಸರ್ಚ್ ಸೆಂಟರ್:** ಮುದ್ರಾ ಪ್ರಾಣಾಯಾಮ ಶಿಬಿರ, ಸಂಕಲ್ಪ ಸಿದ್ಧಿ ಧ್ಯಾನ, ಸ್ಥಳ: ಮಹಿಳಾ ಸಮಾಜ, ಜೆಎಲ್‌ಬಿ ರಸ್ತೆ, ಬೆಳಗ್ಗೆ 6.30ರಿಂದ 7.30 ಹಾಗೂ ಸಂಜೆ 6.30ರಿಂದ 7.30ರವರೆಗೆ.

■ **ಆಲ್ ಇಂಡಿಯಾ ಇನ್ಶೂರೆನ್ಸ್ ಪೆನ್ಷನರ್ಸ್ ಅಸೋಸಿಯೇಷನ್:** 9ನೇ ಜನರಲ್ ಕಾನ್ಫರೆನ್ಸ್, ಸ್ವಾಗತ ಭಾಷಣ: ವಿಶ್ರಾಂತ ಕುಲಪತಿ ಶ್ರೀಮತಿ ಸಬಿಹಾ ಭೂಮಿಗೌಡ, ಉದ್ಘಾಟನೆ: ಸಂಸದ ಕಾಂ. ಜಾನ್ ಬ್ರಿಟ್ಟಾಸ್, ಮುಖ್ಯ ಅತಿಥಿಗಳು: ಎಐಐಇಎ ಅಧ್ಯಕ್ಷ ಕಾಂ. ವಿ. ರಮೇಶ್, ಪ್ರಧಾನ ಕಾರ್ಯದರ್ಶಿ ಕಾಂ. ಶ್ರೀಕಾಂತ್ ಮಿಶ್ರ, ಸ್ಥಳ: ಹೋಟೆಲ್ ರಿಯೋ ಮೆರಿಡಿಯನ್, ಬೆಳಗ್ಗೆ 9.30ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಉತ್ತಮ ನಿದ್ರೆ ಅಭ್ಯಾಸ ಮತ್ತು ನಿದ್ರೆ ಸಮಸ್ಯೆ ನಿವಾರಣೆಯ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.

■ **ಶ್ರೀ ರಾಮಕೃಷ್ಣ ಸೇವಾ ಸಂಘ, ರಾಮಕೃಷ್ಣ ವಿದ್ಯಾಕೇಂದ್ರ ಸಂಯುಕ್ತ ಪದವಿ ಪೂರ್ವ ಕಾಲೇಜು, ಶ್ರೀ ಪ್ರಾಮ್ಯ ಎಜೂಕೇಷನಲ್ ಟ್ರಸ್ಟ್:** 2025–26ನೇ ಸಾಲಿನ ಪ್ರಥಮ ವರ್ಷದ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಮತ್ತು ಅಭಿವಿನ್ಯಾಸ ಕಾರ್ಯಕ್ರಮ, ದಿವ್ಯ ಸಾನ್ನಿಧ್ಯ: ಮೈಸೂರಿನ ಯಾದವಗಿರಿಯ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷ ಪೂಜ್ಯ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಸ್ಥಳ: ಶ್ರೀ ಶಾರದಾ ಸಭಾಂಗಣ, ಶಾಲೆಯ ಆವರಣ, ಬೆಳಗ್ಗೆ 10.30ಕ್ಕೆ

■ **ಕಸ್ತೂರಿ ಸಿರಿಗನ್ನಡ ವೇದಿಕೆ, ರಾಜ್ಯ ಘಟಕ (ಮಂಡ್ಯ), ಕೀರ್ತಿ ಮಹಿಳಾ ಮಂಡಳಿ (ಮೈಸೂರು):** ಶಾಲಾ ಮಕ್ಕಳಿಗೆ 'ತಾಯಿ' (ಅಮ್ಮ) ಕುರಿತು ಪ್ರಬಂಧ ಸ್ಪರ್ಧೆ–2025, ಕಾನೂನು ಅರಿವು, ಆರೋಗ್ಯದ ಬಗ್ಗೆ ಅರಿವು, ಸಾಧಕರಿಗೆ ಸನ್ಮಾನ ಮತ್ತು ಕಸಿವೇ ಪದಗ್ರಹಣ ಸಮಾರಂಭ, ಉದ್ಘಾಟನೆ: ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ: ಕನ್ನಿಕಾ ಕಾವೇರಿ ಸ್ಕೂಲ್ ಸಂಸ್ಥಾಪಕರಾದ ಶ್ರೀಮತಿ ಚೋವಂಡ ಚೋಂದಮ್ಮ ಪೂಣಚ್ಚ, ಸ್ಥಳ: ಕನ್ನಿಕಾ ಕಾವೇರಿ ಎಜುಕೇಷನ್ ಸೊಸೈಟಿ, ಹೆಬ್ಬಾಳ್, ಬೆಳಗ್ಗೆ 11 ಗಂಟೆಗೆ.

■ **ತೊಳಸಿ ಜ್ಯುವೆಲ್ಸ್:** ಇಟಾಳಸಿ ಲಕ್ಸ್ ಫಸ್ಟ್–ಆಭರಣಗಳ ಪ್ರದರ್ಶನ, ಸ್ಥಳ: ತೊಳಸಿ ಜ್ಯುವೆಲ್ಸ್, ವಿವಿ ಮೊಹಲ್ಲಾ, ಟೆಂಪಲ್ ರಸ್ತೆ, ಬೆಳಗ್ಗೆ 11ರಿಂದ.

■ **ಕಲಾ ಸೌರಭ:** ಕರ್ನಾಟಕ ಶಾಸ್ತ್ರೀಯ ಸಂಗೀತ ಅಧ್ಯಯನ ಶಿಬಿರ–2025, ವಿದುಷಿ ಬೆಂಗಳೂರಿನ ಚಾರುಲತಾ ರಾಮಾನುಜಂ ಅವರು ತೋಡಿ ರಾಗದ ರಚನೆಯನ್ನು ಮನೋಧರ್ಮ ಸಂಗೀತದೊಂದಿಗೆ ಕಲಿಸಿಕೊಡಲಿದ್ದಾರೆ, ಸ್ಥಳ: ನಂ. 298, 8ನೇ ಅಡ್ಡ ರಸ್ತೆ, ಇ ಅಂಡ್ ಎಫ್ ಬ್ಲಾಕ್, ರಾಮಕೃಷ್ಣನಗರ, ಸಂಜೆ 4.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: "ಸಸ್ಯ ಸಿರಿ" ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ: ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಟಿ.ಎನ್. ಅಶ್ವಿನಿ ಮತ್ತು ಎಂ.ಎ. ಶೋಭಾ, ವ್ಯಾಖ್ಯಾನ– ಡಾ. ಜ್ಯೋತಿ ಶಂಕರ್, 6.50 ರೈತರಿಗೆ ಸಲಹೆ, 7.15 "ಭರವಸೆ ಹೊನಲು–ವೈದ್ಯರ ಕಿವಿಮಾತು" ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು– ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ. ರಸ್ತೆ, ಬೆಂಗಳೂರು, 8.30 ಯೋಗ ಕುರಿತ ವಿಶೇಷ ಸರಣಿ: "ಮಹಾಯೋಗ", 8.35 ಯೋಗದತ್ತ ಜಗತ್ತು: ಯೋಗ ಕುರಿತ ವಿಶೇಷ ಕಾರ್ಯಕ್ರಮ ಸರಣಿ, ಪ್ರಸ್ತುತಿ– ಡಿ. ಶ್ರೀಹರಿ, 8.50 ಕನ್ನಡ ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ), 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ಎ. ಜ್ಯೋತಿ– ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ: ಗೇಮ್ ಷೋ, ಪ್ರಸ್ತುತಿ– ಬಿ. ದಿಗ್ವಿಜಯ್ ಮತ್ತು ಆರ್. ಲೋಕೇಶ್ವರಿ.

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ: ಮಾನಸ ನಯನ, 12.45 ನಮ್ಮ ಆರೋಗ್ಯ: ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂಬಂಧವಾಗಿ ವಿಶೇಷ ಕಾರ್ಯಕ್ರಮ 'ಮಾನಸಿಕ ಆರೋಗ್ಯ ಮತ್ತು ಪತಂಜಲಿಯ ಯೋಗಸೂತ್ರಗಳು' ಕುರಿತು ಆಯುರ್ವೇದ ವೈದ್ಯರು ಹಾಗೂ ಆರೋಗ್ಯ ಭಾರತಿಯ ರಾಷ್ಟ್ರೀಯ ಕಾರ್ಯದರ್ಶಿ ಡಾ. ಟಿ.ಎನ್. ಮಂಜುನಾಥ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ– ಬೇದ್ರೆ ಮಂಜುನಾಥ, 1.00 ಪ್ರಗತಿ ಪಥ: ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು: ಎಂ.ಎಸ್. ಲಕ್ಷ್ಮೀಶ, 2.30 ಪ್ರದೇಶ ಸಮಾಚಾರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಚಿತ್ತ್ಕಲ ಹೆಚ್.ಕೆ.– ಹಾಡುಗಾರಿಕೆ.

ಸಂಜೆ: 4.00 ಮಹಿಳಾರಂಗ: ಅಕ್ಕ ಕೇಳವ್ವ, ಪ್ರಸ್ತುತಿ: ಶ್ರೀಮಾನ್, 4.45 ಹಿಂದಿ ಪಾಠ: ಪ್ರಸ್ತುತಿ– ಶಾಂತಾ ಕಿಣಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಸಹಜ ಸಾವಯವ ಕೃಷಿ ಕುರಿತು ಗುಂಡ್ಲುಪೇಟೆ ತಾಲ್ಲೂಕು, ಬೇಗೂರು ಹೋಬಳಿ, ನಿಟ್ರೆ ಗ್ರಾಮದ ಹೆಚ್.ಕೆ. ಈಶ್ವರಪ್ಪ ಅವರೊಂದಿಗೆ ಸಂದರ್ಶನ, ಸಂದರ್ಶಕರು– ಎನ್. ಕೇಶವಮೂರ್ತಿ.

ರಾತ್ರಿ: 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ: ಪರಿಸರ ದಿನಾಚರಣೆಯ ಪ್ರಯುಕ್ತ ವಿಶೇಷ ಚಿತ್ರ–ಚಿತ್ತಾರ, ಪ್ರಸ್ತುತ ಪಡಿಸುತ್ತಾರೆ– ಸ್ಫೂರ್ತಿ ಎಸ್. ಮರೂರ್, 8.30 ಹಿಂದಿ ಚಿತ್ರಗೀತೆ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಚೆಪ್ಪಡ್ ಎ.ಇ. ವಾಮನನ್ ನಂಬೂದರಿ– ಹಾಡುಗಾರಿಕೆ, 10.00 'ಯಕ್ಷಸಂಪದ': ಬಡಗು ತಿಟ್ಟಿನ ಯಕ್ಷಗಾನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ, ಪ್ರಸ್ತುತಿ– ದಿವಾಕರ ಹೆಗಡೆ, 10.30 ಸವಿನೆನಪು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜೂನ್ 2 ಸೋಮವಾರ 2025

ಸಂಪುಟ: 46 | ಸಂಚಿಕೆ: 47 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಮುಂಬೈ ವಿರುದ್ಧ ಪಂಜಾಬ್ ಭರ್ಜರಿ ಗೆಲುವು

ಬೆಂಗಳೂರು–ಪಂಜಾಬ್ ಫೈನಲ್ ಹಣಾಹಣಿ

• 11 ವರ್ಷದ ಬಳಿಕ ಪಂಜಾಬ್ ಫೈನಲ್‌ಗೆ • ನಾಳೆ ಅಹಮದಾಬಾದ್‌ನಲ್ಲಿ ರೋಚಕ ಪಂದ್ಯ

ಅಹಮದಾಬಾದ್, ಜೂ.1– ಮಳೆಯಿಂದಾಗಿ ತಡವಾಗಿ ಆರಂಭವಾದ ಪಂದ್ಯದಲ್ಲಿ ನಾಯಕನಿಗೆ ತಕ್ಕ ಆಟವಾಡಿದ ಶ್ರೇಯಸ್ ಅಯ್ಯರ್ ಅವರ ಅರ್ಧಶತಕದ ನೆರವಿನಿಂದ ಪಂಜಾಬ್ ಕಿಂಗ್ಸ್, ಮುಂಬೈ ಇಂಡಿಯನ್ಸ್ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದ್ದು, ಮಂಗಳವಾರ ಬೆಂಗಳೂರು ವಿರುದ್ಧ ಪಂಜಾಬ್ ಫೈನಲ್ ಹಣಾಹಣಿ ನಡೆಸಲಿದೆ.

ಇದರೊಂದಿಗೆ ಪಂಜಾಬ್ ಕಿಂಗ್ಸ್ 11 ವರ್ಷಗಳ ಬಳಿಕ ಮತ್ತೊಮ್ಮೆ ಫೈನಲ್‌ಗೆ ಗ್ರ್ಯಾಂಡ್ ಎಂಟ್ರಿ ಕೊಟ್ಟಿದ್ದು, ಜೂ.3ರಂದು ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುವ ಫೈನಲ್ ಪಂದ್ಯದಲ್ಲಿ ಪ್ರಶಸ್ತಿಗಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ. ಮತ್ತೊಂದೆಡೆ 5 ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಸೋಲಿನೊಂದಿಗೆ ಟೂರ್ನಿಗೆ ವಿದಾಯ ಹೇಳಿದೆ.





ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಕ್ವಾಲಿಫೈಯರ್–2 ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 203 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. ಈ ಗುರಿ ಬೆನ್ನತ್ತಿದ ಪಂಜಾಬ್ 19 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 207 ರನ್ ಗಳಿಸಿ ವಿಜಯದ ನಗೆ ಬೀರಿತು. ▶ 6ನೇ ಪುಟಕ್ಕೆ



ಫೈನಲ್ ಪ್ರವೇಶಿಸಿದ ಸಂಭ್ರಮದಲ್ಲಿ ಪಂಜಾಬ್ ಕಿಂಗ್ಸ್ ಆಟಗಾರರ ವಿಜಯೋತ್ಸವ.

ನಾಗರಹೊಳೆ ಸಫಾರಿಗೆ ಹೊಸ ದರ ನಿಗದಿ

ಸಮಯವೂ ಪರಿಷ್ಕರಣೆ

ಮೈಸೂರು, ಜೂ.1(ಎಂಟಿವೈ)–ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ಸಮಯ ಮತ್ತು ದರ ಪರಿಷ್ಕರಿಸಿರುವ ಅರಣ್ಯ ಇಲಾಖೆ ಇಂದಿನಿಂದಲೇ (ಜೂ.1) ಹೊಸ ದರದಲ್ಲಿ ಸಫಾರಿ ಸೇವೆ ಒದಗಿಸುತ್ತಿದೆ.


ನಾಗರಹೊಳೆ ಅಭಯಾರಣ್ಯದಲ್ಲಿ ಅಂತರಸಂತೆ ವಲಯದ ಕಾಕನಕೋಟೆ (ದಮ್ಮನಕಟ್ಟೆ), ಹುಣಸೂರು ತಾಲೂಕಿನ ವೀರನಹೊಸಹಳ್ಳಿ, ಕೊಡಗಿನ ನಾಣಚ್ಚಿ ಗೇಟ್ ಬಳಿ ಪ್ರತ್ಯೇಕ 3 ಸಫಾರಿ ಕೇಂದ್ರದಿಂದ ಪ್ರತಿ ದಿನ ಸಫಾರಿಗರನ್ನು ಕರೆದೊಯ್ಯಲಾಗುತ್ತಿತ್ತು. ಅದರಲ್ಲೂ ಕಬಿನಿ ಹಿನ್ನೀರು ವ್ಯಾಪ್ತಿಯ ಕಾಕನಕೋಟೆ ಸಫಾರಿ ಕೇಂದ್ರದಿಂದ ಸಫಾರಿಗೆ ಹೋಗುವವರ ಸಂಖ್ಯೆ ಹೆಚ್ಚಾಗಿತ್ತು. ಈ ಹಿನ್ನೆಲೆಯಲ್ಲಿ ಕೆಲವರಿಗೆ ಟಿಕೆಟ್ ಸಿಗದೇ ನಿರಾಸೆ ಅನುಭವಿಸುವಂತಾಗಿತ್ತು. ಇದೀಗ ಹೊಸ ದರ ಮತ್ತು ಸಮಯದ ▶ 6ನೇ ಪುಟಕ್ಕೆ



ಈ ಹೊಸ ದರ ಮತ್ತು ಸಮಯ ಸಫಾರಿಗರಿಗೆ ಪೂರಕವಾಗಿರುವುದರೊಂದಿಗೆ ಸಫಾರಿಗೆ ತೆರಳುವವರಿಗೆ ವ್ಯವಸ್ಥೆಯನ್ನು ಸರಳೀಕರಣಗೊಳಿಸಲು 3 ಸಫಾರಿ ಕೇಂದ್ರದಲ್ಲೂ ತಲಾ 2 ಗಂಟೆ ಸಫಾರಿ ಅವಧಿಯನ್ನು ನಿಗದಿ ಮಾಡಲಾಗಿದೆ. ಈ ಹಿಂದೆ ಲೆನ್ಸ್ ಇಲ್ಲದ ಕ್ಯಾಮರಾ ತೆಗೆದುಕೊಂಡು ಬಂದರೂ ಶುಲ್ಕ ಪಾವತಿಸಬೇಕಾಗಿತ್ತು. ಈಗ 200 ಎಂಎಂ ಮೇಲ್ಪಟ್ಟ ಲೆನ್ಸ್‌ಗೆ ಮಾತ್ರ ಶುಲ್ಕ ಪಾವತಿಸಬೇಕಾಗಿದೆ. ಈ ಹೊಸ ಆದೇಶ ಜೂನ್ 1ರಿಂದಲೇ ಜಾರಿಗೊಳಿಸಲಾಗಿದೆ.

ಪಶ್ಚಿಮಘಟ್ಟದ ಧಾರಣಾ ಸಾಮರ್ಥ್ಯ ವರದಿಗೆ ಸೂಚನೆ

ಬೆಂಗಳೂರು: ದಕ್ಷಿಣ ಕನ್ನಡ, ಕೊಡಗು ಮೊದಲಾದ ಭಾಗದಲ್ಲಿ ಮುಂಗಾರು ಪೂರ್ವ ಮಳೆಗೆ ಭೂಕುಸಿತಗಳು ಸಂಭವಿಸುತ್ತಿದ್ದು, ಪಶ್ಚಿಮ ಘಟ್ಟದ ಧಾರಣಾ ಸಾಮರ್ಥ್ಯ ಅಧ್ಯಯನ ನಡೆಸಿ ಮೂರು ತಿಂಗಳ ಒಳಗೆ ವರದಿ ಸಲ್ಲಿಸುವಂತೆ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಅರಣ್ಯ ಸಚಿವ ಈಶ್ವರಖಂಡ್ರೆ ಸೂಚಿಸಿದ್ದಾರೆ. ▶ 6ನೇ ಪುಟಕ್ಕೆ



ಪ.ಜಾತಿಗಳಿಗೆ ಒಳ ಮೀಸಲಾತಿ ಸಮೀಕ್ಷೆ: ವಿಶೇಷ ಶಿಬಿರದ ಅವಧಿ ವಿಸ್ತರಣೆ

ಬೆಂಗಳೂರು: ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ಕಲ್ಪಿಸಲು ನಡೆಸುತ್ತಿರುವ ಸಮಗ್ರ ಸಮೀಕ್ಷೆಯ ವಿಶೇಷ ಶಿಬಿರಗಳ ಅವಧಿಯನ್ನು ಜೂ.6ರವರೆಗೆ, ಆನ್‌ಲೈನ್ ನೋಂದಣಿಯನ್ನು ಜೂ.8ರವರೆಗೆ ವಿಸ್ತರಿಸಲಾಗಿದೆ. ಮನೆ–ಮನೆಗೆ ತೆರಳಿ ಮಾಹಿತಿ ಸಂಗ್ರಹಿಸುವ ಹಂತ ಈಗಾಗಲೇ ಕೊನೆಗೊಂಡಿದೆ. ಈ ಹಂತದಲ್ಲಿ ಮಾಹಿತಿ ನೀಡದೆ ಇದ್ದವರು, ಮಾಹಿತಿ ತಪ್ಪಾದವರು ವಿಶೇಷ ಶಿಬಿರಗಳಿಗೆ ತೆರಳಿ ಅಥವಾ ಆನ್‌ಲೈನ್ ಮೂಲಕ ನೋಂದಣಿ ಮಾಡಿಸಲು ಅವಕಾಶ ಕಲ್ಪಿಸಲಾಗಿದೆ. ಈ ಎರಡೂ ಹಂತದ ಸಮೀಕ್ಷೆಗಳ ಅವಧಿ ಭಾನುವಾರ ಕೊನೆಯಾಗಬೇಕಿತ್ತು ನ್ಯಾಯಮೂರ್ತಿ ನಾಗಮೋಹನದಾಸ್ ಅಧ್ಯಕ್ಷತೆಯ ಏಕಸದಸ್ಯ ವಿಚಾರಣಾ ಆಯೋಗವು ಈ ಬಗ್ಗೆ ಪ್ರಕಟಣೆ ಹೊರಡಿಸಿದೆ.

ವಿಧಾನಸೌಧ ಗೈಡೆಡ್ ಟೂರ್ ಆರಂಭ, ಮೊದಲ ದಿನವೇ ಭರ್ಜರಿ ರೆಸ್ಪಾನ್ಸ್

ಭವ್ಯ ಕಟ್ಟಡ ನೋಡಿ ಕಣ್ಮನ ತುಂಬಿಕೊಂಡ ಪ್ರವಾಸಿಗರು



ಬೆಂಗಳೂರು ವಿಧಾನಸೌಧ ಗೈಡೆಡ್ ಟೂರ್ ಭಾನುವಾರ ಆರಂಭವಾಯಿತು.

ಬೆಂಗಳೂರು, ಜೂ.1– ವಿಧಾನಸೌಧ ಗೈಡೆಡ್ ಟೂರ್ ಭಾನುವಾರ ಆರಂಭವಾಗಿದ್ದು, ಮೊದಲ ದಿನವೇ ಭರ್ಜರಿ ರೆಸ್ಪಾನ್ಸ್ ಸಿಕ್ಕಿದೆ. ಈಗ ನೀವು ವಿಧಾನಸೌಧದ ಒಳಗೆ ಹೋಗಬಹುದು, ಅದರೊಳಗೆಲ್ಲ ಸುತ್ತಾಡಬಹುದು. ಆ ಭವ್ಯ ಕಟ್ಟಡವನ್ನು ಸ್ಪರ್ಶಿಸಬಹುದು. ಫೋಟೋ, ಸೆಲ್ಫಿ ತೆಗೆಯಬಹುದು.

ಬೆಂಗಳೂರಿನಲ್ಲೇ ಅತ್ಯಂತ ಆಕರ್ಷಣೆ ಕೇಂದ್ರವೆಂದರೆ ಅದು ವಿಧಾನಸೌಧ ರಾಜಧಾನಿಗೆ ಯಾರೇ ಬಂದರೂ ವಿಧಾನಸೌಧ ನೋಡದೇ ಹೋಗುವವರು ಅಪರೂಪ. ವಿಧಾನಸೌಧದ ಒಳಗೆ ಹೋಗಬೇಕು. ▶ 6ನೇ ಪುಟಕ್ಕೆ

ಮೈಸೂರಲ್ಲಿ ಯೋಗ ಧನುಷ್ ಪೂರ್ವಭಾವಿ ಯೋಗ ಪ್ರದರ್ಶನ

ಮೈಸೂರು, ಜೂ.1(ಎಂಟಿವೈ)– ಮೈಸೂರಲ್ಲಿ ಜೂ.21ರಂದು ನಡೆಸಲು ಉದ್ದೇಶಿಸಿರುವ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಹಿನ್ನೆಲೆಯಲ್ಲಿ ಭಾನುವಾರ ಲಲಿತಮಹಲ್ ಪ್ಯಾಲೇಸ್ ಆವರಣದಲ್ಲಿ ಆಯೋಜಿಸಿದ್ದ 'ಯೋಗ ಧನುಷ್' ಪೂರ್ವಭಾವಿ ಯೋಗ ಪ್ರದರ್ಶನ ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ಯೋಗಪಟುಗಳು ಪಾಲ್ಗೊಂಡು ಗಮನ ಸೆಳೆದರು.

ಅಂತರರಾಷ್ಟ್ರೀಯ ಯೋಗ ದಿನವನ್ನು ಜೂ.21ರಂದು ವಿಶ್ವದಾದ್ಯಂತ ಆಚರಿಸುತ್ತಿದ್ದು, ಭಾರತದಲ್ಲೂ ಈ ಬಾರಿ ಯೋಗ ದಿನವನ್ನು ಸಂಭ್ರಮದಿಂದ ಆಚರಿಸಲು ನಿರ್ಧರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಭಾನುವಾರ ಜಿಲ್ಲಾಡಳಿತ, ಜಿಪಂ, ಆಯುಷ್ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಲಲಿತಮಹಲ್ ಪ್ಯಾಲೇಸ್ ಆವರಣದಲ್ಲಿ ಆಯೋಜಿಸಿದ್ದ ಯೋಗ ಧನುಷ್ ಕಾರ್ಯಕ್ರಮದಲ್ಲಿ ಮೈಸೂರಿನ ವಿವಿಧ ಯೋಗ ಶಿಕ್ಷಣ ಸಂಸ್ಥೆಗಳ ಯೋಗಪಟುಗಳು ಪಾಲ್ಗೊಂಡು, ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾಡುವ ಯೋಗಾಸನ ಪ್ರದರ್ಶಿಸಿದರು.

ಆಯುಷ್ ಆರೋಗ್ಯ ಮಂದಿರದ ಯೋಗ ತರಬೇತುದಾರರು ಯೋಗಾಸನಗಳನ್ನು ಹೇಳಿಕೊಟ್ಟರು. ಮೊದಲಿಗೆ ಒಂದು ನಿಮಿಷ ಪ್ರಾರ್ಥನೆ ಸಲ್ಲಿಸಲಾಯಿತು. ನಂತರ ನಾಲ್ಕು ನಿಮಿಷಗಳ ಕಾಲ ಚಾಲನೆಗೆ ▶ 6ನೇ ಪುಟಕ್ಕೆ



ಮೈಸೂರಿನ ಲಲಿತಮಹಲ್ ಅರಮನೆ ಆವರಣದಲ್ಲಿ ನಡೆದ ಯೋಗ ಧನುಷ್ ಕಾರ್ಯಕ್ರಮದ ದೃಶ್ಯ.

> ಅಂತರರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಭಾನುವಾರ 'ಯೋಗ ಧನುಷ್' ಕಾರ್ಯಕ್ರಮ ನಡೆಸಲಾಗಿದೆ. ಯೋಗ ದಿನ ಪೂರ್ವಭಾವಿಯಾಗಿ ಯೋಗ ಧನುಷ್, ಯೋಗ ಧ್ಯಾನ, ಹಸಿರು ಯೋಗ, ಯೋಗ ಅನ್ ಪ್ಲಗ್ ಎಂದು ನಾಲ್ಕು ಕಾರ್ಯಕ್ರಮ ಆಯೋಜಿಸಲು ಉದ್ದೇಶಿಸಲಾಗಿದೆ. ಜೂನ್ 21ರಂದು ಹೆಚ್ಚಿನ ಸಂಖ್ಯೆಯಲ್ಲಿ ಯೋಗಪಟುಗಳನ್ನು ಸೇರಿಸಿ ಯೋಗ ಪ್ರದರ್ಶನ ಏರ್ಪಡಿಸಲು ಕ್ರಮ ಕೈಗೊಳ್ಳಲಾಗಿದೆ. **–ಡಾ.ಸಿ.ರೇಣುಕಾದೇವಿ, ಜಿಲ್ಲಾ ಆಯುಷ್ ಅಧಿಕಾರಿ.**

ಮಿಮ್ಸ್ ಆಸ್ಪತ್ರೆಯಲ್ಲಿ ಮಗು ಸಾವು; ವೈದ್ಯರ ನಿರ್ಲಕ್ಷ್ಯ ಆರೋಪ

• ಕುಟುಂಬಸ್ಥರು, ಸಂಘ–ಸಂಸ್ಥೆಗಳಿಂದ ಆಸ್ಪತ್ರೆ ಮುಂದೆ ಪ್ರತಿಭಟನೆ • ಕೆ.ಆರ್.ಆಸ್ಪತ್ರೆಯಲ್ಲಿ ಮಗುವಿನ ಮರಣೋತ್ತರ ಪರೀಕ್ಷೆ

ಮಂಡ್ಯ, ಜೂ.1– ಸಂಚಾರ ಪೊಲೀಸರ ನಿರ್ಲಕ್ಷ್ಯದಿಂದ ಮೂರೂವರೆ ವರ್ಷದ ಬಾಲಕಿ ಸಾವನ್ನಪ್ಪಿದ ಘಟನೆ ಮಾಸುವ ಮುನ್ನವೇ ಇದೀಗ ವೈದ್ಯಾಧಿಕಾರಿಗಳ ನಿರ್ಲಕ್ಷ್ಯಕ್ಕೆ 7 ವರ್ಷದ ಬಾಲಕಿ ಸಾವನ್ನಪ್ಪಿದೆ ಎಂಬ ಆರೋಪ ಮಂಡ್ಯದಲ್ಲಿ ಕೇಳಿಬಂದಿದೆ. ಮಿಮ್ಸ್ ವೈದ್ಯರ ನಿರ್ಲಕ್ಷ್ಯದ ವಿರುದ್ಧ ಕುಟುಂಬಸ್ಥರ ಜೊತೆ ಹಲವು ಸಂಘಟನೆಗಳು ಪ್ರತಿಭಟನೆ ನಡೆಸಿವೆ.

ಮಳವಳ್ಳಿ ತಾಲೂಕಿನ ನೆಲ್ಲೂರು ಗ್ರಾಮದ ನಿಂಗರಾಜು–ರಂಜಿತಾ ದಂಪತಿ ಪುತ್ರಿ ಸಾನ್ವಿ(7) ಮೃತಪಟ್ಟ ಬಾಲಕಿ. ಈಕೆ ಗ್ರಾಮದಲ್ಲಿ ಆಟವಾಡುವಾಗ ಟೈಲ್ಸ್ ಬಿದ್ದು ಬಾಲಕಿಯ ಪಾದದ ಮೂಳೆ ಮುರಿದಿತ್ತು. ಉತ್ತಮ ಚಿಕಿತ್ಸೆ ಸಿಗುತ್ತದೆ ಎಂಬ ನಿರೀಕ್ಷೆ ಇಟ್ಟುಕೊಂಡು ಪೋಷಕರು ಬಾಲಕಿಯನ್ನು ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ಮೂಳೆ ಸರಿಯಾಗಬೇಕಾದರೆ ಕೂಡಲೇ ಆಪರೇಷನ್ ಮಾಡಬೇಕು ಎಂದು ವೈದ್ಯರು ಸಲಹೆ ನೀಡಿದ್ದಾರೆ. ಅದರಂತೆ ಸಾನ್ವಿಗೆ 29ರ ರಾತ್ರಿಯೇ ಆಪರೇಷನ್ ಮಾಡಿದ್ದಾರೆ.

ಶುಕ್ರವಾರ ಬೆಳಗ್ಗೆ ಬಾಲಕಿಯ ಆರೋಗ್ಯದಲ್ಲಿ ಏರುಪೇರಾಗಿತ್ತು. ಕೂಡಲೇ ತುರ್ತು ನಿಗಾ ಘಟಕದಲ್ಲಿ ಬಾಲಕಿಗೆ ಚಿಕಿತ್ಸೆ ನೀಡಲಾಗುತ್ತಿತ್ತು. ಶನಿವಾರ ಬೆಳಿಗ್ಗೆ ಡ್ರಿಪ್ ಮೂಲಕ ಔಷಧ ನೀಡುತ್ತಿದ್ದಂತೆ ಬಾಲಕಿ ಪ್ರಜ್ಞಾಹೀನ ಸ್ಥಿತಿಗೆ ತಲುಪಿ, ಶನಿವಾರ ರಾತ್ರಿ ಮಗು ಸಾವನ್ನಪ್ಪಿರುವ ಬಗ್ಗೆ ವೈದ್ಯರು ಪೋಷಕರಿಗೆ ಮಾಹಿತಿ ನೀಡಿದರು.



ಮಿಮ್ಸ್ ವೈದ್ಯರ ನಿರ್ಲಕ್ಷ್ಯದ ವಿರುದ್ಧ ಕುಟುಂಬಸ್ಥರು, ಹಲವು ಸಂಘಟನೆಗಳು ಪ್ರತಿಭಟನೆ ನಡೆಸಿದವು.



ಮೃತಪಟ್ಟ ಬಾಲಕಿ ಸಾನ್ವಿ

ವಾರದಲ್ಲಿ 2ನೇ ಮಗು ಸಾವು

ಮಂಡ್ಯ ನಗರದಲ್ಲಿ ವಾರದ ಅಂತರದಲ್ಲಿ 2ನೇ ಮಗು ಸಾವನ್ನಪ್ಪಿರುವ ಘಟನೆ ನಡೆದಿದೆ. ಸಂಚಾರ ಪೊಲೀಸರು ವಾಹನ ತಪಾಸಣೆ ನಡೆಸುವಾಗ ನಿರ್ಲಕ್ಷ್ಯದಿಂದ ಬೈಕ್ ಅಡ್ಡಗಟ್ಟಿದ್ದರಿಂದ ಮೇ 26ರಂದು ಮದ್ದೂರು ತಾಲೂಕಿನ ಗೊರವನಹಳ್ಳಿಯ ಅಶೋಕ್, ವಾಣಿ ದಂಪತಿ ಪುತ್ರಿ ಮೂರು ವರ್ಷದ ರಿತೀಕ್ಷಾ ಬೈಕ್‌ನಿಂದ ಬಿದ್ದು ಸಾವನ್ನಪ್ಪಿತ್ತು. ಇದೀಗ ಮಿಮ್ಸ್ ವೈದ್ಯರ ನಿರ್ಲಕ್ಷ್ಯದಿಂದ 7 ವರ್ಷದ ಬಾಲಕಿ ಸಾವನ್ನಪ್ಪಿದೆ.

ಪೊಲೀಸರಿಗೆ ಮೊದಲು ಮಾಹಿತಿ: ಮಗು ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಪೋಷಕರಿಗೆ ಮಾಹಿತಿ ನೀಡುವ ಮುನ್ನವೇ ಪೊಲೀಸರಿಗೆ ವೈದ್ಯರಿಂದ ಮಾಹಿತಿ ನೀಡಲಾಗಿತ್ತು. ಇದು ಸಾಕಷ್ಟು ಅನುಮಾನಗಳಿಗೆ ಕಾರಣವಾಗಿದೆ ಎಂದು ಪೋಷಕರು ಆರೋಪಿಸಿದ್ದಾರೆ. ಅಲ್ಲದೇ, ವೈದ್ಯರ ನಿರ್ಲಕ್ಷ್ಯವೇ ಸಾವಿಗೆ ಕಾರಣ ಎಂದು ಬಾಲಕಿಯ ಪೋಷಕರು ದೂರುಗಳ ಸುರಿಮಳೆಗೈದರು.

ಆರ್‌ಎಂಒ ಉಡಾಫೆ: ಆಸ್ಪತ್ರೆಯ ಆರ್‌ಎಂಒ ದರ್ಶನ್ ಅವರು, ಮಗು ಸಾವಿನ ಬಗ್ಗೆ ಪೋಷಕರು ವಿಚಾರಿಸಿದರೆ ಮಗು ಅಂಗಾಂಗ ವೈಫಲ್ಯದಿಂದ ಸಾವನ್ನಪ್ಪಿದೆ. ಬೇಕಾದರೆ ತನಿಖೆ ಮಾಡಿಸಿಕೊಳ್ಳಿ ಎಂದು ಉಡಾಫೆ ಉತ್ತರ ನೀಡುತ್ತಾರೆ. ಸಾವಿನ ಬಗ್ಗೆ ನಮಗೆ ಮೊದಲು ಮಾಹಿತಿ ನೀಡುವ ಮುನ್ನ ಪೊಲೀಸರಿಗೆ ನೀಡಿದ್ದೇಕೇ ಎಂದು ಪೋಷಕರು, ಪ್ರತಿಭಟನಾಕಾರರು ಪ್ರಶ್ನಿಸಿದರು.

> **ಬಾಲಕಿ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ಪೋಷಕರು, ಸಂಬಂಧಿಕರ ಆಕ್ರಂದನ ಹೇಳತೀರದಾಗಿತ್ತು. ಆಪರೇಷನ್ ಆದ ಮೇಲೆ ಮಗಳನ್ನು ಮಾತನಾಡಿಸಿದ್ದೆ. ಮಗಳೇ ಈಗಾಯ್ತಲ್ಲ ಎಂದು ಕಣ್ಣೀರು ಹಾಕಿದ್ದೆ. ಆಗ ಮಗಳು ಸಾನ್ವಿ ಬೇಗ ಹುಷಾರಾಗ್ತಿನಿ ಅಮ್ಮ ಎಂದಿದ್ದಳು. ನನ್ನ ಕಣ್ಣೀರು ಒರೆಸಿ ನಿನ್ನನ್ನ ಚೆನ್ನಾಗಿ ನೋಡ್ಕೊಳ್ತೀನಿ ಅಮ್ಮ ಅಂದ್ಲೂ. ನನಗೆ ಒಬ್ಬಳೆ ಮಗಳು ಇದ್ದಿದ್ದು ಎಂದು ಮಗು ತಾಯಿ ರಂಜಿತಾ ಕಣ್ಣೀರು ಹಾಕಿದರು.**

ವೈದ್ಯ ವಿದ್ಯಾರ್ಥಿಗಳಿಂದ ಚಿಕಿತ್ಸೆ

> **ವೈದ್ಯ ವಿದ್ಯಾರ್ಥಿಗಳಿಂದ ಚಿಕಿತ್ಸೆ ನೀಡಿದ್ದೇ ಬಾಲಕಿ ಸಾವಿಗೆ ಕಾರಣ. ಮಿಮ್ಸ್‌ನಲ್ಲಿ ತಜ್ಞ ವೈದ್ಯರಿಗಿಂತ ಕಲಿಯುವ ವಿದ್ಯಾರ್ಥಿಗಳೇ ಹೆಚ್ಚು ಚಿಕಿತ್ಸೆ ನೀಡುತ್ತಾರೆ. ಇದರಿಂದ ಮಗುವಿನ ಆರೋಗ್ಯದಲ್ಲಿ ಏರುಪೇರು ಉಂಟಾಗಿದೆ. ಯಾವ ವೈದ್ಯರು ಯಾವ ಔಷಧ ನೀಡಿದ್ದಾರೆ. ಸಾವಿಗೆ ಏನು ಕಾರಣ ಎಂಬುದನ್ನು ಬಹಿರಂಗಪಡಿಸಬೇಕು. –ಪ್ರತಿಭಟನಾಕಾರರು**

ವಿವಿಧ ಸಂಘಟನೆಗಳಿಂದ ಪ್ರತಿಭಟನೆ; ಸಚಿವ, ಡಿಸಿ ಬರುವಂತೆ ಪಟ್ಟು: ಬಾಲಕಿಯ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ನೆಲ್ಲೂರು ಗ್ರಾಮಸ್ಥರು ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಮುಖಂಡರು ಮಿಮ್ಸ್ ಆಸ್ಪತ್ರೆ ಮುಂದೆ ಜಮಾಯಿಸಿ ಪ್ರತಿಭಟನೆ ನಡೆಸಿದರು. ಬಾಲಕಿಯ ಸಾವಿಗೆ ನ್ಯಾಯ ಸಿಗಬೇಕು. ತಪ್ಪಿತಸ್ಥರ ವೈದ್ಯರ ವಜಾ ಮಾಡಬೇಕು. ಮಿಮ್ಸ್ ನಿರ್ದೇಶಕ ಹಾಗೂ ಅಧೀಕ್ಷಕರ ವಿರುದ್ಧ ಕ್ರಮ ಕೈಗೊಳ್ಳಬೇಕು. ಬಾಲಕಿ ಕುಟುಂಬಕ್ಕೆ ಪರಿಹಾರ ನೀಡಬೇಕು. ಅಲ್ಲಿವರೆಗೂ ಮಗುವಿನ ಶವ ಪರೀಕ್ಷೆ ನಡೆಸಲು ಬಿಡುವುದಿಲ್ಲ. ಕೂಡಲೇ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಜಿಲ್ಲಾಧಿಕಾರಿ ಡಾ.ಕುಮಾರ ಸ್ಥಳಕ್ಕೆ ಬಂದು ವೈದ್ಯರ ವಿರುದ್ಧ ಕ್ರಮ ಹಾಗೂ ಬಾಲಕಿ ಕುಟುಂಬಕ್ಕೆ ▶ 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಕಳ್ಳ ಮನೆಯೊಂದಕ್ಕೆ ಕಳ್ಳತನಕ್ಕೆ ಹೋದಾಗ ತಿಜೋರಿ ಮೇಲೆ ಬರೆದಿತ್ತು. 'ತಿಜೋರಿ ಮುರಿಯುವ ಅವಶ್ಯಕತೆ ಇಲ್ಲ, ಬಟನ್ ಒತ್ತಿದರೆ ತೆರೆದುಕೊಳ್ಳುತ್ತದೆ' ಅಂತ.

ಕಳ್ಳ ಖುಷಿಯಿಂದ ಬಟನ್ ಒತ್ತಿದ. ತಕ್ಷಣ ಪೊಲೀಸರು ಬಂದು ಬಂಧಿಸಿದರು.

ಪೊಲೀಸರು : ಈಗ ಏನು ಅನಿಸ್ತಾ ಇದೆ.

ಕಳ್ಳ : ನಮ್ಮವ್ವನ ಆಣೆಗೂ ಮನುಷ್ಯತ್ವದ ಮೇಲೆ ಇದ್ದ ನಂಬಿಕೆನೇ ಹೋಗಿಬಿಡ್ತು ಸರ್!

ಮೈಸೂರು ಮಿತ್ರ
ಸೋಮವಾರ 2 ಜೂನ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

"ಜೀವನದಲ್ಲಿ ನಿಮಗೆ ನೋವೇ ಆಗದಿದ್ದರೆ, ಸುಖದ ಮಹತ್ವವೇ ಗೊತ್ತಾಗುವುದಿಲ್ಲ. ತಪ್ಪುಗಳನ್ನು ಮಾಡದಿದ್ದರೆ ಯಾವ ಸಂಗತಿಗಳನ್ನೂ ಕಲಿಯಲಾಗದು. ಬದುಕಿನಲ್ಲಿ ಸೋಲದ ಹೊರತು ಯಶಸ್ಸಿನ ಮಹತ್ವ ತಿಳಿಯುವುದಿಲ್ಲ. ಬದುಕಿನಲ್ಲಿ ಹಿನ್ನಡೆಗಳು ಬಹು ದೊಡ್ಡ ಪಾಠಗಳನ್ನು ಹೇಳುತ್ತವೆ..."

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಕೂತು ತಿಂದರೆ ಕುಡಿಕೆ ಹೊನ್ನು ಸಾಲದು'

ನಿಮ್ಮ ಪತ್ರಗಳು

ಜನೌಷಧ ಕೇಂದ್ರಗಳು ಯಥಾಸ್ಥಿತಿ ಇರಲಿ

ಮಾನ್ಯರೆ,

ಜನೌಷಧಿ ಕೇಂದ್ರದಲ್ಲಿ ಬಡವರ ಕೈಗೆಟಕುವ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಔಷಧಿಗಳು ದೊರಕುತ್ತಿದ್ದುದು ಸರಿಯಷ್ಟೇ, ಆದರೆ ಕಾಂಗ್ರೆಸ್ ಸರ್ಕಾರ ಏಕಾಏಕಿ ಸರ್ಕಾರಿ ಆಸ್ಪತ್ರೆಯ ಆವರಣದಲ್ಲಿ ಇರುವ ಜನೌಷಧ ಕೇಂದ್ರಗಳನ್ನು ತೆರವುಗೊಳಿಸಲು ಆದೇಶ ನೀಡಿರುವುದು ದುರದೃಷ್ಟಕರ ಸಂಗತಿ.

ರಾಜ್ಯದಲ್ಲಿ ಸುಮಾರು 1500 ಜನೌಷಧಿ ಕೇಂದ್ರಗಳಿದ್ದು, ಅವುಗಳಿಂದ ಸುಮಾರು 12 ಲಕ್ಷ ಜನರು ಕಡಿಮೆ ದರದಲ್ಲಿ ಔಷಧಿ ಖರೀದಿ ಮಾಡುತ್ತಿರುವುದು ನಿಜ ಸಂಗತಿ, ಇನ್ನೂ ಹೆಚ್ಚಿನ ಜನೌಷಧಿ ಕೇಂದ್ರಗಳಿಗೆ ಬೇಡಿಕೆಯಿದ್ದು ಅವುಗಳತ್ತಾ ಗಮನಹರಿಸದೇ, ಇರುವ ಕೇಂದ್ರಗಳನ್ನು ತೆರವುಗೊಳಿಸಲು ಆದೇಶ ನೀಡಿರುವುದು ಎಷ್ಟು ಸರಿ ಎಂಬುದು ತಿಳಿಯುತ್ತಿಲ್ಲ.

ರಾಜ್ಯ ಅಥವಾ ಕೇಂದ್ರ ಸರ್ಕಾರಗಳೇ ಆಗಲಿ ಜನರಿಗೆ ಪ್ರಸ್ತುತ ಇರುವ ಅನುಕೂಲಕರವಾದ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಬೇಕೆ ಹೊರತು ಅವುಗಳನ್ನು ಅವಸಾನದತ್ತ ಕೊಂಡೊಯ್ಯಲು ಮುಂದಾಗುವುದು ಸೂಕ್ತವಾದುದಲ್ಲ. ರಾಜ್ಯ ಸರ್ಕಾರ ಆದಷ್ಟು ಬೇಗನೆ ಈ ಆದೇಶವನ್ನು ಹಿಂದಕ್ಕೆ ಪಡೆದು ಸಾಮಾನ್ಯ ಜನರಿಗೆ ನೆರವಾಗುವುದು ಒಳಿತು.

– ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಸೆಲೆಬ್ರೆಟಿಗಳ ಹುಚ್ಚಾಟಗಳಿಗೆ ಧಿಕ್ಕಾರ

ಮಾನ್ಯರೆ,

ಕನ್ನಡಿಗರ ಸಹನೆ, ಸೌಜನ್ಯ, ಉದಾರತೆ, ಸ್ವಾಭಿಮಾನವನ್ನು ಅಣಕಿಸುವ, ಕೆಣಕುವ ಚೇಷ್ಟೆ ದಿನೇದಿನೆ ಹೆಚ್ಚಾಗುತ್ತಿದೆ. ಕನ್ನಡಿಗರಿಗೆ ಅನ್ಯಭಾಷಿಕರಿಂದ ಮತ್ತು ತಮ್ಮವರೆ ಆದ ಸಮಯಸಾಧಕ ರಾಜಕಾರಣಿ, ಸಿನಿಮಾ ನಟರು, ಬುದ್ಧಿಜೀವಿಗಳಿಂದ ಏಕಕಾಲದಲ್ಲಿ ಅವಮಾನವಾಗುತ್ತಿದೆ. ತಾಯ್ನೆಲ ಮತ್ತು ನುಡಿಯ ಬಗ್ಗೆ ಅತೀವ ಕಕ್ಕುಲತೆ ಶ್ರದ್ಧೆ, ಭಕ್ತಿ ಪ್ರೀತಿ ಇಟ್ಟುಕೊಂಡಿರುವವರ ಬಗ್ಗೆ ಅಸಡ್ಡೆ ಮಾತುಗಳು, ತಮ್ಮ ಮನೆ ಮಕ್ಕಳು ಸಂಸಾರವನ್ನೆಲ್ಲಾ ಬಿಟ್ಟು ತಾಯಿನುಡಿಯ ಸಂರಕ್ಷಣೆಗಾಗಿ ದುಡಿಯುವವರ ಮೇಲೆ ಅಡ್ಡಾದಿಡ್ಡಿ ಕೇಸುಗಳನ್ನು ಜಡಿದು ಕೋರ್ಟ್‌ಗೆ ಅಲೆಯುವಂತೆ ಮಾಡಿ ಕನ್ನಡ ಹೋರಾಟಗಾರರ ಆತ್ಮಸ್ಥೈರ್ಯವನ್ನು ನಾಶ ಮಾಡುತ್ತಾ ಸರ್ಕಾರ ಮಾತ್ರ ಗುಮ್ಮನಗುಸಕನಂತೆ ಕುಳಿತಿದೆ.

ಸರ್ಕಾರಿ ಶಾಲೆಗಳನ್ನು ಸಾಲುಸಾಲು ಮುಚ್ಚಿದಾಗ, ನೆಲ, ಜಲ ಇತ್ಯಾದಿ ಭೌತಿಕ ಸಂಪನ್ಮೂಲಗಳನ್ನು ಅನ್ಯಭಾಷಿಕರು ಕಬ್ಜ ಮಾಡುವಾಗ ಕನ್ನಡಪರ ಸಂಘಟನೆಗಳು ಪ್ರಾಮಾಣಿಕವಾಗಿ ಹೋರಾಡುತ್ತಿವೆಯೇ ಹೊರತು ಸ್ಟಾರ್‌ಗಳು ಮತ್ತು ರಾಜಕಾರಣಿಗಳಲ್ಲ. ಸದ್ಯ ಇವರೆಲ್ಲ ಉದ್ಯಮಿಗಳು, ಶಾಲೆಗಳ ಓನರ್‌ಗಳು. ಇವರಿಗೆ ಯಾವ ಭಾಷೆಯವನು ಏನೆಂದರೇನು? ತಮಗೆ ಅನುಕೂಲವಾಗಿದ್ದರೆ ಸಾಕು.

ಒಂದಷ್ಟು ಜನರು ಕಮಲ್‌ಹಾಸನ್ ಹೇಳಿಕೆಯನ್ನು ಕೀರಲು ಸ್ವರದಲ್ಲಿ ಸಮರ್ಥಿಸಿಕೊಳ್ಳುತ್ತಿದ್ದಾರೆ. ಈ ಮೂರ್ಖತನಕ್ಕೆ ಏನು ಹೇಳಬೇಕೋ ತಿಳಿಯದು. ಏಕೆಂದರೆ ಈಗಾಗಲೆ ಕನ್ನಡ, ಕರ್ನಾಟಕ ತೀವ್ರ ಅಪಾಯದಲ್ಲಿದೆ. ಕರ್ನಾಟಕ ಮತ್ತು ಕನ್ನಡಿಗರ ವಿರುದ್ಧದ ಒಂದು ಸಣ್ಣ ಮಾತು ಕೂಡ ಮೈಮರೆತರೆ ದೊಡ್ಡ ಅಪಾಯವಾಗುವುದರಲ್ಲಿ ಸಂದೇಹವೇ ಇಲ್ಲ. ಈಗಾಗಲೆ ಸಾಕಷ್ಟು ಅನುಭವಿಸುತ್ತಿದ್ದೇವೆ. ಅವರಿಗೆಲ್ಲಾ ಕಾವೇರಿ ನೀರು ಮದ ತಂದಿದೆ.

ಸೊಕ್ಕು ಮುರಿಯುವಲ್ಲಿ ಉದಾಸೀನ ತೋರಿದರೆ ಕನ್ನಡದ ನೆಲಗಳೇ ಮಾಯವಾಗುತ್ತವೆ. ಸಾಂವಿಧಾನಿಕವಾಗಿಯೇ ನಮ್ಮದನ್ನು ಉಳಿಸಿಕೊಳ್ಳೋಣ. ಇವರ ತರ ನಾವು ದೇಶ ವಿಘಟನೆಯನ್ನು ಬಯಸಿಲ್ಲ, ಭಯೋತ್ಪಾದನೆಯನ್ನು ಬೆಂಬಲಿಸಿಲ್ಲ. ನಮ್ಮದು ಜೈ ಭಾರತ ಜನನಿಯ ತನುಜಾತೆ ಎನ್ನುತ್ತಾ ಸರ್ವ ಜನಾಂಗದ ಶಾಂತಿಯ ತೋಟ ನಿರ್ಮಿಸಿ ಮಾನವ ಜಾತಿ ತಾನೊಂದೆ ವಲಂ ಎಂದವರು. ನಮ್ಮ ಸಹನೆಗೂ ಮಿತಿಯಿದೆ ನಾವು ನಿಮ್ಮ ತಿಕ್ಕಲುತನವನ್ನು ಸಹಿಸುವುದಿಲ್ಲ ಎನ್ನುವುದನ್ನು ಮನವರಿಕೆ ಮಾಡಿಕೊಡಲಾದರು ಒಂದೇ ಧ್ವನಿಯಲ್ಲಿ ಶಿವರಾಜ್‌ಕುಮಾರ್, ಕಮಲ್‌ಹಾಸನ್ ಪ್ರಕರಣವನ್ನು ಖಂಡಿಸಲೇಬೇಕಿದೆ.

– ಬ್ಯಾರಾ. ಪ್ರಸನ್ನಕುಮಾರ್, ಬ್ಯಾಡರಹಳ್ಳಿ
ಕೃಷ್ಣರಾಜನಗರ ತಾಲೂಕು.

ನಿಷ್ಕ್ರಿಯಗೊಂಡ 'ದೇವರಾಜ ಅರಸು ಪೀಠ'

ಮಾನ್ಯರೆ,



ಕರ್ನಾಟಕ ಕಂಡ ಅಪರೂಪದ ರಾಜಕಾರಣಿ, ಹಿಂದುಳಿದ ವರ್ಗದ ಜನಪ್ರಿಯ ನಾಯಕ, ನಿಜವಾದ ಅರ್ಥದಲ್ಲಿ ಸಮಾಜವಾದ ಹರಿಕಾರ, ದಿವಂಗತ ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರ ಮಹತ್ವಾಕಾಂಕ್ಷಿ ಯೋಜನೆಯಾದ ಉಳುವವನೇ ಭೂಮಿ ಒಡೆಯ ಯೋಜನೆಯನ್ನು ದೇಶದಲ್ಲೇ ಕರ್ನಾಟಕ ರಾಜ್ಯದಲ್ಲಿ ಮೊದಲು ಅನುಷ್ಠಾನಕ್ಕೆ ತಂದ ಕೀರ್ತಿ ದಿವಂಗತ ಡಿ.ದೇವರಾಜ ಅರಸು ಅವರಿಗೆ ಸಲ್ಲುತ್ತದೆ. ಜೀತ ಪದ್ಧತಿ ನಿರ್ಮೂಲನೆ ಮಾಡಲು ಕಾನೂನು ಜಾರಿ ಮಾಡುವ ಮೂಲಕ ಹಿಂದುಳಿದ ವರ್ಗಗಳಿಗೆ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ಮೂಲಕ ಇಂದಿಗೂ ಜನಮಾನಸದಲ್ಲಿ ಉಳಿದಿದ್ದಾರೆ, ಸಮಗ್ರ ಕರ್ನಾಟಕವನ್ನು ಏಕೀಕರಣ ಮಾಡಿ, 'ಕರ್ನಾಟಕ' ಎಂದು ನಾಮಕರಣ ಮಾಡಿದ ಕೀರ್ತಿಯೂ ಅವರಿಗೆ ಸಲ್ಲುತ್ತದೆ.

ದಿವಂಗತ ಡಿ.ದೇವರಾಜ ಅರಸು ಅವರ ವಿಚಾರಧಾರೆ ಮತ್ತು ಅವರ ಆಶಯಗಳನ್ನು ಯುವ ಪೀಳಿಗೆಗೆ ಪರಿಚಯಿಸುವ ದೃಷ್ಟಿಯಿಂದ ಮೈಸೂರು ವಿಶ್ವವಿದ್ಯಾಲಯದಲ್ಲಿ ದಿವಂಗತ ರಾಮಕೃಷ್ಣ ಹೆಗಡೆ ಅವರು ಮುಖ್ಯಮಂತ್ರಿ ಆಗಿದ್ದಾಗ 'ದೇವರಾಜ ಅರಸು ಪೀಠ'ವನ್ನು ಸ್ಥಾಪಿಸಲಾಯಿತು. ಇದು ಪ್ರಾರಂಭದ ನಾಲ್ಕೈದು ವರ್ಷಗಳಲ್ಲಿ ಸಕ್ರಿಯವಾಗಿ ಕೆಲಸ ನಿರ್ವಹಿಸಿತು. ಆದರೆ ಇತ್ತೀಚಿನ ವರ್ಷಗಳಲ್ಲಿ ಈ ಪೀಠ ಸಂಪೂರ್ಣ ನಿಷ್ಕ್ರಿಯವಾಗಿದೆ. ಇದೇ ಜೂನ್ ತಿಂಗಳ 6ನೇ ತಾರೀಖಿಗೆ ದೇವರಾಜ ಅರಸು ಅವರ 43ನೇ ವರ್ಷದ ಪುಣ್ಯಸ್ಮರಣೆಯಾಗಿರುವುದರಿಂದ, ಈಗಲಾದರೂ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳು ದೇವರಾಜ ಅರಸು ಅವರ ಪೀಠವು ಪುನಃ ಸಕ್ರಿಯವಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಸೂಕ್ತ ಕ್ರಮ ಕೈಗೊಳ್ಳಬೇಕು,

– ಬೂಕನಕೆರೆ ವಿಜೇಂದ್ರ,
ಕುವೆಂಪುನಗರ, ಮೈಸೂರು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಡಿಜಿಟಲ್ ಉಪವಾಸ ಮಾಡೋಣ ಬನ್ನಿ!

ಡಿಜಿಟಲ್ ಉಪವಾಸ, ಇದೇನಿದು? ಇದಾವ ರೀತಿಯ ಉಪವಾಸ ಅನಿಸುತ್ತದೆ ಅಲ್ಲವೇ? ವಾರಕ್ಕೆ ಒಂದು ಹೊತ್ತು ಆಹಾರ ತ್ಯಜಿಸಿ ಉಪವಾಸ ಮಾಡಿದರೆ ದೈಹಿಕ ಆರೋಗ್ಯಕ್ಕೆ ಒಳ್ಳೆಯದು ಎಂದು ಆರೋಗ್ಯ ಶಾಸ್ತ್ರ ಹೇಳಿದರೆ ವಾರಕ್ಕೆ ಒಂದು ದಿನ ಡಿಜಿಟಲ್ ಉಪವಾಸ ಮಾಡಿದರೆ ದೇಹ ಹಾಗೂ ಮಾನಸಿಕ ಆರೋಗ್ಯಕ್ಕೆ ಒಳ್ಳೆಯದು ಎಂದು ಮನಃಶಾಸ್ತ್ರ ಹೇಳುತ್ತದೆ. ಹೌದು, ವಾರಕ್ಕೆ ಒಂದು ದಿನ ನಮ್ಮ ದೈನಂದಿನ ಆಪ್ತಮಿತ್ರರಾದ ಮೊಬೈಲ್ ಫೋನ್, ಟಿ.ವಿ., ಲ್ಯಾಪ್‌ಟಾಪ್, ಟ್ಯಾಬ್..... ನಂತಹ ಡಿಜಿಟಲ್ ಉಪಕರಣಗಳಿಂದ ಅಂತರ ಕಾಪಾಡಿಕೊಳ್ಳುವುದೇ ಡಿಜಿಟಲ್ ಉಪವಾಸ. ಇದು ಡಿಜಿಟಲ್ ಯುಗ. ಅಂಗಡಿಯಲ್ಲಿ ಬಿಲ್ ಪಾವತಿ ಮಾಡುವುದರಿಂದ ಹಿಡಿದು ಯುದ್ಧಕ್ಕೆ ಬಳಸುವ ಶಸ್ತ್ರಾಸ್ತ್ರಗಳ ನಿಯಂತ್ರಣವು ಡಿಜಿಟಲ್ ಟೆಕ್ನಾಲಜಿಯಿಂದ ನಡೆಯುತ್ತಿದೆ. ಆದರೂ, ಮನುಷ್ಯನ ಸಹಜ ಬದುಕಿಗೆ ಮಾರಕವಾಗಿರುವ, ಮಾನವೀಯ ಸಂಬಂಧಗಳಿಗೆ ತೊಡಕಾಗಿರುವ, ಕಣ್ಣಿನ ದೃಷ್ಟಿ ಅಷ್ಟೇ ಅಲ್ಲದೆ ಮನುಷ್ಯನ ಬದುಕಿನ ದೂರದೃಷ್ಟಿಯನ್ನು ಅಸ್ಪಷ್ಟ ಮಾಡಿಬಿಡುವ ಡಿಜಿಟಲ್ ಉಪಕರಣಗಳನ್ನು ಬಳಸದೇ ಆಗಾಗ್ಗೆ ದೂರ ಉಳಿಯುವ ಅಗತ್ಯವಿದೆ. ಡಿಜಿಟಲ್ ಉಪಕರಣಗಳಿಗೆ ಅಬಾಲವೃದ್ಧರಾಗಿ ಇಂದು ಅಡಿಕ್ಟ್ ಆಗಿದ್ದಾರೆ. ಯಾವ ಮಟ್ಟಿಗೆ ಎಂದರೆ ಮನೆಯಲ್ಲಿ Wife ಇಲ್ಲದಿದ್ದರೂ ಪರವಾಗಿಲ್ಲ, Wifi ಇಲ್ಲದಿದ್ದರೆ ನೀರಿನಿಂದ ಹೊರತೆಗೆದ ಮೀನಿನಂತಾಗುವ ಮಂದಿ ನಮ್ಮ ನಿಮ್ಮ ನಡುವೆ ಇದ್ದಾರೆ. ಮನೆಯ ಒಳಗಡೆ ಇದ್ದುಕೊಂಡು ಸದಾ ಪ್ರಪಂಚದ ಜೊತೆ ಸಂಪರ್ಕದಲ್ಲಿರುವ ಕೆಲವು ಜನ, ಮನೆಯ ಮಂದಿ ಜೊತೆಗೆ ಸಂಪರ್ಕ ಕಳೆದುಕೊಳ್ಳುತ್ತಿರುವುದು ವಿಡಂಬನೆಯೇ ಸರಿ!

> ಡಿಜಿಟಲ್ ಉಪಕರಣಗಳ ಅತಿಹೆಚ್ಚು ಬಳಕೆಯಿಂದ ಮಗ್ನತೆಯ ಅವಧಿ ಕಡಿಮೆ ಆಗುತ್ತಿದೆ. ಇಪ್ಪತ್ತು ವರ್ಷಗಳ ಹಿಂದೆ ಒಂದು ವಿಷಯದ ಕುರಿತಾಗಿ ಇದ್ದ 2.43 ನಿಮಿಷಗಳ ಮಗ್ನತೆಯ ಅವಧಿ ಇಂದು ಕೇವಲ 47 ಸೆಕೆಂಡ್‌ಗಳಿಗೆ ಬಂದಿದೆ. ಇದು ಟಿ.ವಿ. ಹಾಗೂ ಮೊಬೈಲ್ ಪರದೆ ವೀಕ್ಷಣೆಯಿಂದಾಗಿರುವ ದುಷ್ಪರಿಣಾಮ. ಗಂಟೆಗಟ್ಟಲೆ ಮೊಬೈಲ್‌ನಲ್ಲಿ ಮುಳುಗಿಹೋಗಿರುವ ವಿದ್ಯಾರ್ಥಿಗಳಲ್ಲಿ ಅತಿಹೆಚ್ಚು ಮಂದಿ ಒಂದು ಗಂಟೆ ಒಂದು ಕಡೆ ಕುಳಿತು ಮಗ್ನತೆಯಿಂದ ಪುಸ್ತಕ ಅಧ್ಯಯನ ಮಾಡಲು ಸಾಧ್ಯವಾಗದಷ್ಟು ಮಟ್ಟಕ್ಕೆ ಇದು ತಲುಪಿದೆ. ಮನುಷ್ಯನ ಮಗ್ನತೆ ಅಷ್ಟೇ ಅಲ್ಲ, ಅವನ ಕ್ರಿಯಾಶೀಲತೆಗೆ ಮಾರಕ. ಕ್ರಿಯೇಟಿವಿಟಿ ಇಲ್ಲದೆ, ಹೊಸ ಆಲೋಚನೆಗಳಿಗೆ ಮನಸ್ಸು ಮಾಡದೆ ಸೋಮಾರಿಗಳಾಗುತ್ತಿದ್ದಾರೆ. ಅನೇಕ ಬಹುಮುಖ್ಯ ಕೆಲಸಗಳನ್ನು ಮುಂದೂಡುವ ಪ್ರವೃತ್ತಿ ಮೊಬೈಲ್ ಬಳಕೆಯಿಂದ ಆಗುತ್ತಿದೆ ಎಂದು ಅಧ್ಯಯನವೊಂದು ತಿಳಿಸುತ್ತದೆ. ಸಂಬಂಧಗಳು ಹಾಳಾಗುತ್ತಿರುವುದು ಮೊಬೈಲ್ ಬಳಕೆಯಿಂದ ಎನ್ನಬಹುದು.

ಸಾಮಾಜಿಕ ಜಾಲತಾಣ ಎಂಬ ಮಾಯಾಜಾಲ ಇಂದು ಇಡೀ ಸಮಾಜಕ್ಕೆ ವ್ಯಾಪಿಸಿಬಿಟ್ಟಿದೆ. ಇದರಿಂದ ಶೇ.25 ಉಪಯೋಗವಿದ್ದರೆ, ಶೇ.75 ದುಷ್ಪರಿಣಾಮ ಉಂಟಾಗುತ್ತಿದೆ. ಎಳೆಯ ಮಕ್ಕಳಿಂದ ಹಿಡಿದು ವಯೋವೃದ್ಧರವರೆವಿಗೂ ಇದರ ಸೆಳೆತದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲದ ಮಟ್ಟಿಗೆ ಆಗಿದೆ. ಇಂದು ಅಕ್ಷರ ಜ್ಞಾನವಿಲ್ಲದವನು ಅವಿದ್ಯಾವಂತನಲ್ಲ, ಮೊಬೈಲ್ ಫೋನ್ ಬಳಕೆ ಮಾಡಲು ಬರದವನು ಅವಿದ್ಯಾವಂತ ಎನ್ನುವಂತಾಗಿದೆ. ಕೋವಿಡ್ ಕಾಲಘಟ್ಟದಲ್ಲಿ ಆನ್‌ಲೈನ್ ತರಗತಿಗಳಿಗೆ ಮೊಬೈಲ್ ಬಳಸಲು ಪ್ರಾರಂಭಿಸಿದ ಮಕ್ಕಳಿಗೆ ಹಾಗೂ ಮನೆಯಲ್ಲಿ ಸಮಯ ಕಳೆಯಲು ಮನರಂಜನೆಗೋಸ್ಕರ ಮೊಬೈಲ್, ಟಿ.ವಿ., ಮೊರೆ ಹೋಗಿದ್ದ ಪುರುಷರು ಹಾಗೂ ಮಹಿಳೆಯರಿಗೆ ಆ ನಂತರದ ವರ್ಷಗಳಲ್ಲಿ ಅವುಗಳೊಂದಿಗೆ ಬಿಡಿಸಲಾಗದ ಬಂಧ ಏರ್ಪಟ್ಟಿದೆ. ಇಂದಿಗೂ ಅನೇಕ ಆನ್‌ಲೈನ್ ತರಗತಿಗಳು ಮೊಬೈಲ್ ಫೋನ್‌ನಲ್ಲಿ ನಡೆಯುತ್ತಿವೆ. ಇಂದು ಹೆಚ್ಚಿನ ಸಂಖ್ಯೆಯ ಮಕ್ಕಳು ಕೈಯಲ್ಲಿ ಮೊಬೈಲ್ ಫೋನ್ ಇದ್ದರೆ ತಮ್ಮ ಸುತ್ತಲ ಪರಿಸರವನ್ನೇ ಮರೆಯುತ್ತಾರೆ. ನಿಸರ್ಗ ತಾಣಗಳಿಗೆ ಪಿಕ್‌ನಿಕ್ ಹೋದರೆ ಪ್ರಕೃತಿ ಸೌಂದರ್ಯವನ್ನು ಸವಿಯುವ ಬದಲು ಅಲ್ಲಿಯೂ ಮೊಬೈಲ್ ಫೋನ್‌ನಲ್ಲಿ ಮುಳುಗಿ ಹೋಗುವ ಅವಿವೇಕಿಗಳಾಗಿದ್ದಾರೆ. ಅವರಿಗೆ ಕೈಯಲ್ಲಿ ಫೋನ್ ಇದ್ದರೆ ಕೆಲವೊಮ್ಮೆ ಊಟ–ತಿಂಡಿಯೂ ಬೇಡವಾಗಿದೆ. ಎಷ್ಟೋ ಮನೆಗಳಲ್ಲಿ ಮೊಬೈಲ್ ಫೋನ್ ಬಳಕೆ ಕಡಿಮೆ ಮಾಡುವಂತೆ ಬುದ್ಧಿ ಮಾತು ಹೇಳಿದ ಹೆತ್ತವರ ಮೇಲೆ ಹಲ್ಲೆ ಮಾಡಿದ ಮಕ್ಕಳ ಕುರಿತಾದ ವರದಿಗಳಾಗಿವೆ. ಮಾನಸಿಕ ಅಸ್ವಸ್ಥರಂತೆ ವರ್ತಿಸುವ ಈ ಮಕ್ಕಳು ಮನೆಗೆ ಮಾರಿಯಾದರೆ, ದೇಶಕ್ಕೆ ಹೆಮ್ಮಾರಿಯಾಗುತ್ತಾರೆ.



ಸ್ಕ್ರೀನ್ ಟೈಮ್ ಎಂದರೆ ಮೊಬೈಲ್, ಟಿ.ವಿ., ಟ್ಯಾಬ್ ಇತ್ಯಾದಿ ಉಪಕರಣಗಳನ್ನು ನಾವು ವೀಕ್ಷಿಸುವ ಅವಧಿ. ದಿನವೊಂದಕ್ಕೆ ಮೂರು ಗಂಟೆಗೂ ಹೆಚ್ಚು ಸ್ಕ್ರೀನ್ ಟೈಮ್ ಹಾಗೂ 100ಕ್ಕೂ ಹೆಚ್ಚು ಬಾರಿ ಈ ಉಪಕರಣಗಳ ಸ್ಕ್ರೀನ್ ಟ್ಯಾಪ್ ಮಾಡಿದಲ್ಲಿ, ಇದರಿಂದ ಅನೇಕ ದೈಹಿಕ ಹಾಗೂ ಮಾನಸಿಕ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ. ಮೂರು ಗಂಟೆಗೂ ಹೆಚ್ಚು ಸ್ಕ್ರೀನ್ ಟೈಮ್ ಬಳಕೆ ಆದರೆ ಅದು ಅಸಹಜ ವರ್ತನೆಗೆ ಎಡೆಮಾಡಿ ಕೊಡುತ್ತದೆ. ಮಾನಸಿಕ ಸಮಸ್ಯೆಗಳ ಜೊತೆಗೆ ದೈಹಿಕವಾಗಿ ತೊಂದರೆಗಳು ಪ್ರಾರಂಭವಾಗುತ್ತವೆ. ತಜ್ಞರ ಪ್ರಕಾರ ಗಂಟೆಗಟ್ಟಲೆ ಮೊಬೈಲ್ ವೀಕ್ಷಿಸುವವರು ಮಾನಸಿಕ ಅಸ್ವಸ್ಥರಾಗುತ್ತಾರೆ. ಹುಚ್ಚು ಹಿಡಿಯುತ್ತದೆ ಅಂತಲ್ಲಾ, ಅದೊಂದು ಗೀಳಾಗಿ, ಮಾನಸಿಕ ಸ್ಥಿಮಿತತೆ ಏರುಪೇರಾಗುತ್ತದೆ. ಅತಿ ಹೆಚ್ಚು ಫೋನ್ ಬಳಸುವುದರಿಂದ ಅದರ ರೇಡಿಯೇಶನ್ ಕಣ್ಣಿಗೆ ಮಾರಕವಾಗುತ್ತದೆ. ರೆಟಿನಾ ಕ್ಯಾನ್ಸರ್ ಬರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ ಎಂದು ತಿಳಿಸಿದ್ದಾರೆ. ಅದರಲ್ಲೂ ಹೆಚ್ಚು ಮೊಬೈಲ್ ವೀಕ್ಷಿಸುವ ಎಳೆಯ ಮಕ್ಕಳಲ್ಲಿ ಕಿರಿಯ ವಯಸ್ಸಿಗೆ ದೃಷ್ಟಿದೋಷ ಕಂಡುಬರುತ್ತಿದೆ. ಸೆಲ್ಫಿ ಎಂಬ ಫೋಟೋ ಕ್ರೇಜ್ ಕೂಡ ಮಾನಸಿಕ ಅಸಮತೋಲನದ ಲಕ್ಷಣ ಎಂದು ತಜ್ಞರು ಹೇಳುತ್ತಾರೆ. ಎಷ್ಟೋ ಪೋಷಕರು ತಮ್ಮ ಮಕ್ಕಳಿಗೆ 'ಮೊಬೈಲ್ ಹುಚ್ಚು' ಎಂದೇ ದೂರುತ್ತಾರೆ, ನಿಜಕ್ಕೂ ಅದೊಂದು ಮಾದರಿಯ ಹುಚ್ಚೇ ಎಂಬುದು ವಿಪರ್ಯಾಸ.

ಎಷ್ಟೋ ಮಕ್ಕಳು ಬೆಂಗಳೂರಿನ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಪಡೆಯುವ ಮಟ್ಟಕ್ಕೆ ಈ ಹುಚ್ಚು ಹಿಡಿಯುತ್ತದೆ. ಇದೊಂದು ಅಪಾಯಕಾರಿ ಬೆಳವಣಿಗೆ. ಮೊಬೈಲ್ ಅತಿ ಹೆಚ್ಚು ಬಳಕೆಯಿಂದ ಮಾನಸಿಕ ಸಮಸ್ಯೆಗಳು ಅಷ್ಟೇ ಅಲ್ಲ, ದೈಹಿಕ ಚಟುವಟಿಕೆಗಳು ಕಡಿಮೆಯಾಗುವುದರಿಂದ ದೈಹಿಕ ಆರೋಗ್ಯವೂ ಸಹ ಹದಗೆಡುತ್ತದೆ. ಹಿಂದೆ ನಾಲ್ಕೈದು ಮಕ್ಕಳನ್ನು ಸಾಕುವುದು, ನಿಭಾಯಿಸುವುದು ಪೋಷಕರಿಗೆ ಕಷ್ಟವಾಗುತ್ತಿರಲಿಲ್ಲ. ಆದರೆ, ಇಂದು ಇರುವ ಒಂದು ಅಥವಾ ಎರಡು ಮಕ್ಕಳನ್ನು ಸಂಬಾಳಿಸುವುದು ಸವಾಲಿನ ಸಂಗತಿಯೇ ಸರಿ. ಇಂದು ಇನ್ನೂ ಶಾಲೆಗೆ ಹೋಗದ ಎಳೆಯ ಮಕ್ಕಳು ಸಹ ಮೊಬೈಲ್ ಫೋನ್ ಕೊಡದೆ ಊಟ–ತಿಂಡಿ ಮಾಡುವುದಿಲ್ಲ. ಇದರಲ್ಲಿ ಅನೇಕ ಪೋಷಕರ ತಪ್ಪು ಸಹ ಇದೆ. ಅವರು ತಮ್ಮ ಕೆಲಸಗಳ ಕಡೆ ಗಮನ ಕೊಡಬೇಕಾದ ಸಂದರ್ಭದಲ್ಲಿ ಮಕ್ಕಳಿಗೆ ಮೊಬೈಲ್ ಫೋನ್ ಕೊಟ್ಟು ಕೂರಿಸುತ್ತಾರೆ, ಮುಂದೆ ಅದು ಆ ಮಗುವಿಗೆ ಗೀಳಾಗುತ್ತದೆ. ಮುಂದೊಂದು ದಿನ ಅದನ್ನು ತಪ್ಪಿಸಲು ಹೆಣಗಾಡುತ್ತಾರೆ.

ಇಂದು ಎಷ್ಟೋ ವ್ಯಾಪಾರ ವ್ಯವಹಾರಗಳಿಗೆ ಮೊಬೈಲ್ ಫೋನ್ ಆಧಾರವಾಗಿದೆ. ಯಾವುದೇ ಹೆಚ್ಚುವರಿ ಖರ್ಚಿಲ್ಲದೆ ಉಚಿತವಾಗಿ ತಮ್ಮ ಸರಕುಗಳ ಜಾಹೀರಾತು ನೀಡಿ, ವ್ಯಾಪಾರ ವೃದ್ಧಿ ಮಾಡಿಕೊಳ್ಳಲು ಇದು ಸಹಕಾರಿಯಾಗಿದೆ. ಅಷ್ಟೇ ಏಕೆ ಅನೇಕ ಯುಟ್ಯೂಬರ್‌ಗಳು ವಿವಿಧ ರೀತಿಯ ವಿಡಿಯೋಗಳನ್ನು ಪ್ರಸಾರ ಮಾಡಿ, ಉತ್ತಮ ಆದಾಯವನ್ನು ಸಹ ಗಳಿಸುತ್ತಿದ್ದಾರೆ. ಆದರೆ ಮನೋರಂಜನೆ ವಿಚಾರಕ್ಕೆ ಬಂದರೆ ಇದರಿಂದ ಆಗುವ ದುಷ್ಪರಿಣಾಮವೇ ಹೆಚ್ಚು ಎನ್ನಬಹುದು. ರೀಲ್ಸ್/ಶಾರ್ಟ್ಸ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಜನಪ್ರಿಯವಾಗಿರುವ ಅಂಶಗಳು. ಯಾವುದೇ ಸೆನ್ಸಾರ್ ಇಲ್ಲದೆ ಪ್ರಸಾರವಾಗುವ ರೀಲ್ಸ್‌ಗಳಲ್ಲಿ ಅಶ್ಲೀಲತೆ, ಡಬಲ್ ಮೀನಿಂಗ್ ಸಂಭಾಷಣೆಗಳು ಇಣುಕುತ್ತವೆ. ಗಂಟೆಗಟ್ಟಲೆ ರೀಲ್ಸ್‌ಗಳನ್ನು ವೀಕ್ಷಿಸುವ ಜನರಿದ್ದಾರೆ. ಇದರಿಂದ ನಮ್ಮ ಮಾನಸಿಕ ಆರೋಗ್ಯ ಹಾಳಾಗುತ್ತದೆ. ಇದು ವೀಕ್ಷಕರ ಮಾನಸಿಕ ಸ್ಥಿತಿಯನ್ನು ಹಾಳುಮಾಡುತ್ತದೆ. ಮಕ್ಕಳಿಗಂತೂ ಇವುಗಳು ನಿಜಕ್ಕೂ ಮಾರಕವಾಗುತ್ತವೆ.

ಮೊದಲು ಮೊಬೈಲ್ ಫೋನ್ ಕೀಪ್ಯಾಡ್‌ನಲ್ಲಿ ಬಂದಾಗ ಇದೊಂದು ಉತ್ತಮ ಸಂಪರ್ಕ/ಸಂವಹನ ಸಾಧನ ಎಂದು ಜನಪ್ರಿಯತೆ ಗಳಿಸಿತು. ಯಾವಾಗ ಸ್ಮಾರ್ಟ್ ಫೋನ್‌ಗಳು ಬಂದವೋ ಇಡೀ ಸಮಾಜ ಅಯೋಮಯವಾಯಿತು. ಇದೊಂದು ಸಾಧನ ಅನೇಕ ಸಾಧನಗಳಿಗೆ ಪರ್ಯಾಯವಾಗಿ ಇಂದು ಬಳಕೆಯಾಗುತ್ತಿದೆ. ಕ್ಯಾಮೆರಾ, ರೇಡಿಯೋ, ಕ್ಯಾಲ್ಕುಲೇಟರ್, ಮ್ಯಾಪ್, ಕಂಪಾಸ್, ರೆಕಾರ್ಡರ್, ನೋಟ್‌ಪ್ಯಾಡ್.... ಹೀಗೆ ಅನೇಕ ಸಾಧನಗಳನ್ನು ದೂರ ಮಾಡಿತು. ಎಷ್ಟೋ ಮಂದಿ ಎರಡು ಗಂಟೆಯ ಸಿನಿಮಾವನ್ನು ಮೊಬೈಲ್ ಫೋನ್‌ನಲ್ಲಿಯೇ ನೋಡುವವರಿದ್ದಾರೆ. ಕೇವಲ ವಿದ್ಯಾವಂತರಾದರೆ ಸಾಲದು, ಪ್ರಜ್ಞಾವಂತರಾಗಬೇಕು. ಅಡ್ಡಪರಿಣಾಮಗಳ ಕುರಿತು ಚಿಂತಿಸದೆ ಅವಧಿ ಮೀರಿ ಡಿಜಿಟಲ್ ಉಪಕರಣಗಳನ್ನು ಬಳಸಬಾರದು.

ಡಿಜಿಟಲ್ ಉಪಕರಣಗಳ ಅತಿಯಾದ ಬಳಕೆಯಿಂದ ಮಗ್ನತೆಯ ಅವಧಿ ಕಡಿಮೆ ಆಗುತ್ತಿದೆ. ಇಪ್ಪತ್ತು ವರ್ಷಗಳ ಹಿಂದೆ ಒಂದು ವಿಷಯದ ಕುರಿತಾಗಿ ಇದ್ದ 2.43 ನಿಮಿಷಗಳ ಮಗ್ನತೆಯ ಅವಧಿ ಇಂದು ಕೇವಲ 47 ಸೆಕೆಂಡ್‌ಗಳಿಗೆ ಬಂದಿದೆ. ಇದು ಟಿ.ವಿ. ಹಾಗೂ ಮೊಬೈಲ್ ಪರದೆ ವೀಕ್ಷಣೆಯಿಂದಾಗಿರುವ ದುಷ್ಪರಿಣಾಮ. ಗಂಟೆಗಟ್ಟಲೆ ಮೊಬೈಲ್‌ನಲ್ಲಿ ಮುಳುಗಿಹೋಗಿರುವ ವಿದ್ಯಾರ್ಥಿಗಳಲ್ಲಿ ಅತಿ ಹೆಚ್ಚು ಮಂದಿ ಒಂದು ಗಂಟೆ ಒಂದು ಕಡೆ ಕುಳಿತು ಮಗ್ನತೆಯಿಂದ ಪುಸ್ತಕ ಅಧ್ಯಯನ ಮಾಡಲು ಸಾಧ್ಯವಾಗದಷ್ಟು ಮಟ್ಟಕ್ಕೆ ಇದು ತಲುಪಿದೆ. ಮನುಷ್ಯನ ಮಗ್ನತೆ ಅಷ್ಟೇ ಅಲ್ಲ, ಅವನ ಕ್ರಿಯಾಶೀಲತೆಗೆ ಮಾರಕವಾಗಿದೆ. ಕ್ರಿಯೇಟಿವಿಟಿ ಇಲ್ಲದೆ, ಹೊಸ ಆಲೋಚನೆಗಳಿಗೆ ಮನಸ್ಸು ಮಾಡದೆ ಸೋಮಾರಿಗಳಾಗುತ್ತಿದ್ದಾರೆ. ಅನೇಕ ಬಹುಮುಖ್ಯ ಕೆಲಸಗಳನ್ನು ಮುಂದೂಡುವ ಪ್ರವೃತ್ತಿ ಮೊಬೈಲ್ ಬಳಕೆಯಿಂದ ಆಗುತ್ತಿದೆ ಎಂದು ಅಧ್ಯಯನವೊಂದು ತಿಳಿಸುತ್ತದೆ. ಅನೇಕ ಸಂಬಂಧಗಳು ಹಾಳಾಗುತ್ತಿರುವುದು ಮೊಬೈಲ್ ಬಳಕೆಯಿಂದಲೇ ಎನ್ನಬಹುದು.

ಎಲ್ಲದಕ್ಕೂ ಒಂದು ಮಿತಿ ಇದ್ದರೆ ಒಳ್ಳೆಯದು ಎಂಬ ಮಾತೊಂದಿದೆ. ಇದು ಡಿಜಿಟಲ್ ಉಪಕರಣಗಳ ಬಳಕೆಗೂ ಅನ್ವಯವಾಗುತ್ತದೆ. ವಾರಕ್ಕೆ ಒಂದು ದಿನವಾದರೂ ಸಾಧ್ಯವಾದಷ್ಟು ಮಟ್ಟಿಗೆ ಡಿಜಿಟಲ್ ಸಾಧನಗಳಿಂದ ಅಂತರ ಕಾಪಾಡಿಕೊಳ್ಳುವುದು ಒಳ್ಳೆಯದು. ಮಲಗಲು ಎರಡು ತಾಸು ಮೊದಲು ಊಟ ಮಾಡಿದರೆ ಆರೋಗ್ಯಕ್ಕೆ ಒಳ್ಳೆಯದು ಎನ್ನುತ್ತಾರೆ ವೈದ್ಯರು, ಅನಿವಾರ್ಯ ಸಂದರ್ಭ ಹೊರತುಪಡಿಸಿ ಮಲಗಲು ಎರಡು ತಾಸು ಮೊದಲು ಮೊಬೈಲ್ ಬಳಕೆ ನಿಲ್ಲಿಸಿದರೆ ಒಳ್ಳೆಯದು ಎನ್ನುತ್ತದೆ ಅಧ್ಯಯನ. ಸಾಮಾಜಿಕ ಜಾಲತಾಣ ವೀಕ್ಷಣೆಗೆ ಕಾಲಮಿತಿ ಹೇರಿಕೊಂಡರೆ ಅಡ್ಡಪರಿಣಾಮಗಳು ತಪ್ಪುತ್ತವೆ. ಜೊತೆಗೆ ಕಣ್ಣಿಗೆ ಆಗುವ ಆಯಾಸ ತಪ್ಪಿಸಬಹುದು.

ಮೊಬೈಲ್ ಬಳಕೆ ಗೀಳಿಗೆ ಒಳಗಾಗಿದ್ದ ನಾನು ಇತ್ತೀಚಿಗೆ ಬೇಸತ್ತು ಇಪ್ಪತ್ತು ದಿನಗಳ ಡಿಜಿಟಲ್ ಉಪವಾಸ ಕೈಗೊಂಡಿದ್ದೆ. ಫೋನ್ ಕರೆಗಳು, ಅನಿವಾರ್ಯ ಸಂದೇಶಗಳ ಹೊರತಾಗಿ ಸಾಮಾಜಿಕ ಜಾಲತಾಣದಿಂದ ದೂರ ಉಳಿದಿದ್ದೆ. ಅದರಿಂದ ಅನೇಕ ರೀತಿಯ ಪ್ರಯೋಜನಗಳಾದವು. ಈ ಸಮಯದಲ್ಲಿ ಬಹುದಿನದಿಂದ ಓದದೇ ಉಳಿದಿದ್ದ ಪುಸ್ತಕಗಳನ್ನು ಓದಿದೆ. ಹೊಸ ಹೊಸ ಆಲೋಚನೆಗಳು ಬಂದವು, ಹೊಸ ಯೋಜನೆಗಳನ್ನು ರೂಪಿಸಿಕೊಂಡೆ. ಬರವಣಿಗೆಗೆ ಹೆಚ್ಚು ಸಮಯ ದೊರೆಯಿತು. ಮನೆಯವರೊಟ್ಟಿಗೆ ಹೆಚ್ಚು ಸಮಯ ಕಳೆಯಲು ಅವಕಾಶವಾಯಿತು. ಕಣ್ಣಿಗೆ ಆಗುತ್ತಿದ್ದ ಆಯಾಸ ಕಡಿಮೆಯಾಗಿತ್ತು. ಆ ಕಾರಣಕ್ಕೆ ಇನ್ನುಮುಂದೆ ನಾನು ವಾರಕ್ಕೊಮ್ಮೆ ಡಿಜಿಟಲ್ ಉಪವಾಸ ಮಾಡಲು ಬಯಸಿದ್ದೇನೆ, ನೀವು?

ಹೂರಣ: ಚಾರ್ಜರ್‌ಗೆ ಕನೆಕ್ಟ್ ಆದರೆ ಮೊಬೈಲ್ ರೀಚಾರ್ಜ್ ಆಗುತ್ತದೆ. ಮೊಬೈಲ್‌ನಿಂದ ಡಿಸ್‌ಕನೆಕ್ಟ್ ಆದರೆ ಮನುಷ್ಯ ರೀಚಾರ್ಜ್ ಆಗುತ್ತಾನೆ !

ಪ್ರಸ್ತುತ ಯಾವುದೇ ಬರಹ ವಿವಾದಕ್ಕೀಡಾಗುವ ಆತಂಕದ ಸ್ಥಿತಿ ನಿರ್ಮಾಣವಾಗಿದೆ

● ಹಿರಿಯ ಸಾಹಿತಿ ಸವಿತಾ ನಾಗಭೂಷಣ ಬೇಸರ ● ಡಾ.ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ

ಮೈಸೂರು, ಜೂ. 1(ಬಿಎಲ್‌ಯು)– ಕಾವ್ಯ, ಕವನ, ಕಾದಂಬರಿ ಸೇರಿದಂತೆ ಯಾವುದೇ ರೀತಿಯ ಬರವಣಿಗೆ ಬರೆಯಲು ಪ್ರಸ್ತುತ ಭಯದ ವಾತಾವರಣವಿದ್ದು, ಈ ಮೊದಲಿನಂತೆ ಬರವಣಿಗೆಗೆ ಸ್ವಾತಂತ್ರ್ಯವಿಲ್ಲ ಎಂದು ಡಾ.ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ ಪುರಸ್ಕೃತೆ ಸವಿತಾ ನಾಗಭೂಷಣ ಹೇಳಿದರು.



ಮೈಸೂರಿನ ರೋಟರಿ ಪಶ್ಚಿಮ ಸಭಾಂಗಣದಲ್ಲಿ ಸಮತಾ ಅಧ್ಯಯನ ಕೇಂದ್ರದಿಂದ ನಡೆದ ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಸವಿತಾ ನಾಗಭೂಷಣ ಅವರಿಗೆ ಡಾ.ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಗರದ ಸರಸ್ವತಿಪುರಂನ ರೋಟರಿ ಮೈಸೂರು ಪಶ್ಚಿಮ ಸಭಾಂಗಣದಲ್ಲಿ ಸಮತಾ ಅಧ್ಯಯನ ಕೇಂದ್ರದಿಂದ ಡಾ.ವಿಜಯಾ ದಬ್ಬೆ ಸಾಹಿತ್ಯ ಪ್ರಶಸ್ತಿ ಸ್ವೀಕರಿಸಿದ ನಂತರ ಮಾತನಾಡಿದ ಅವರು, ಮೊದಲಿನಂತೆ ಬರವಣಿಗೆಯಲ್ಲಿ ಸ್ವಾತಂತ್ರ್ಯವಿಲ್ಲ. ನಾವು ಬರೆಯುವ ಬರವಣಿಗೆ ಯಾವುದಾದರೂ ರೀತಿಯಲ್ಲಿ ವಿವಾದಕ್ಕೀಡಾಗುತ್ತದೆಯೊ ಎಂಬ ಭಯವಿದೆ. ನಮ್ಮ ಬರವಣಿಗೆಯನ್ನು ಯಾರಾದರೂ ದ್ವೇಷಿಸುತ್ತಾರೊ ಎಂಬ ಹೆದರಿಕೆಗಳು ಕಾಡುತ್ತದೆ ಎಂದು ಹೇಳಿದರು.

ಈ ಮೊದಲು ಚಲನಚಿತ್ರಗಳಲ್ಲಿ ಕಾವ್ಯದ ಕಂಪು ಇರುತ್ತಿತ್ತು. ಆದರೆ ಇಂದಿನ ಚಲನಚಿತ್ರ ಗೀತೆಗಳಲ್ಲಿ ಅಪರೂಪಕ್ಕೆ ಒಂದು ಕಾವ್ಯ ಸಿಗುತ್ತದೆ. ಇಂದು ನಾವು ಸರಕಿನ ಪ್ರಪಂಚದಲ್ಲಿದ್ದೇವೆ. ಸಂಬಂಧಗಳಿಗೆ ಬೆಲೆಯೇ ಇಲ್ಲದ ಪರಿಸ್ಥಿತಿ ಇದೆ. ಈ ಮೊದಲು ಮನೆ ಚಿಕ್ಕದಾದರೂ ನೆಂಟರು ಬಂದರೆ ವಾಸ್ತವ್ಯಕ್ಕೆ ಅನುಕೂಲ ಮಾಡಿಕೊಡುತ್ತಿದ್ದೆವು. ಆದರೆ ಈಗ ದೊಡ್ಡ ಮನೆ ಇದ್ದರೂ ಕುಟುಂಬಸ್ಥರು ನೆಂಟರ ವಾಸ್ತವ್ಯಕ್ಕೆ ಸಣ್ಣ ಜಾಗ ಕೂಡ ಬಿಟ್ಟುಕೊಡುವುದಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಇದೇ ವೇಳೆ ಮಾತನಾಡಿದ ಹಿರಿಯ ಲೇಖಕಿ ನೇಮಿಚಂದ್ರ ಅವರು, ಡಾ.ವಿಜಯಾ ದಬ್ಬೆಯವರು ಸ್ತ್ರೀ ವಾದ ಕುರಿತಂತೆ ತಮ್ಮ ಬರಹದಲ್ಲಿ ವಿಚಾರಗಳನ್ನು ಮಂಡಿಸಿದ್ದಾರೆ. ಮಹಿಳೆಯರಿಗೆ ದೊರೆಯ ಬೇಕಾದ ಹಕ್ಕು ಮತ್ತು ಅವಕಾಶಗಳ ಬಗ್ಗೆ ಪರಿಣಾಮಕಾರಿಯಾದ ಚಿತ್ರಣ ನೀಡಿದ್ದಾರೆ. ನಾವು ಸ್ತ್ರೀ ವಾದಿಗಳು ಎಂದು ಹೇಳಿಕೊಳ್ಳಲು ಹಿಂಜರಿಕೆ ಬೇಡ ಎಂದು ಡಾ.ವಿಜಯಾ ದಬ್ಬೆ ಸಲಹೆ ನೀಡಿದ್ದಾರೆ ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಹಿರಿಯ ಪತ್ರಕರ್ತ ಜಿ.ಪಿ.ಬಸವರಾಜು ಅವರು, ಸವಿತಾ ನಾಗಭೂಷಣ್ ಅವರ ಕಾವ್ಯದಲ್ಲಿ ಅಹಂಕಾರ, ಆರ್ಭಟವಿಲ್ಲ. ಬುದ್ಧನ ವಿಚಾರಗಳು ಹಾಗೂ ಶಿವನ ಉಲ್ಲೇಖಗಳು ಹಾಗಾಗೆ ಬಂದು ಹೋಗುತ್ತವೆ. ಇವರ ಬರಹ ಎಲ್ಲರನ್ನು ಸುಲಭವಾಗಿ ತಲಪುವ ಸರಳ ಭಾಷೆಯಲ್ಲಿದೆ. ಅಷ್ಟೆ ಅಲ್ಲದೆ ಪ್ರೀತಿ, ಕಾರುಣ್ಯ, ಆಶಯಗಳನ್ನು ಒಳಗೊಂಡಿದೆ ಎಂದರು.

ಒಂದು ಕಾಲದಲ್ಲಿ ಮಹಿಳೆಯರ ಕಾವ್ಯವೇ ಇಲ್ಲ ಎಂಬ ಪರಿಸ್ಥಿತಿ ಇತ್ತು. ಆದರೆ ಈಗ ಅನೇಕ ಮಹಿಳೆಯರು ಕವನ, ಕಾವ್ಯ, ಕಾದಂಬರಿ ಬರೆಯುವ ಮೂಲಕ ಸಾಹಿತ್ಯ ಕೃಷಿ ಮಾಡುತ್ತಿದ್ದಾರೆ. ಇಂತಹ ಹಲವು ವಿಷಯಗಳು ಕೂಡ ಸವಿತಾ ನಾಗಭೂಷಣ ಅವರ ಬರಹದಲ್ಲಿದೆ. ಇದು ಮಹಿಳೆಯ ಅಸ್ಮಿತೆ ತೋರಿಸುತ್ತದೆ ಎಂದು ಬಸವರಾಜು ಹೇಳಿದರು.

ಸಂಸ್ಕೃತಿ ಚಿಂತಕಿ ಡಾ.ಎಂ.ಎಸ್. ಆಶಾದೇವಿ, ಪ್ರಾಧ್ಯಾಪಕಿ ಡಾ.ಸೆಲ್ವಕುಮಾರಿ, ಸಹಾಯಕ ಪ್ರಾಧ್ಯಾಪಕಿ ಡಾ.ಆನಂದ ಗೋಪಾಲ, ಸಮತಾ ಅಧ್ಯಯನ ಕೇಂದ್ರದ ಅಧ್ಯಕ್ಷೆ ಡಾ.ಸಬಿಹಾ ಭೂಮಿಗೌಡ, ಕಾರ್ಯದರ್ಶಿ ಡಾ.ಆರ್. ಸುನಂದಮ್ಮ ಸೇರಿದಂತೆ ಇನ್ನಿತರರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಪೂರ್ವ ವಲಯ ವ್ಯಾಪ್ತಿಯ 'ಬಸವ ಬಳಗ ಟ್ರಸ್ಟ್' ಉದ್ಘಾಟನೆ

ದುಡಿಮೆಯ ಶೇ.2ರಷ್ಟು ಟ್ರಸ್ಟ್‌ಗೆ ವಂತಿಗೆ ನೀಡಿ

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷ ಶಂಕರ ಬಿದರಿ ಸಲಹೆ

ಮೈಸೂರು, ಜೂ.1(ಎಂಕೆ)– ಮೈಸೂರು ಪೂರ್ವ ವಲಯ ವ್ಯಾಪ್ತಿಯ 'ಬಸವ ಬಳಗ ಟ್ರಸ್ಟ್' ಅನ್ನು ಭಾನುವಾರ ಉದ್ಘಾಟಿಸಲಾಯಿತು.

ಮೈಸೂರಿನ ಹೊರವಲಯದಲ್ಲಿರುವ ಜೆಎಸ್‌ಎಸ್ ಬಡಾವಣೆ ಎರಡನೇ ಹಂತದಲ್ಲಿ ಆಯೋಜಿಸಿದ್ದ ಟ್ರಸ್ಟ್ ಉದ್ಘಾಟನೆ ಹಾಗೂ ಬಸವ ಜಯಂತಿ ಸಮಾರಂಭದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ದಿವ್ಯ ಸಾನ್ನಿಧ್ಯದೊಂದಿಗೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ರಾಜ್ಯಾಧ್ಯಕ್ಷರೂ ಆದ ನಿವೃತ್ತ ಡಿಜಿಪಿ ಶಂಕರ ಎಂ.ಬಿದರಿ ನೂತನ ಬಸವ ಬಳಗ ಟ್ರಸ್ಟ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಜೆಎಸ್‌ಎಸ್ ಬಡಾವಣೆ 2ನೇ ಹಂತದಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಮೈಸೂರು ಪೂರ್ವ ವಲಯದ ಬಸವ ಬಳಗ ಟ್ರಸ್ಟ್ ಬಸವ ತತ್ತ್ವದ ಆಧಾರದ ಮೇಲೆ ಕೆಲಸ ಮಾಡಬೇಕು. ಒಗ್ಗಟ್ಟಿನ ಉದ್ದೇಶದಿಂದ ಈ ಟ್ರಸ್ಟ್ ಉದ್ಘಾಟಿಸಿರುವುದು ಆದರ್ಶವಾದ ಕೆಲಸವಾಗಿದ್ದು, ಸಮುದಾಯದ ಸರ್ವತೋಮುಖ ಬೆಳವಣಿಗೆಗೆ ವೇದಿಕೆಯಾಗಬೇಕು. ಹಾಗೆಯೇ ತಮ್ಮ ದುಡಿಮೆಯಲ್ಲಿ ಶೇ.2 ರಷ್ಟನ್ನು ಸಮಾಜದ ಏಳಿಗೆ ದೃಷ್ಟಿಯಿಂದ ಟ್ರಸ್ಟ್‌ಗೆ ವಂತಿಕೆಯಾಗಿ ನೀಡಬೇಕು. ಇದರಿಂದ ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.



ಮೈಸೂರಿನ ಹೊರವಲಯದಲ್ಲಿರುವ ಜೆಎಸ್‌ಎಸ್ ಬಡಾವಣೆ ಎರಡನೇ ಹಂತದಲ್ಲಿ ಮೈಸೂರು ಪೂರ್ವ ವಲಯ ವ್ಯಾಪ್ತಿಯ 'ಬಸವ ಬಳಗ ಟ್ರಸ್ಟ್' ಅನ್ನು ಭಾನುವಾರ ಉದ್ಘಾಟಿಸಲಾಯಿತು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಮೈಸೂರು ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಕುಂದೂರು ಮಠದ ಶರತ್‌ಚಂದ್ರ ಸ್ವಾಮೀಜಿ, ನಿವೃತ್ತ ಡಿಜಿಪಿ ಶಂಕರ ಎಂ.ಬಿದರಿ ಮತ್ತಿತರರಿದ್ದರು.

ಎಲ್ಲರನ್ನೂ ಸಮಾನರಾಗಿ ಕಾಣುವುದು. ಲಿಂಗಭೇದವಿಲ್ಲದೇ ಮಹಿಳೆಯರು ಮತ್ತು ಪುರುಷರಿಗೆ ಸಮಾನ ಅವಕಾಶಗಳನ್ನು ನೀಡುವುದು. ಎಲ್ಲಾ ಕಾಯಕಗಳನ್ನೂ ಸಮಾನವಾಗಿ ಗೌರವಿಸುವುದು. ಹಾಗೆಯೇ ಪ್ರತಿಯೊಬ್ಬರೂ ವೈಜ್ಞಾನಿಕ ಚಿಂತನೆ ಅಳವಡಿಸಿಕೊಂಡು ಸರಳ ಜೀವನ ನಡೆಸುವುದು ಅವಶ್ಯವಾಗಿದೆ ಎಂದು ತಿಳಿ ಹೇಳಿದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಜಿಲ್ಲೆಯಲ್ಲಿ ವೀರಶೈವ ಲಿಂಗಾಯತ ಸಮುದಾಯದ ಸಂಘಟನೆಗಳು ಶಕ್ತಿಯುತವಾಗಿವೆ. ನಗರದಲ್ಲಿಯೇ ಸಮುದಾಯದ 80 ಕ್ಕೂ ಹೆಚ್ಚು ಬಳಗಗಳಿವೆ. ಇವೆಲ್ಲವೂ ಒಂದೊಂದು ಪ್ರತ್ಯೇಕ ಕಣವಾಗಿ ಕೆಲಸ ಮಾಡುತ್ತಿವೆ. ಆದರೆ, ಸಮುದಾಯದ ಅಭಿವೃದ್ಧಿ ದೃಷ್ಟಿಯಿಂದ ಕಣಗಳು ಸೇರಿ ಚೆಂದದ ರಂಗೋಲೆಯಾಗಿ ರೂಪುಗೊಳ್ಳುವಂತೆ ಎಲ್ಲಾ ಸಂಘಟನೆಗಳು ಒಗ್ಗಟ್ಟಾಗಿ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು.

ಅಭಿನಂದನೆ ಮತ್ತು ಪ್ರತಿಭಾ ಪುರಸ್ಕಾರ: ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸೇವೆ ಮೂಲಕ ಸಮಾಜಕ್ಕೆ ಕೊಡುಗೆ ನೀಡುತ್ತಿರುವ ವೀರಶೈವ ಲಿಂಗಾಯತ ಸಮುದಾಯದ ಸಾಧಕರನ್ನು ಅಭಿನಂದಿಸಲಾಯಿತು. ಹಾಗೆಯೇ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದು ತೇರ್ಗಡೆಯಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು. ವೇದಿಗೆ ಕಾರ್ಯಕ್ರಮಕ್ಕೂ ಮುನ್ನ ಸರ್ದಾರ್ ವಲ್ಲಭಭಾಯ್ ಪಟೇಲ್ ನಗರದ ಮುಖ್ಯದ್ವಾರದಿಂದ ವಿವಿಧ ಕಲಾತಂಡಗಳೊಂದಿಗೆ ವೇದಿಕೆಯವರೆಗೆ ಬಸವ ಉತ್ಸವ ನಡೆಯಿತು.

ತುಮಕೂರು ಸಿದ್ದಗಂಗಾ ಮಠದ ಶ್ರೀ ಸಿದ್ದಲಿಂಗ ಸ್ವಾಮೀಜಿ, ಮೈಸೂರು ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ, ಕುಂದೂರು ಮಠದ ಶರತ್‌ಚಂದ್ರ ಸ್ವಾಮೀಜಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ಹೆಚ್.ವಿ.ಬಸವರಾಜು, ಬಸವ ಜಯಂತಿ–2025ರ ಅಧ್ಯಕ್ಷ ನಾಗರಾಜು ಬ್ಯಾತಳ್ಳಿ, ಬಸವ ಬಳಗ ಟ್ರಸ್ಟ್‌ನ ಅಧ್ಯಕ್ಷ ಎಸ್.ಶಿವಸ್ವಾಮಿ, ಉಪಾಧ್ಯಕ್ಷರಾದ ಎಂ.ಮಹದೇವಸ್ವಾಮಿ, ಹೆಚ್.ಪಿ.ಶ್ರೀಕಂಠಮೂರ್ತಿ, ಪ್ರಧಾನ ಕಾರ್ಯದರ್ಶಿ ಡಿ.ಲೋಹಿತ್, ಸಹ ಕಾರ್ಯದರ್ಶಿ ಹೆಚ್.ವಿ.ಮಾದೇವಪ್ರಸಾದ್, ಸಂಘಟನಾ ಕಾರ್ಯದರ್ಶಿಗಳಾದ ಜಯಶಂಕರ್, ಎಂ.ಮಹೇಶ್, ಖಜಾಂಚಿ ಎನ್.ಮಹೇಶ್ ಹಾಗೂ ಟ್ರಸ್ಟ್‌ನ ನಿರ್ದೇಶಕರು ಉಪಸ್ಥಿತರಿದ್ದರು.

ವೀರಶೈವ ಲಿಂಗಾಯತ ಸಮಾಜದಿಂದ ಬಹು ದೊಡ್ಡ ಸೇವಾ ಕೊಡುಗೆ

"ಶಿಕ್ಷಣ, ಊಟ ಮತ್ತು ವಸತಿ ದಾಸೋಹದ ಮೂಲಕ ಸಮಾಜಕ್ಕೆ ಬಹು ದೊಡ್ಡ ಸೇವಾ ಕೊಡುಗೆ ನೀಡುತ್ತಿರುವ ವೀರಶೈವ ಲಿಂಗಾಯತ ಸಮುದಾಯದ ಲಕ್ಷಾಂತರ ವಿದ್ಯಾರ್ಥಿಗಳ ಬದುಕಿಗೆ ದಾರಿದೀಪವಾಗಿದೆ. ಹಾಗೆಯೇ ಸಮುದಾಯದ ಉಳ್ಳವರು ತಮ್ಮ ಶಕ್ತಿಯನ್ನು ಸದ್ಬಳಕೆ ಮಾಡಿಕೊಂಡು ಇತರರಿಗೆ ನೇರವಾಗಬೇಕು.

– ಹೆಚ್.ಎಂ.ಗಣೇಶ್‌ಪ್ರಸಾದ್, ಶಾಸಕ

ಹುಟ್ಟುಹಬ್ಬ ಆಚರಣೆ



ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯೆ ಶ್ರೀಮತಿ ಪ್ರೇಮಾ ಶಂಕರೇಗೌಡ ಅವರಿಗೆ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಕೆ.ವಿವೇಕಾನಂದ ಅವರು ಜನ್ಮದಿನದ ಶುಭಾಶಯ ತಿಳಿಸಿದರು. ಬಳಿಕ ಇವರ ಜನ್ಮದಿನದ ಅಂಗವಾಗಿ ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು. ಈ ವೇಳೆ ಕೋ ಆಪರೇಟಿವ್ ಬ್ಯಾಂಕ್ ಉಪಾಧ್ಯಕ್ಷ ರವಿ(ಟೆಂಟ್), ಮೋಹನ್, ಆನಂದ್, ಯೋಗೇಶ್, ಧನುಷ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ಬಿಡಿಎ ಆಯುಕ್ತರಾಗಿ ಪಿ. ಮಣಿವಣ್ಣನ್ ಅಧಿಕಾರ ಸ್ವೀಕಾರ



ಬೆಂಗಳೂರು, ಜೂ.1– ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮೇಜರ್ ಪಿ. ಮಣಿವಣ್ಣನ್‌ಗೆ ಬಿಡಿಎ ಆಯುಕ್ತ ಹುದ್ದೆಯನ್ನು ಸಮಪ್ರಭಾರ ಜವಾಬ್ದಾರಿ ವಹಿಸಿ ಸರ್ಕಾರ ಆದೇಶಿಸಿದ್ದು, ಇದರಂತೆ ಅವರು ಶನಿವಾರ ಅಧಿಕಾರ ಸ್ವೀಕಾರ ಮಾಡಿದರು. ಶನಿವಾರ ಸದಾಶಿವನಗರದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದ ಮಣಿವಣ್ಣನ್ ಅವರಿಗೆ ಡಿಸಿಎಂ ಶುಭ ಹಾರೈಸಿದರು. ನಾವು ಒಟ್ಟಾಗಿ ನಾವೀನ್ಯತೆ, ಸುಸ್ಥಿರತೆ ಮತ್ತು ಸ್ಮಾರ್ಟ್ ಸಿಟಿ ಬೆಳವಣಿಗೆಯ ನಗರವಾದ ಬ್ರ್ಯಾಂಡ್ ಬೆಂಗಳೂರನ್ನು ನಿರ್ಮಿಸಲು ಬದ್ಧರಾಗಿದ್ದೇವೆ ಎಂದು ಹೇಳಿದರು. ಬಿಡಿಎ ಆಯುಕ್ತ ಎನ್.ಜಯರಾಮ್ ಅವರು ಶನಿವಾರ (ಮೇ 31) ವಯೋನಿವೃತ್ತಿಗೊಂಡಿದ್ದು, 1998 ರ ಬ್ಯಾಚ್ ಅಧಿಕಾರಿಯಾಗಿದ್ದ ಮಣಿವಣ್ಣನ್ ಬಿಡಿಎ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

ಹುಟ್ಟುಹಬ್ಬದ ಅಭಿನಂದನೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಹುಟ್ಟುಹಬ್ಬ ಆಚರಿಸಿಕೊಂಡ ಕಾಂಗ್ರೆಸ್ ಮುಖಂಡ ಹುಯಿಲಾಳು ರಾಮಸ್ವಾಮಿ ಅವರಿಗೆ ಜಿಲ್ಲಾ ಗ್ರಾಮಾಂತರ ಯುವ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ಜಟ್ಟಿಹುಂಡಿ ಸುನಿಲ್ ಮೈಸೂರು ಪೇಟ ತೊಡಿಸಿ, ಅಭಿನಂದಿಸಿದರು. ಈ ವೇಳೆ ಇಲವಾಲ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಅಧ್ಯಕ್ಷ ದೊಡ್ಡಕಾನ್ಯ ಪ್ರಕಾಶ್, ನಾಗವಾಲ ಕೃಷಿಪತ್ತಿನ ಸಹಕಾರ ಸಂಘದ ನಿರ್ದೇಶಕ ಶಿವರಾಜು, ಮಂಜುನಾಥ್, ಪ್ರಸಾದ್, ಸೌರಬ್, ಸಂಜು, ಮೋಹಿತ್ ಉಪಸ್ಥಿತರಿದ್ದರು.

ಕೆಆರ್‌ಎಸ್ ನೀರಿನ ಮಟ್ಟ




ಗರಿಷ್ಠ ಮಟ್ಟ	124.80 ಅಡಿ
ಭಾನುವಾರ	100.1 ಅಡಿ
ಒಳಹರಿವು	19448 ಕ್ಯೂಸೆಕ್
ಹೊರಹರಿವು	670 ಕ್ಯೂಸೆಕ್

ಕಬಿನಿ ನೀರಿನ ಮಟ್ಟ



ಗರಿಷ್ಠ ಮಟ್ಟ	2284 ಅಡಿ
ಭಾನುವಾರ	2280.54 ಅಡಿ
ಒಳಹರಿವು	14521 ಕ್ಯೂಸೆಕ್
ಹೊರಹರಿವು	8000 ಕ್ಯೂಸೆಕ್

ಹಾರಂಗಿ ನೀರಿನ ಮಟ್ಟ



ಗರಿಷ್ಠ ಮಟ್ಟ	2859 ಅಡಿ
ಭಾನುವಾರ	2854.87 ಅಡಿ
ಒಳಹರಿವು	6266 ಕ್ಯೂಸೆಕ್
ಹೊರಹರಿವು	4175 ಕ್ಯೂಸೆಕ್


ರಕ್ಷಣಾ ಸಚಿವಾಲಯದಿಂದ 'ಆಪರೇಷನ್ ಸಿಂಧೂರ' ಕುರಿತು ಪ್ರಬಂಧ ಸ್ಪರ್ಧೆ ವಿಜೇತರಿಗೆ ನಗದು ಬಹುಮಾನ

ನವದೆಹಲಿ, ಜೂ.1– 'ಆಪರೇಷನ್ ಸಿಂಧೂರ' ವಿಷಯದ ಮೇಲೆ ಪ್ರಬಂಧ ಸ್ಪರ್ಧೆಯನ್ನು ರಕ್ಷಣಾ ಸಚಿವಾಲಯ ಭಾನುವಾರ ಪ್ರಕಟಿಸಿದೆ.

ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ಸಚಿವಾಲಯವು, ಅಗ್ರ ಮೂರು ವಿಜೇತರಿಗೆ ತಲಾ 10,000 ರೂ. ನಗದು ಬಹುಮಾನ ನೀಡಲಾಗುವುದು ಮತ್ತು ದೆಹಲಿಯ ಕೆಂಪು ಕೋಟೆಯಲ್ಲಿ ನಡೆಯುವ 78ನೇ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸಲು ವಿಶೇಷ ಅವಕಾಶ ಪಡೆಯುತ್ತಾರೆ ಎಂದು ತಿಳಿಸಿದೆ.

ಏಪ್ರಿಲ್ 22ರಂದು ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 26 ಜನರು ಸಾವಿಗೀಡಾಗಿದ್ದಕ್ಕೆ ಪ್ರತೀಕಾರವಾಗಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಒಂಬತ್ತು ಭಯೋತ್ಪಾದಕ ನೆಲೆಗಳನ್ನು ಗುರಿಯಾಗಿಸಿ ಮೇ 7ರಂದು ಆಪರೇಷನ್ ಸಿಂಧೂರವನ್ನು ಪ್ರಾರಂಭಿಸಲಾಯಿತು.

ಜೂನ್ 30ರವರೆಗೆ ಪ್ರಬಂಧ ಕಳುಹಿಸಲು ಅವಕಾಶ



ಭಯೋತ್ಪಾದನೆಯ ವಿರುದ್ಧ ಭಾರತ ಹೊಸ ಕೆಂಪು ರೇಖೆಯನ್ನು ಎಳೆದಿದೆ ಎಂದು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಹೇಳಿದೆ. ಭಯೋತ್ಪಾದನೆಗೆ, ವಿಶೇಷವಾಗಿ ಗಡಿಯಾಚೆಗಿನ ಭಯೋತ್ಪಾದನೆಗೆ ಭಾರತ ಹೇಗೆ ಪ್ರತಿಕ್ರಿಯಿಸುತ್ತದೆ ಎಂಬುದರಲ್ಲಿ ಆಪರೇಷನ್ ಸಿಂಧೂರ ಇದೀಗ ಉದಾಹರಣೆಯಾಗಿದೆ ಎಂದು ಪ್ರತಿಪಾದಿಸಿದೆ.

'ರಕ್ಷಣಾ ಸಚಿವಾಲಯವು ತಮ್ಮ ಧ್ವನಿಯನ್ನು ಕೇಳುವಂತೆ ಮಾಡಲು ಯುವ ಮನಸ್ಸುಗಳನ್ನು ಆಹ್ವಾನಿಸುತ್ತದೆ! 'ಆಪರೇಷನ್ ಸಿಂಧೂರ – ಭಯೋತ್ಪಾದನೆಯ ವಿರುದ್ಧ ಭಾರತದ ನೀತಿಯನ್ನು ಮರು ವ್ಯಾಖ್ಯಾನಿಸುವುದು' ಎಂಬ ವಿಷಯ ಕುರಿತು ರಕ್ಷಣಾ ಸಚಿವಾಲಯ ಮತ್ತು ಭಾರತ ಸರ್ಕಾರದ ದ್ವಿಭಾಷಾ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ' ಎಂದು ಸಚಿವರು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ.

ಜೂನ್ 1 ರಿಂದ 30ರವರೆಗೆ ಸ್ಪರ್ಧೆ ನಡೆಯಲಿದೆ. ಯಾವುದೇ ವ್ಯಕ್ತಿ ಹಿಂದಿ ಅಥವಾ ಇಂಗ್ಲಿಷ್‌ನಲ್ಲಿ ಪ್ರಬಂಧ ಬರೆಯಬಹುದಾಗಿದೆ ಎಂದು ಅದು ಹೇಳಿದೆ. ಸ್ಪರ್ಧೆಯ ಬಗ್ಗೆ ವಿವರಗಳು ಮತ್ತು ಆಪರೇಷನ್ ಸಿಂಧೂರದ ಲೋಗೋ ಹೊಂದಿರುವ ಪೋಸ್ಟರ್ ಅನ್ನು ಸಹ ಹಂಚಿಕೊಂಡಿದೆ.

ವಿಶ್ವ ಸೈಕಲ್ ದಿನದ ಅಂಗವಾಗಿ ತಿರಂಗಾ ಸೈಕಲ್ ಜಾಥಾ



ಯುವ ಸಬಲೀಕರಣ ಇಲಾಖೆ ಭಾನುವಾರ ಆಯೋಜಿಸಿದ್ದ ಸೈಕಲ್ ಜಾಥಾದಲ್ಲಿ ಪಾಲ್ಗೊಂಡಿರುವ ಸೈಕಲ್ ಪಟುಗಳು.

ಮೈಸೂರು,ಜೂ.1(ಎಂಟಿವೈ)– ವಿಶ್ವ ಸೈಕಲ್ ದಿನದ ಅಂಗವಾಗಿ ಮೈಸೂರಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಭಾನುವಾರ ಆಯೋಜಿಸಿದ್ದ ತಿರಂಗಾ ಸೈಕಲ್ ಜಾಥಾದಲ್ಲಿ 50ಕ್ಕೂ ಹೆಚ್ಚು ಸೈಕಲ್ ಪಟುಗಳು ಪಾಲ್ಗೊಂಡು ಗಮನ ಸೆಳೆದರು.

ಮೈಸೂರಿನ ನಜ಼ರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದ ಆವರಣದಲ್ಲಿ ಭಾನುವಾರ ಬೆಳಗ್ಗೆ ಜಿಲ್ಲಾಡಳಿತ, ಜಿ.ಪಂ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಅಮೆಚ್ಯೂರ್ ಸೈಕ್ಲಿಂಗ್ ಅಸೋಸಿಯೇಷನ್, ಮೈಸೂರು ಅಥ್ಲೀಟ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಬೈಸಿಕಲ್ ದಿನಾಚರಣೆ ಕಾರ್ಯಕ್ರಮದಲ್ಲಿ ತಿರಂಗಾ ಸೈಕಲ್ ರ್‍ಯಾಲಿಯ ಕ್ರೀಡಾ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು, ಸೈಕ್ಲಿಂಗ್ ಪಟುಗಳು ಹಾಗೂ ಕೆಲ ಸಾರ್ವಜನಿಕರು ಪಾಲ್ಗೊಂಡು ಸೈಕಲ್ ತುಳಿದರು.

ಖೇಲೋ ಇಂಡಿಯಾ ಯೋಜನೆಯ ಫಿಟ್ ಇಂಡಿಯಾ ಕಾರ್ಯಕ್ರಮದಡಿ ಆಯೋಜಿಸಿದ್ದ ಸೈಕಲ್ ಜಾಥಾದಲ್ಲಿ ಪಾಲ್ಗೊಂಡಿದ್ದ ಸೈಕಲ್ ಪಟುಗಳು ಆರೋಗ್ಯ ಕಾಪಾಡಿಕೊಳ್ಳಲು ಪ್ರತಿದಿನ 30 ನಿಮಿಷವಾದರೂ ಸೈಕಲ್ ತುಳಿಯುವಂತೆ ಜಾಗೃತಿ ಮೂಡಿಸಿದರು. ಚಾಮುಂಡಿವಿಹಾರ ಕ್ರೀಡಾಂಗಣದಿಂದ ನಜ಼ರ್‌ಬಾದ್ ವೃತ್ತ, ಬನ್ನೂರು ರಸ್ತೆಯಲ್ಲಿ ಸಾಗಿ ಸಿದ್ದಾರ್ಥ ನಗರದಲ್ಲಿರುವ ನೂತನ ಜಿಲ್ಲಾಧಿಕಾರಿ ಕಚೇರಿ ಕಟ್ಟಡವನ್ನು ಒಂದು ಸುತ್ತು ಬಳಸಿ ಮತ್ತೆ ನಜ಼ರ್‌ಬಾದ್ ಮೂಲಕ ಚಾಮುಂಡಿ ವಿಹಾರ ಕ್ರೀಡಾಂಗಣ ತಲುಪಿ ಕೊನೆಗೊಂಡಿತು.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಗ್ರಂಥಾಲಯ ಇಲಾಖೆಯ ಉಪನಿರ್ದೇಶಕ ಮಂಜುನಾಥ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಹಿರಿಯ ತಬಲಾ ಕಲಾವಿದ ಪಂಡಿತ್ ಶರಣಕುಮಾರ ಗುತ್ತರಗಿ ಅವರಿಗೆ

ಪಂಡಿತ್ ಕೆ.ಎಸ್.ಹಡಪದ ಪ್ರಶಸ್ತಿ ಪ್ರದಾನ

ಮೈಸೂರು,ಜೂ.1 (ಪಿಎಂ)– ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ವತಿಯಿಂದ ಹಿರಿಯ ತಬಲಾ ಕಲಾವಿದ ಗದಗದ ಪಂಡಿತ್ ಶರಣಕುಮಾರ ಗುತ್ತರಗಿ ಅವರಿಗೆ 2025ನೇ ಸಾಲಿನ 'ಪಂಡಿತ್ ಕೆ.ಎಸ್.ಹಡಪದ ಪ್ರಶಸ್ತಿ ಪುರಸ್ಕಾರ' ನೀಡಿ ಗೌರವಿಸಲಾಯಿತು.

ಮೈಸೂರಿನ ಕುವೆಂಪುನಗರದ ಗಾನ ಭಾರತೀಯ ರಮಾಗೋವಿಂದ ಕಲಾ ವೇದಿಕೆ ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಂಗೀತ ಕಾರ್ಯಕ್ರಮದಲ್ಲಿ ದಿವಂಗತ ಪಂಡಿತ್ ಕೆ.ಎಸ್.ಹಡಪದ (ಪಂ.ಕರಿಯಪ್ಪ ಶಿವಪ್ಪ ಹಡಪದ) ಅವರ 19ನೇ ಪುಣ್ಯ ಸ್ಮರಣಾರ್ಥ ಹಿರಿಯ ತಬಲಾ ಕಲಾವಿದ ಶರಣಕುಮಾರ ಗುತ್ತರಗಿ ಅವರಿಗೆ ಪಂಡಿತ್ ಕೆ.ಎಸ್.ಹಡಪದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಇಕ್ವೆಲೈಜ್ ಆರ್‌ಸಿಎಂ ಇಂಡಿಯಾ ಹಾಗೂ ಟೈ ಮೈಸೂರು ಅಧ್ಯಕ್ಷ ಭಾಸ್ಕರ್ ಕಳಲೆ ಮಾತನಾಡಿ, ಯಾವುದೇ ಕಲೆಯಾದರೂ ಕಲಾವಿದರು ಪರಸ್ಪರ ಪ್ರೋತ್ಸಾಹಿಸುವ ನಿಸ್ವಾರ್ಥ ಮನೋಭಾವ ಹೊಂದಿರುತ್ತಾರೆ. ಸಹ ಕಲಾವಿದರು ಕಲಾ ಪ್ರದರ್ಶನ ನೀಡಿದಾಗ ಉತ್ತೇಜಿಸುವ ವಿಶಾಲ ಮನೋಭಾವ ಹೊಂದಿರುವುದೇ ಹೆಚ್ಚು. ಇದು ನಮ್ಮ ಯಾವುದೇ ಕಲಾ ಪ್ರಕಾರದ ವೈಶಿಷ್ಟ್ಯ ಎಂದು ಅಭಿಪ್ರಾಯಪಟ್ಟರು.



ಮೈಸೂರಿನ ಗಾನಭಾರತೀಯ ರಮಾಗೋವಿಂದ ಕಲಾವೇದಿಕೆ ಸಭಾಂಗಣದಲ್ಲಿ ಭಾನುವಾರ ಹಿರಿಯ ತಬಲಾ ಕಲಾವಿದ ಶರಣಕುಮಾರ ಗುತ್ತರಗಿ ಅವರಿಗೆ ಪಂಡಿತ್ ಕೆ.ಎಸ್.ಹಡಪದ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕಲೆ ಮತ್ತು ಸಾಹಿತ್ಯದಲ್ಲಿ ಯಾರು ಎಷ್ಟೇ ವಿದ್ವಾಂಸರಾದರೂ ತಮ್ಮ ಕ್ಷೇತ್ರದ ಮತ್ತೊಬ್ಬರ ಸಾಧನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಪಂಡಿತ್ ಶರಣಕುಮಾರ ಗುತ್ತರಗಿ ಅವರು ತಬಲಾ ವಾದನದಲ್ಲಿ ಎಷ್ಟೋ ವರ್ಷಗಳಿಂದ ಪರಿಣತರು. ಅಷ್ಟು ಅನುಭವ ಇದ್ದಾಗ್ಯೂ ಇಂದಿನ ಕಾರ್ಯಕ್ರಮದ ವೇದಿಕೆಯಲ್ಲಿ ಮಕ್ಕಳು, ಯುವಕರ ತಬಲಾ ವಾದನವನ್ನು ತದೇಕಚಿತ್ತದಿಂದ ಆಲಿಸುತ್ತಿದ್ದರು. ಅಂತೆಯೇ ತಬಲಾದ ಸಂಗೀತವನ್ನು ಆಸ್ವಾದಿಸುತ್ತಿದ್ದರು ಎಂದು ಸಂತಸ ವ್ಯಕ್ತಪಡಿಸಿದರು.

ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ಅಧ್ಯಕ್ಷ ಭೀಮಾಶಂಕರ ಬಿದನೂರ ತಬಲಾದಲ್ಲಿ ಅತ್ಯುತ್ತಮ ಗುರುಗಳಾಗಿದ್ದು, ಇದಕ್ಕಾಗಿ ಅವರ ಬಳಿ ಕಲಿಯುತ್ತಿರುವ ಶಿಷ್ಯರು ಅದೃಷ್ಟವಂತರು ಎನ್ನಬಹುದು. ನನ್ನ ಪುತ್ರ ಸಹ ಅವರ ಬಳಿ ತಬಲಾ ಕಲಿಯುತ್ತಿದ್ದ. ಅವನು ಪಂಡಿತ್ ಸ್ವಪನ್ ಚೌಧುರಿ ಅವರ ಎದುರು ತಬಲಾದಲ್ಲಿ ರೂಪಕ್ ತಾಳ ಬಾರಿಸಿದ್ದ. ಇದನ್ನು ಕಂಡ ಸ್ವಪನ್ ಚೌಧರಿಯವರು ಮೂರು ಬಾರಿ ವೆರಿ ಗುಡ್ ಎಂದಿದ್ದಲ್ಲದೆ, ನೀನು ಬಾರಿಸಿದ ಟೆಕ್ನಿಕ್‌ನಲ್ಲಿ ಸ್ವಲ್ಪವೂ ದೋಷವಿಲ್ಲ ಎಂದು ಮೆಚ್ಚುಗೆ ವ್ಯಕ್ತಪಡಿಸಿ, ಯಾರಲ್ಲಿ ತಬಲಾ ಕಲಿತಿದ್ದು ಎಂದು ಕೇಳಿದ್ದರು. ಇದರ ಶ್ರೇಯಸ್ಸು ಭೀಮಾ ಶಂಕರ್ ಅವರಿಗೆ ಸಲ್ಲಬೇಕು ಎಂದು ಶ್ಲಾಘಿಸಿದರು.

ಬಳಿಕ ಪಂ.ಶರಣಕುಮಾರ ಗುತ್ತರಗಿ ಅವರ ತಬಲಾ ವಾದನ ಕಾರ್ಯಕ್ರಮ ನಡೆಯಿತು. ಇವರ ತಬಲಾದ ಮಧುರ್ಯದ ನಾದಕ್ಕೆ ಸಭಿಕರು ಸಂಭ್ರಮಿಸಿದರು. ಇದಕ್ಕೂ ಮುನ್ನ ಎಸ್‌ಜಿಪಿ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳು ಸಮೂಹ ತಬಲಾ ವಾದನದ ಮೂಲಕ ಸಭಿಕರ ಗಮನ ಸೆಳೆದರು. ಎನ್‌ಐಇ ಕಾಲೇಜಿನ ಪ್ರಾಧ್ಯಾಪಕ ಡಾ.ಸಿ.ಕೆ.ಸಂಜಯ್ ಕುಮಾರ್, ರಾಷ್ಟ್ರೀಯ ಕುಸ್ತಿಪಟು ಮಲ್ಲಾಪುರದ ಶಂಕರ್ ಎಸ್.ಕಳಿಗೊನ್ನವರ್, ಶ್ರೀ ಗುರು ಪುಟ್ಟರಾಜ ಸಂಗೀತ ಸಭಾ ಅಧ್ಯಕ್ಷ ಭೀಮಾ ಶಂಕರ ಬಿದನೂರ ಮತ್ತಿತರರು ಹಾಜರಿದ್ದರು.

ಬಸವಮಾರ್ಗ ಸಂಸ್ಥೆಯ ಸಂಸ್ಥಾಪಕ ಎಸ್.ಬಸವರಾಜು ಹುಟ್ಟುಹಬ್ಬ



ಬಸವಮಾರ್ಗ ಸಂಸ್ಥೆಯ ಸಂಸ್ಥಾಪಕ ಹಾಗೂ ಇಂಡಿಯನ್ ಟಿವಿ ಮುಖ್ಯಸ್ಥ ಎಸ್.ಬಸವರಾಜು ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರಿಗೆ ಕೆ.ಜಿ.ಕೊಪ್ಪಲು ಯಜಮಾನರುಗಳಾದ ರಾಮೇಗೌಡರು, ಬಸಪ್ಪಣ್ಣ, ಚಿಕ್ಕಣ್ಣ, ಕ್ಯಾಶಿಯರ್ ರಾಮಣ್ಣ, ಬಸವರಾಜು, ಶಿವಕುಮಾರ್, ಈಶ್ವರ್, ಶಿವಣ್ಣ ಅವರು ಶುಭ ಕೋರಿದರು.



ಚಲನಚಿತ್ರ ನಿರ್ಮಾಪಕ ಮೈಸೂರು ಕೃಷ್ಣಪ್ಪ, ನಿರ್ದೇಶಕ ಮಂಜು ಕವಿ, ನಿಕಿಲ್, ಕೆ.ಜಿ.ಕೊಪ್ಪಲಿನ ಶ್ರೀನಿವಾಸ್, ರವಿಕುಮಾರ್, ಕುಂಬಾರಕೊಪ್ಪಲಿನ ದಿಲೀಪ್ ಕುಮಾರ್ ಮತ್ತು ಸ್ನೇಹಿತರು ನೃತ್ಯ ನಿರ್ದೇಶಕ ನಂದಕುಮಾರ್ ನೇತೃತ್ವದಲ್ಲಿ ಬಸವರಾಜು ಅವರಿಗೆ ಹೂವಿನ ಮಳೆ ಸುರಿಸಿ, ಅಭಿನಂದಿಸುವ ಮೂಲಕ ವಿಶೇಷ ರೀತಿಯಲ್ಲಿ ಶುಭಾಶಯ ಕೋರಿದರು.



ಎಸ್.ಬಸವರಾಜು ಅವರಿಗೆ ಸಹೋದರರಾದ ಇಂಡಿಯನ್ ಟಿವಿ ಮ್ಯಾನೇಜಿಂಗ್ ಡೈರೆಕ್ಟರ್ ಎಸ್.ವೆಂಕಟೇಶ್ ಕುಮಾರ್, ಸಿಇಓ ಎಸ್.ರಾಜು, ಸಿ.ಪ್ರಕಾಶ್, ಸಿ.ಕೃಷ್ಣ, ಶ್ರೀನಿವಾಸ್, ರವಿ, ರಮೇಶ್ ಅವರು ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.



ಬಸವರಾಜು ಅವರಿಗೆ ಮಂಡ್ಯದ ಅಮಿತ್, ಕಿರಣ್ ಹಾಗೂ ಸ್ನೇಹಿತರು ಬೃಹತ್ ಸೇಬಿನ ಹಾರ ಹಾಕಿ, ಅಭಿನಂದಿಸಿದರು.



ಬಸವರಾಜು ಅವರಿಂದ 100 ಕೆ.ಜಿಯ ಬೃಹತ್ ಕೇಕ್ ಕತ್ತರಿಸುವ ಮೂಲಕ ಉದ್ಯಮಿ ನರೇಂದ್ರ ಬಾಬು(ಬಿಜಿ ಗೌಡ್ರು) ಅವರು ಶುಭಾಶಯ ಕೋರಿದರು. ಈ ವೇಳೆ ಇಂಡಿಯನ್ ಟಿವಿಯ ಮ್ಯಾನೇಜಿಂಗ್ ಡೈರೆಕ್ಟರ್ ಎಸ್.ವೆಂಕಟೇಶ್ ಕುಮಾರ್ ಹಾಗೂ ಸ್ನೇಹಿತರು ಉಪಸ್ಥಿತರಿದ್ದರು.



ಇಂಡಿಯನ್ ಟಿವಿ ವಾಹಿನಿ ವತಿಯಿಂದ ಸುದ್ದಿ ಸಂಪಾದಕ ಆಕಾಶ್ ನೇತೃತ್ವದ ತಂಡ ಮುದ್ದಾದ ಕರುವನ್ನು ಬಸವರಾಜು ಅವರಿಗೆ ಉಡುಗೊರೆಯಾಗಿ ನೀಡುವ ಮೂಲಕ ಅವರ ಹುಟ್ಟುಹಬ್ಬವನ್ನು ಮತ್ತಷ್ಟು ವಿಶೇಷಗೊಳಿಸಿದರು. ಈ ವೇಳೆ ಇಂಡಿಯನ್ ಟಿವಿಯ ಸಿಬ್ಬಂದಿ ಇದ್ದರು.

ಆನ್‌ಲೈನ್ ಟ್ರೇಡಿಂಗ್ ಹೆಸರಲ್ಲಿ 42.46 ಲಕ್ಷ ರೂ. ವಂಚನೆ

ಮೈಸೂರು, ಜೂ.1– ಆನ್‌ಲೈನ್ ಟ್ರೇಡಿಂಗ್ ನೆಪದಲ್ಲಿ ಲಕ್ಷಾಂತರ ರೂ. ಹಣ ಪಡೆದ ನಂತರ ಮನಿಲ್ಯಾಂಡ್ರಿಂಗ್ ಹೆಸರಿನಲ್ಲಿ ಬೆದರಿಸಿ, ವಂಚಿಸಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಸರಸ್ವತಿಪುರಂನಲ್ಲಿ ನೆಲೆಸಿರುವ ನಿವೃತ್ತರೊಬ್ಬರು ವಂಚನೆಗೊಳಗಾಗಿ 42.46 ಲಕ್ಷ ರೂ. ಹಣ ಕಳೆದುಕೊಂಡಿದ್ದಾರೆ. ಬ್ಲಾಕ್ ಟ್ರೇಡಿಂಗ್‌ನಲ್ಲಿ ಅಧಿಕ ಲಾಭ ಗಳಿಸುವ ಬಗ್ಗೆ ಅಪರಿಚಿತ ನಂಬರ್‌ನಿಂದ ಬಂದಿದ್ದ ಸಂದೇಶವನ್ನು ನಂಬಿ ಟ್ರೇಡಿಂಗ್ ಬಗ್ಗೆ ವಿಚಾರಿಸಿ, ತಿಳಿದುಕೊಂಡೆ. ನಂತರ ಅವರು ಕಳುಹಿಸಿದ ಲಿಂಕ್ ಮೇಲೆ ಕ್ಲಿಕ್ ಮಾಡಿ, ಬಳಕೆದಾರರ ಹೆಸರು, ಪಾಸ್‌ವರ್ಡ್ ಕ್ರಿಯೇಟ್ ಮಾಡಿ ಟ್ರೇಡಿಂಗ್ ಅಕೌಂಟ್ ಓಪನ್ ಮಾಡಿದೆ. ನಂತರ ಟ್ರೇಡಿಂಗ್ ಉದ್ದೇಶಕ್ಕಾಗಿ ಅವರು ತಿಳಿಸಿದ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆ ಮಾಡಿದೆ. ನಂತರ ಕಮಿಷನ್, ಕ್ಯಾಪಿಟಲ್ ಗೇಯ್ನ್ ಟ್ಯಾಕ್ಸ್ ಎಂದು ಮತ್ತೆ ಹಣ ವರ್ಗಾಯಿಸಿಕೊಂಡರು. ಬಳಿಕ ಹಣ ವಿತ್‌ಡ್ರಾ ಮಾಡಲು ಪ್ರಯತ್ನಿಸಿದಾಗ ನೀವು ಮನಿಲಾಂಡ್ರಿಂಗ್ ಮಾಡುತ್ತಿದ್ದೀರಾ ಎಂದು ಬೆದರಿಸಿ, ಮತ್ತೆ 11 ಲಕ್ಷ ಹಣ ವರ್ಗಾವಣೆ ಮಾಡುವಂತೆ ಒತ್ತಾಯಿಸಿದ್ದಾಗಿ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ.

ಎಂ. ಸೌಂದರ್ಯಗೆ ಪಿಹೆಚ್.ಡಿ



ಮೈಸೂರು, ಜೂ.1– ಡಾ. ಎಂ.ಆರ್. ಜನಾರ್ಧನ್ ಅವರ ಮಾರ್ಗದರ್ಶನದಲ್ಲಿ ಎಂ. ಸೌಂದರ್ಯ ಭೂ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಮಿತ್ರ ಸೋಮವಾರ 2 ಜೂನ್ 2025

ಕೆಆರ್‌ಎಸ್ ಪ್ರವೇಶ, ಪಾರ್ಕಿಂಗ್ ಶುಲ್ಕ ಹೆಚ್ಚಳಕ್ಕೆ ಭಾರೀ ವಿರೋಧ, ಆಕ್ರೋಶ

● ಶೌಚಾಲಯ ಸರಿ ಇಲ್ಲ, ನೀರಿಲ್ಲ, ದರ ಹೆಚ್ಚಳ ಯಾಕೆ? ● ಅವೈಜ್ಞಾನಿಕ ನಿರ್ಧಾರ, ನಮಗೆಲ್ಲ ಹೊರೆ



ಕೆಆರ್‌ಎಸ್, ಜೂ.1– ವಿಶ್ವವಿಖ್ಯಾತ ಕೃಷ್ಣರಾಜ ಸಾಗರ(ಕೆಆರ್‌ಎಸ್) ಬೃಂದಾವನ ಪ್ರವೇಶ ದರ ಮತ್ತು ವಾಹನ ಪಾರ್ಕಿಂಗ್ ಶುಲ್ಕ ಹೆಚ್ಚಳ ಮಾಡಿರುವುದರ ಬಗ್ಗೆ ಪ್ರವಾಸಿಗರು ಅಸಮಾಧಾನಗೊಂಡಿದ್ದು, ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಭಾನುವಾರದಿಂದ ಈ ಪರಿಷ್ಕೃತ ದರ ಏರಿಕೆಯಾಗಿರುವುದರಿಂದ ಪ್ರವಾಸಿಗರು ಮತ್ತು ಸಾರ್ವಜನಿಕರು ಇಲ್ಲಿ ಯಾವುದೇ ರೀತಿಯ ಮೂಲಸೌಕರ್ಯಗಳಿಲ್ಲ. ಆದರೆ ದರ ಮಾತ್ರ ಹೆಚ್ಚಳ ಮಾಡಿರುವುದು ಯಾವ ನ್ಯಾಯ? ಎಂದು ಪ್ರಶ್ನಿಸಿದ್ದಾರೆ.

ಕಳೆದ ಕೆಲ ದಿನಗಳ ಹಿಂದೆ ಬೃಂದಾವನ ಪ್ರವೇಶ ದರ ಮತ್ತು ಪಾರ್ಕಿಂಗ್ ಶುಲ್ಕ ಸೇರಿದಂತೆ ಇನ್ನಿತರ ದರಗಳನ್ನು ಹೆಚ್ಚಿಸಿದುದನ್ನು ಖಂಡಿಸಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ರೈತರು, ಸಾರ್ವಜನಿಕರು ಪ್ರತಿಭಟನೆ ನಡೆಸಿದ್ದರು. ಈ ವೇಳೆ ಹೊಸ ದರ ತಡೆ ಹಿಡಿದು ಹಳೆಯ ದರವನ್ನೇ ಮುಂದುವರೆಸಲಾಗಿತ್ತು ಆದರೆ ಮತ್ತೆ ಪ್ರವೇಶ ದರ, ಪಾರ್ಕಿಂಗ್ ಶುಲ್ಕ ಹಾಗೂ ಟೋಲ್ ದರ ಹೆಚ್ಚಳ ಮಾಡಿರುವುದು ಪ್ರವಾಸಿಗರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಈ ದರ ಹೆಚ್ಚಳದಿಂದ ಎಲ್ಲೋ ಬೋರ್ಡ್ ವಾಹನ ಚಾಲಕರಿಗೂ ಭಾರಿ ಹೊಡೆತ ಬಿದ್ದಿದೆ. ಟೋಲ್ ದರ ಪಡೆಯುವುದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದರಿಂದ ಸ್ಥಳೀಯರು ನಿಟ್ಟುಸಿರು ಬಿಟ್ಟಿದ್ದರು. ಈಗ ಮತ್ತೆ ಟೋಲ್ ಪ್ರಾರಂಭಿಸಿರುವುದು ಕೂಡ ಪ್ರವಾಸಿಗರು ಹಾಗೂ ಈ ಭಾಗದ ಸ್ಥಳೀಯರು ಹಾಗೂ ಸ್ಥಳೀಯ ಲಾರಿ ಡ್ರೈವರ್‌ಗಳಿಗೂ ಮಾರಕವಾಗಿ ಪರಿಣಮಿಸಿದೆ.

ಈಗಲಾದರೂ ದರ ಕಡಿತ ಮಾಡಿ ಚಾಲಕರು ಹಾಗೂ ಪ್ರವಾಸಿಗರ ಆತಂಕ ಕಡಿಮೆ ಮಾಡಬೇಕೆಂದು ಹಲವು ಚಾಲಕರು ಹಾಗೂ ಪ್ರವಾಸಿಗರು ಒತ್ತಾಯಿಸಿದ್ದಾರೆ.

ಕೆಆರ್‌ಎಸ್ ಕೇವಲ ಪ್ರವಾಸಿ ತಾಣವಲ್ಲ, ಇದು ಕನ್ನಡರಿಗೆ ಭಾವನಾತ್ಮಕ ಸಂಬಂಧ ಇದೆ. ನಮ್ಮ ಮೈಸೂರು ಅರಸರು ಅವರ ಮನೆ ಒಡವೆ ಅಡವಿಟ್ಟು ಪ್ರಜೆಗಳಿಗಾಗಿ ಕಟ್ಟಿಸಿದ ಅಣೆಕಟ್ಟೆ ಇದು. ಇಲ್ಲಿಗೆ ಭೇಟಿ ನೀಡುವುದೇ ಒಂದು ರೋಮಾಂಚಕ ಸಂಗತಿ. ಆದರೆ ಇಲ್ಲಿ ಪಾರ್ಕಿಂಗ್ ಹಾಗೂ ಪ್ರವೇಶ ಶುಲ್ಕವನ್ನು ದುಪ್ಪಟ್ಟು ಹೆಚ್ಚಿಸಿರುವುದು ಖಂಡನೀಯ ಎಂದು ಪ್ರವಾಸಿಗರು ಇಂದು ಆಕ್ರೋಶ ವ್ಯಕ್ತಪಡಿಸಿದರು.

ನಾವು ಗಮನಿಸಿದಂತೆ ಶೌಚಾಲಯ ಬಹಳ ಕೆಟ್ಟದಾಗಿದೆ. ಅದಕ್ಕೂ ಪ್ರತ್ಯೇಕ ಹಣ ಪಡೆಯುತ್ತಿದ್ದು, ಆ ಹಣಕ್ಕೆ ಟಿಕೆಟ್ ಇಲ್ಲ. ಕುಡಿಯುವ ನೀರಿನ ವ್ಯವಸ್ಥೆ ಸಹ ಇಲ್ಲ. ಹೀಗಿರುವಾಗ ಮೊದಲು ಸೂಕ್ತ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಿ. ಆನಂತರ ಇವರು ದರ ಹೆಚ್ಚಿಸಲಿ ಎಂದು ಪ್ರವಾಸಿಗರು ಅಸಮಾಧಾನ ಹೊರಹಾಕಿದ್ದಾರೆ.

ಮಕ್ಕಳ ಪ್ರವೇಶ ದರವನ್ನು ಕೂಡ ಹೆಚ್ಚಿಸಲಾಗಿದೆ. ಇದರಿಂದ ಮಕ್ಕಳನ್ನು ಕೆಆರ್‌ಎಸ್‌ಗೆ ಕರೆತರಬೇಕೆ? ಬೇಡವೇ? ಎಂಬ ಗೊಂದಲ ನಮಗಾಗಿದೆ. ಇದೊಂದು ಅವೈಜ್ಞಾನಿಕ ನಿರ್ಧಾರ. ನಮಗೆ ಹೊರೆಯಾಗಿರುವ ಶುಲ್ಕ ಏರಿಕೆಯನ್ನು ಕೈ ಬಿಡಬೇಕೆಂದು ಆಗ್ರಹಿಸಿದರು.

ಕಮಲಹಾಸನ್ ವಿರುದ್ಧ ಜಯಕರ್ನಾಟಕ ಪ್ರತಿಭಟನೆ



ಕೆ.ಆರ್.ಪೇಟೆ, ಜೂ.1– ಕನ್ನಡಭಾಷೆಯು ತಮಿಳು ಭಾಷೆಯಿಂದ ಹುಟ್ಟಿದೆ ಎಂದು ಹೇಳಿರುವ ತಮಿಳು ನಟ ಕಮಲಹಾಸನ್ ವಿರುದ್ಧ ತಾಲೂಕು ಜಯಕರ್ನಾಟಕ ಸಂಘಟನೆಯು ಪ್ರತಿಭಟನೆ ನಡೆಸಿತು.

ಕನ್ನಡ ಭಾಷೆಯು ಸುಮಾರು ಎರಡೂವರೆ ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿದೆ. ತಮಿಳುಭಾಷೆ ಕೇವಲ 1000 ವರ್ಷಗಳ ಭಾಷೆಯಾಗಿದೆ. ತಮಿಳು ಭಾಷೆಯು ತುಳು ಮತ್ತು ಮಲಯಾಳಂ ಭಾಷೆಗಳು ಹುಟ್ಟಿದ ನಂತರ ಹುಟ್ಟಿದ ಭಾಷೆಯಾಗಿದೆ. ತಮಿಳುಭಾಷೆಯಲ್ಲಿ ಶೇ.90ರಷ್ಟು ಮಲಯಾಳಂ, ಶೇ.25ರಷ್ಟು ದಕ್ಷಿಣ ಕನ್ನಡದ ಲಿಪಿಯಿಲ್ಲದ ತುಳು ಭಾಷೆಯ ಮಿಶ್ರಣವಾಗಿದೆ. ಕನ್ನಡ ಭಾಷೆಯು ಹಿಂದಿಗಿಂತಲೂ ಹಳೆಯ ಭಾಷೆಯಾಗಿದೆ ಎಂದು ಜಯಕರ್ನಾಟಕ ಸಂಘಟನೆಯ ಅಧ್ಯಕ್ಷ ಸೋಮಶೇಕರ್ ತಿಳಿಸಿದರು.

ತಾಲೂಕು ಜಯಕರ್ನಾಟಕ ಸಂಘಟನೆಯ ಕಾರ್ಯಾಧ್ಯಕ್ಷ ಕೆರೆಕೋಡಿ ಆನಂದ್, ತಾಲೂಕು ಜಯಕರ್ನಾಟಕ ಸಂಘಟನೆಯ ಯುವ ಘಟಕದ ಅಧ್ಯಕ್ಷ ಕೆ.ಎಲ್.ಮಹೇಶ್, ನಗರ ಘಟಕದ ಅಧ್ಯಕ್ಷ ಮೋಹನ್, ಮಹಿಳಾ ಘಟಕದ ಅಧ್ಯಕ್ಷೆ ಜಯಲಕ್ಷ್ಮಿ, ಪದಾಧಿಕಾರಿಗಳಾದ ಎಂ.ಸಿ.ಜಗದೀಶ್, ಮನು, ಅಕ್ಷಯ್, ಶಿವು, ಶಂಕರ್ ಭಾಗವಹಿಸಿದ್ದರು.

ಆಧುನಿಕ ಭಾರತ ನಿರ್ಮಾಣಕ್ಕೆ ನಾಲ್ವಡಿ ಕೊಡುಗೆ ದೊಡ್ಡದು

ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಮರಣೋತ್ತರ ಭಾರತ ರತ್ನ ನೀಡುವಂತೆ ಈ.ಸಿ.ನಿಂಗರಾಜ್‌ಗೌಡ ಒತ್ತಾಯ



ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಉದ್ಘಾಟಿಸಿದ ಗಣ್ಯರು.

ಮಂಡ್ಯ, ಜೂ.1– ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಆಡಳಿತವು ಶಿಕ್ಷಣ, ಸಾಮಾಜಿಕ ನ್ಯಾಯ, ಕೈಗಾರಿಕೆ, ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಆಧುನಿಕ ಭಾರತಕ್ಕೆ ಮಾದರಿಯಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ ತಿಳಿಸಿದರು.

ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಫಿಲಂಸ್ ವತಿಯಿಂದ ಭಾನುವಾರ ನಗರದ ಕರ್ನಾಟಕ ಸಂಘದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಡೆದ 12ನೇ ಅಖಿಲ ಕರ್ನಾಟಕ ಕನ್ನಡ ಅಕ್ಷರ ಜಾತ್ರೆ ಹಾಗೂ ವಿವಿಧ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಮಾತನಾಡಿದರು.

ನಾಲ್ವಡಿ ಅವರ ಆಡಳಿತವನ್ನು ಮೈಸೂರಿನ ಸುವರ್ಣಯುಗ ಎಂದು ಕರೆಯಲಾಗುತ್ತದೆ. ಅವರು ಮಹಿಳಾ ಶಿಕ್ಷಣ, ದಲಿತರ ಉನ್ನತಿ, ವಿಜ್ಞಾನ ಮತ್ತು ತಂತ್ರಜ್ಞಾನ, ಕೈಗಾರಿಕಾ ಅಭಿವೃದ್ಧಿ, ಮತ್ತು ಸಾಮಾಜಿಕ ಸುಧಾರಣೆಗೆ ಹೆಚ್ಚಿನ ಒತ್ತು ನೀಡಿದರು. 1907ರಲ್ಲಿ ಮೈಸೂರು ಪ್ರತಿನಿಧಿ ಸಭೆಯನ್ನು ದ್ವಿಸಭಾ ವ್ಯವಸ್ಥೆಯಾಗಿ ಪರಿವರ್ತಿಸಿದರು. ಅವರು ಮೈಸೂರು ವಿಶ್ವವಿದ್ಯಾಲಯದ ಸ್ಥಾಪಕರಾಗಿದ್ದು, ಬನಾರಸ್ ಹಿಂದೂ ವಿಶ್ವ ವಿದ್ಯಾಲಯದ ಮೊದಲ ಕುಲಪತಿಗಳಾಗಿದ್ದರು. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಅನ್ನು ಸ್ಥಾಪಿಸಲು 371 ಎಕರೆ ಭೂಮಿಯನ್ನು ದಾನವಾಗಿ ನೀಡಿದರು. ಬೆಂಗಳೂರಿನಲ್ಲಿ ಹೆಚ್‌ಎಎಲ್ ಸ್ಥಾಪಿಸಲು ನೆರವಾದರು ಎಂದು ಶ್ಲಾಘಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಹಾಗೂ ಕವಿ ಡಿ.ಎಸ್.ವೀರಯ್ಯ ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ದೇಶಕ್ಕೆ ಮಾದರಿ. ಅವರ ಆಡಳಿತ, ಸಾಮಾಜಿಕ ಸೇವೆ ಅನನ್ಯವಾದದ್ದು. ಜನರ ಸಮಸ್ಯೆಗಳ ಬಗ್ಗೆ ಅವರಿಗೆ ಅರಿವಿತ್ತು ಮಂಡ್ಯ ಜಿಲ್ಲೆ ಶ್ರೀಮಂತವಾಗಿ ಸಮೃದ್ಧಿಯಾಗಿದೆ. ಇದಕ್ಕೆ ನಾಲ್ವಡಿ ಅವರ ಕೊಡುಗೆ ಕಾರಣ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸೇವೆ ಪರಿಗಣಿಸಿ ಮರಣೋತ್ತರ ಭಾರತ ರತ್ನ ನೀಡಿ ಗೌರವಿಸುವಂತೆ ಮೈಸೂರು ವಿಶ್ವವಿದ್ಯಾನಿಲಯದ ಮಾಜಿ ಸಿಂಡಿಕೇಟ್ ಸದಸ್ಯ ಈಸಿ.ನಿಂಗರಾಜ್ ಗೌಡ ಒತ್ತಾಯಿಸಿ, ಕಾರ್ಯಕ್ರಮದಲ್ಲಿ ನಿರ್ಣಯ ಕೈಗೊಂಡರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಬಿ.ಸುನೀಲ್ ಕುಮಾರ್, ಎಲ್.ಬಿ.ಮಂಜುನಾಥ್, ಮೀನಕೆರೆ ಆಂಜನಪ್ಪ, ಆರ್.ಭರಣಿ ಹರೀಶ್, ಡಾ.ನಾಗೇಶ್, ಎಂ.ಬಾಬು, ಸುಖಾನಂದಶೆಟ್ಟಿ, ಪಿ.ಎನ್.ಶ್ರೀನಾಥ್, ರಾಮಕೃಷ್ಣಯ್ಯ, ಎಚ್.ಟಿ.ಪಾರ್ವತಮ್ಮ, ಸಿರಿಗಂಧ ರಾಮಕೃಷ್ಣ, ಡಾ.ಶ್ರೀಧರ್ ಹೆಗಡೆ, ಕೆ.ಎನ್.ರಾಮು ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ವೇದಿಕೆಯಲ್ಲಿ ಖ್ಯಾತ ವೈದ್ಯ ಹಾಗೂ ಸಾಹಿತಿ ಡಾ.ಚಂದ್ರಶೇಖರ್, ಹಂಪಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ.ಚಿನ್ನಸ್ವಾಮಿ ಸೋಸಲೆ, ಶರಣ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಬನ್ನಂಗಾಡಿ ಸಿದ್ದಲಿಂಗಯ್ಯ, ಡಾ.ಜೀಶಂಪ ಸಾಹಿತ್ಯ ವೇದಿಕೆ ಅಧ್ಯಕ್ಷ ಎಸ್.ಕೃಷ್ಣ ಸ್ವರ್ಣಸಂದ್ರ ಪದಾಧಿಕಾರಿಗಳಾದ ಮಂಗಲ ಶಿವಣ್ಣ, ನಾಗೇಶ್ ರಾಗಿಮುದ್ದನಹಳ್ಳಿ, ರೂಪ ಹೊಸಹಳ್ಳಿ ಉಪಸ್ಥಿತರಿದ್ದರು.

ಶಂಕನಹಳ್ಳಿ ಡೇರಿ ಅಧ್ಯಕ್ಷೆ, ಉಪಾಧ್ಯಕ್ಷೆ, ನಿರ್ದೇಶಕರನ್ನು ಅಭಿನಂದಿಸಿದ ಪುಟ್ಟರಾಜು



ಅಧ್ಯಕ್ಷೆ, ಉಪಾಧ್ಯಕ್ಷೆ, ನಿರ್ದೇಶಕರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿನಂಧಿಸಿದರು.

ಚಿನಕುರಳಿ: ತಾಲೂಕಿನ ಶಂಕನಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಜೆಡಿಎಸ್ ಬೆಂಬಲಿತ ನೂತನ ಅಧ್ಯಕ್ಷೆ ಶೃತಿ, ಉಪಾಧ್ಯಕ್ಷೆ ಶಶಿರೇಖಾ ಮತ್ತು ನೂತನ ನಿರ್ದೇಶಕರನ್ನು ಗ್ರಾಮದ ಪ್ರವಾಸಿ ಮಂದಿರದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಭಾನುವಾರ ಅಭಿನಂದಿಸಿದರು.

ಬಳಿಕ ಮಾತನಾಡಿದ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು, ಶಂಕನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದಲ್ಲಿ ಇರುವ 10 ಮಂದಿ ನಿರ್ದೇಶಕರ ಸ್ಥಾನದ ಪೈಕಿ 8 ಮಂದಿ ಜೆಡಿಎಸ್ ಬೆಂಬಲಿತ ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದರು. ಇದೀಗ ಅಧ್ಯಕ್ಷ–ಉಪಾಧ್ಯಕ್ಷ ಸ್ಥಾನದ ಚುನಾವಣೆಯಲ್ಲೂ ಅಧ್ಯಕ್ಷರಾಗಿ ಶೃತಿ, ಉಪಾಧ್ಯಕ್ಷೆಯಾಗಿ ಶಶಿರೇಖಾ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ತಾಲೂಕಿನಲ್ಲಿ ನಡೆದ ಬಹುತೇಕ ಸಹಕಾರ ಸಂಘದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಸದಸ್ಯರು ಆಯ್ಕೆಯಾಗುವ ಮೂಲಕ ಪಕ್ಷವನ್ನು ಬಲಪಡಿಸುವ ಕೆಲಸ ಮಾಡಿದ್ದಾರೆ ಎಂದು ತಿಳಿಸಿದರು.

ವಿಶ್ವಹಿಂದೂಪರಿಷತ್, ಭಜರಂಗದಳ ದೂರಿನ ಮೇರೆಗೆ

ಗೋಮಾಂಸ ಮಾರಾಟ ಮಾಡುತ್ತಿದ್ದ ಮನೆ ಮೇಲೆ ಪೊಲೀಸರ ದಾಳಿ

ಇಬ್ಬರ ಬಂಧನ, ಗೋಮಾಂಸ, ಜೀವಂತ ಹಸುಗಳ ವಶ



ಗೋಮಾಂಸ ಮಾರಾಟದ ಖಸಾಯಿ ಖಾನೆಯ ಮೇಲೆ ಪೊಲೀಸರು ದಾಳಿ ನಡೆಸಿರುವುದು.

ಪಾಂಡವಪುರ: ಪಟ್ಟಣದ ಪೊಲೀಸ್ ಠಾಣೆಯ ಮುಂಭಾಗದ ಬಡಾವಣೆಯಲ್ಲಿ ಹಲವಾರು ತಿಂಗಳಿಂದ ನಡೆಯುತ್ತಿದ್ದ ಗೋ ಮಾಂಸ ಮಾರಾಟದ ಖಸಾಯಿ ಖಾನೆ ಮೇಲೆ ವಿಶ್ವ ಹಿಂದೂ ಪರಿಷತ್, ಬಜರಂಗದಳ ಕಾರ್ಯಕರ್ತರ ದೂರಿನ ಮೇರೆಗೆ ಪೊಲೀಸರು ದಾಳಿ ನಡೆಸಿ ಗೋ ಮಾಂಸ ಹಾಗೂ ಹಸುಗಳನ್ನು ವಶಕ್ಕೆ ಪಡೆದು, ಮಾಂಸ ಮಾರಾಟ ಮಾಡುತ್ತಿದ್ದ ಇಬ್ಬರು ವ್ಯಕ್ತಿಗಳನ್ನು ಬಂಧಿಸಿದ್ದಾರೆ.

ಪಟ್ಟಣದ ಬಸವನಗುಡಿ ನಿವಾಸಿ ಸೈಮನ್ ಹಾಗೂ ಆರೋಗ್ಯದಾಸ್ ಬಂಧಿತ ಆರೋಪಿಗಳು. ಇವರಿಂದ ಗೋಮಾಂಸ ಹಾಗೂ ಏಳು ಜೀವಂತ ಹಸುಗಳನ್ನು ವಶಕ್ಕೆ ಪಡೆದು ಗೋಶಾಲೆಗೆ ಬಿಡಲಾಗಿದೆ.

ಬಂಧಿತ ಆರೋಪಿಗಳು ಪೊಲೀಸ್ ಠಾಣೆಯ ಮುಂಭಾಗದ ಬಸವನಗುಡಿ ಬಡಾವಣೆಯಲ್ಲಿ ಹೊರಗಡೆ ಯಿಂದ ಜೀವಂತ ಹಸುಗಳನ್ನು ತಂದು ಕತ್ತರಿಸಿ ಗೋಮಾಂಸ ಮಾರಾಟ ಮಾಡುತ್ತಿದ್ದರು. ಆರೋಪಿಗಳು ಗೋಮಾಂಸ ಮಾರಾಟ ಮಾಡುತ್ತಿರುವ ವಿಚಾರ ಸ್ಥಳೀಯ ಪೊಲೀಸರಿಗೂ ತಿಳಿದಿದ್ದರೂ ಮೌನವಹಿಸಿದ್ದರು ಎನ್ನಲಾಗಿದೆ.

ಆರೋಪಿ ಸೈಮನ್ ಭಾನುವಾರ ಗೋಮಾಂಸ ಮಾರಾಟ ಮಾಡುತ್ತಿರುವ ವಿಚಾರ ತಿಳಿದ ವಿಶ್ವ ಹಿಂದೂ ಪರಿಷತ್, ಭಜರಂಗದಳ ಕಾರ್ಯಕರ್ತರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಗಮನಕ್ಕೆ ತಂದು ಅವರ ಸೂಚನೆಯ ಮೇರೆಗೆ ಪೊಲೀಸರು ದಾಳಿ ನಡೆಸಿ ಕ್ರಮಕೈಗೊಂಡರು. ವಿಶ್ವಹಿಂದೂಪರಿಷತ್, ಬಜರಂಗದಳದ ತಾಲೂಕು ಅಧ್ಯಕ್ಷ ಮಾಜಿ ಸೈನಿಕ ಕೆನ್ನಾಳು ಕಮಲೇಶ್, ಕಾರ್ಯದರ್ಶಿ ಕೇಶವ ಡಿ.ಕೆ., ಸಂಚಾಲಕ ಅರಳಕುಪ್ಪೆ ಯೋಗೇಶ್, ಶಂಕರ ಸೇರಿದಂತೆ ಸಬ್ ಇನ್ಸ್‌ಪೆಕ್ಟರ್ ಉಮೇಶ್ ಅವರುಗಳು ದಾಳಿಯ ವೇಳೆ ಉಪಸ್ಥಿತರಿದ್ದರು.

ಚಲುವರಾಯಸ್ವಾಮಿ ಹುಟ್ಟುಹಬ್ಬ ಅರ್ಥಪೂರ್ಣವಾಗಿ ಆಚರಣೆ



ಮಂಡ್ಯ, ಜೂ.1– ಕೃಷಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಹುಟ್ಟುಹಬ್ಬವನ್ನು ಮಂಡ್ಯ ನಗರ ಸೇರಿದಂತೆ ಜಿಲ್ಲೆಯ ವಿವಿಧೆಡೆ ಬೆಂಬಲಿಗರು ಅರ್ಥಪೂರ್ಣವಾಗಿ ಆಚರಿಸಿದರು.

ನಗರದ ವಿದ್ಯಾನಗರದಲ್ಲಿರುವ ಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ, ಮಿಮ್ಸ್ ಆವರಣದ ಮಮತೆಯ ಮಡಿಲುನಲ್ಲಿ ರೋಗಿಗಳಿಗೆ ಮತ್ತು ಅವಲಂಭಿತರಿಗೆ ಉಪಹಾರ ಹಾಗೂ ಊಟದ ವ್ಯವಸ್ಥೆ ಮಾಡಿ, ಮಿಮ್ಸ್ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ನೆರವೇರಿಸಿ, ಸೇವಾಕಿರಣ ವೃದ್ಧಾಶ್ರಮದ ವೃದ್ದರಿಗೆ ಬೆಡ್ ಶೀಟ್ ವಿತರಣೆ ಮಾಡಿ, ಪ್ರೇರಣಾ ಅಂಧರ ಶಾಲೆಯ ಮಕ್ಕಳಿಗೆ ಬೆಳಗಿನ ಉಪಹಾರ ವಿತರಿಸಿ ಅರ್ಥಪೂರ್ಣವಾಗಿ ಹುಟ್ಟುಹಬ್ಬ ಆಚರಣೆ ನೆರವೇರಿತು.

ತಾಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಸಿ.ತ್ಯಾಗರಾಜು, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಕಂಬದಹಳ್ಳಿ ಪುಟ್ಟಸ್ವಾಮಿ, ಮಾಜಿ ಶಾಸಕ ಹೆಚ್.ಬಿ.ರಾಮು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಸಫಾರಿಗೆ ಹೊಸ ದರ ನಿಗದಿ

ಪರಿಷ್ಕರಣೆಯಿಂದಾಗಿ ಹೆಚ್ಚಿನ ಪ್ರವಾಸಿಗರು ಸಫಾರಿಗೆ ತೆರಳಲು ಅವಕಾಶ ದೊರಕಿದಂತಾಗಿದ್ದು, ವನ್ಯಜೀವಿ ಪ್ರೇಮಿಗಳು ಪರಿಷ್ಕರಣೆಗೊಂಡ ಸಮಯಕ್ಕೆ ಹರ್ಷ ವ್ಯಕ್ತಪಡಿಸಿದ್ದಾರೆ.

ಕಾಕನಕೋಟೆ: ಹೆಚ್.ಡಿ.ಕೋಟೆ ತಾಲೂಕಿನ ಅಂತರಸಂತೆ ವಲಯದ ಕಾಕನಕೋಟೆ ಸಫಾರಿ ಕೇಂದ್ರದಿಂದ ಇದುವರೆಗೆ ಬಸ್‌ನಲ್ಲಿ 3 ಗಂಟೆಯ ಅವಧಿಗೆ ಸಫಾರಿಗೆ ಒಬ್ಬರಿಗೆ 865 ರೂ., ಮಕ್ಕಳಿಗೆ 430 ರೂ., ಜೀಪ್‌ನಲ್ಲಿ ಸಫಾರಿಗೆ ತೆರಳಲು ಒಬ್ಬರಿಗೆ 855 ರೂ. ದರ ನಿಗದಿ ಮಾಡಲಾಗಿತ್ತು. ಹೊಸ ವೇಳಾಪಟ್ಟಿಯಂತೆ ಇಂದಿನಿಂದ ಬೆಳಗ್ಗೆ ಮತ್ತು ಸಂಜೆ 2 ಗಂಟೆ ಅವಧಿಯ 2 ಬಾರಿ ಸಫಾರಿಗೆ ವ್ಯವಸ್ಥೆ ಮಾಡಲಾಗಿದೆ. ಬೆಳಗ್ಗೆ 6ರಿಂದ 8 ಗಂಟೆ, 8.15ರಿಂದ 10.15ರವರೆಗೆ, ಮಧ್ಯಾಹ್ನ 2.15ರಿಂದ 4.15 ಗಂಟೆ, 4.30ರಿಂದ 6.30ರವರೆಗೆ ಸಫಾರಿ ವಾಹನ ತೆರಳಲಿದೆ. ಬಸ್‌ನಲ್ಲಿ 2 ಗಂಟೆ ಅವಧಿಯ ಸಫಾರಿಗೆ 600 ರೂ., ಮಕ್ಕಳಿಗೆ 300 ರೂ. ದರ ನಿಗದಿ ಮಾಡಲಾಗಿದೆ. ಜೀಪ್‌ನಲ್ಲಿ ಸಫಾರಿ ಮಾಡುವವರಿಗೆ ತಲಾ 1000 ರೂ. ದರ ನಿಗದಿ ಮಾಡಲಾಗಿದೆ.

ವೀರನಹೊಸಹಳ್ಳಿ: ಹುಣಸೂರು ತಾಲೂಕಿನ ವೀರನಹೊಸಹಳ್ಳಿ ಗೇಟ್‌ನಿಂದ ಪ್ರತೀ ದಿನ ಬೆಳಗ್ಗೆ 6.15ರಿಂದ 9.45ರವರೆಗೆ, ಮಧ್ಯಾಹ್ನ 3ರಿಂದ 6.30ರವರೆಗೆ ಇರುವ ಬಸ್ ಸಫಾರಿಗೆ ವಯಸ್ಕರಿಗೆ 600 ರೂ., ಮಕ್ಕಳಿಗೆ 300 ರೂ., ಜೀಪ್‌ನಲ್ಲಿ ಸಫಾರಿ ಮಾಡಲು ತಲಾ 1000 ರೂ. ದರ ನಿಗದಿ ಮಾಡಲಾಗಿದೆ.

ನಾಣಚ್ಚಿಗೇಟ್: ಕೊಡಗು ಜಿಲ್ಲೆಯ ಕುಟ್ಟ ಸಮೀಪದ ನಾಣಚ್ಚಿ ಗೇಟ್ ಸಫಾರಿ ಕೇಂದ್ರದಿಂದ ಪ್ರತೀ ದಿನ ಬೆಳಗ್ಗೆ 6ರಿಂದ 8 ಗಂಟೆ, ಬೆಳಗ್ಗೆ 8.15ರಿಂದ 10.15ರವರೆಗೆ, ಮಧ್ಯಾಹ್ನ 2.15ರಿಂದ 4.15ರವರೆಗೆ, 4.30ರಿಂದ 6.30ರವರೆಗೆ ತಲಾ 2 ಗಂಟೆ ಅವಧಿಯ ಸಫಾರಿ ಇರಲಿದ್ದು, ಇದಕ್ಕೆ ಪ್ರತಿಯೊಬ್ಬರಿಗೆ 600 ರೂ. ಮಕ್ಕಳಿಗೆ 300 ರೂ., ಜೀಪ್ ಸಫಾರಿಗೆ 1000 ರೂ. ದರ ಪರಿಷ್ಕರಿಸಲಾಗಿದೆ.

ಕ್ಯಾಮರಾ ಚಾಲನೆ: ಸಫಾರಿ ವೇಳೆ ಪ್ರವಾಸಿಗರು ತೆಗೆದುಕೊಂಡು ಹೋಗುವ ಕ್ಯಾಮರಾಗಳಿಗೂ ದರ ಪರಿಷ್ಕರಿಸಲಾಗಿದೆ. ಲೆನ್ಸ್ ಇಲ್ಲದ ಡಿಎಸ್‌ಎಲ್‌ಆರ್ ಕ್ಯಾಮರಾ (70ಎಂಎಂ ಹಾಗೂ 200ಎಂಎಂ) ಕ್ಯಾಮರಾಗೆ ಯಾವುದೇ ಶುಲ್ಕವಿಲ್ಲ. 200 ಎಂಎಂನಿಂದ 500 ಎಂಎಂ ಲೆನ್ಸ್‌ವರೆಗೆ 1000 ರೂ. ಹಾಗೂ ಜಿಎಸ್‌ಟಿ, 500 ಎಂಎಂಗಿಂತ ಹೆಚ್ಚಿನ ಸಾಮರ್ಥ್ಯವುಳ್ಳ ಲೆನ್ಸ್ ತೆಗೆದುಕೊಂಡು ಬಂದರೆ 1500 ರೂ. ಮತ್ತು ಶೇ.18ರಷ್ಟು ಜಿಎಸ್‌ಟಿ ಪಾವತಿಸಬೇಕಾಗುತ್ತದೆ.

ಪಶ್ಚಿಮಘಟ್ಟದ ಧಾರಣಾ ಸಾಮರ್ಥ್ಯ ವರದಿಗೆ ಸೂಚನೆ

ಪಶ್ಚಿಮ ಘಟ್ಟದಲ್ಲಿ ಹಲವು ರಸ್ತೆಗಳು, ಇತರ ಯೋಜನೆಗಳ ಕಾಮಗಾರಿಗಳು ನಡೆಯುತ್ತಿವೆ. ಇದರಿಂದಾಗಿ ಘಟ್ಟ ಪ್ರದೇಶ ಅಪಾಯಕ್ಕೆ ಸಿಲುಕಿದೆ. ಆಸ್ತಿ ಹಾನಿ, ಬೆಳೆ ಹಾನಿ, ಜೀವ ಹಾನಿಯ ಜೊತೆಗೆ ವನ್ಯಜೀವಿಗಳೂ ಸಂಕಷ್ಟ ಎದುರಿಸುವಂತಾಗಿದೆ. ಪಶ್ಚಿಮ ಘಟ್ಟ ಕ್ಷೀಣಿಸಿದರೆ ಮುಂದಿನ ದಿನಗಳಲ್ಲಿ ತೀವ್ರ ಜಲಕ್ಷಾಮ ಎದುರಾಗುವ ಭೀತಿ ಇದೆ ಎಂದು ತಜ್ಞರು ಆತಂಕ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಅಧ್ಯಯನ ಮಾಡಿ ವರದಿ ಸಲ್ಲಿಸಿ ಎಂದು ಜೀವವೈವಿಧ್ಯ ಮಂಡಳಿ ಸದಸ್ಯ ಕಾರ್ಯದರ್ಶಿ, ಮೌಲ್ಯಮಾಪನ, ಕಾರ್ಯಯೋಜನೆ, ಸಂಶೋಧನೆ ಮತ್ತು ತರಬೇತಿ ಹಾಗೂ ಅರಣ್ಯ ಸಂರಕ್ಷಣೆ ವಿಭಾಗದ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗೂ ಸಚಿವರು ನಿರ್ದೇಶನ ನೀಡಿದ್ದಾರೆ.

ಮೊದಲ ದಿನವೇ ಭರ್ಜರಿ ರೆಸ್ಪಾನ್

ಎನ್ನುವ ಬಯಕೆಯನ್ನು ತಮ್ಮೊಳಗೆ ಇಟ್ಟುಕೊಂಡು ಅನೇಕರು ರಸ್ತೆಯಲ್ಲೇ ನಿಂತು ಕಣ್ತುಂಬಿಕೊಳ್ಳುತ್ತಿದ್ದರು. ಅಂತ ವರು ಇನ್ನು ಮುಂದೆ ಆಡಳಿತ ಶಕ್ತಿ ಕೇಂದ್ರ ವಿಧಾನಸೌಧದ ಒಳಗೆ ನೋಡಲು ಮಾರ್ಗದರ್ಶಿ ಪ್ರವಾಸ ಶುರು ಮಾಡಿದೆ.

ಸಾರ್ವಜನಿಕರಿಗೆ, ಪ್ರವಾಸಿಗರಿಗೆ ವಿಧಾನಸೌಧ ಪ್ರವಾಸಕ್ಕೆ ಮುಕ್ತವಾದ ಮೊದಲ ದಿನವೇ ವಿಧಾನಸೌಧ ಟೂರ್‌ಗೆ ಭರ್ಜರಿ ರೆಸ್ಪಾನ್ಸ್ ಸಿಕ್ಕಿದೆ. ಮೊದಲ ದಿನ ತಲಾ 25–30 ಜನ ಇರುವ ನಾಲ್ಕೈದು ಬ್ಯಾಚ್‌ಗಳ ಮೂಲಕ ಪ್ರವಾಸಿಗರು ವಿಧಾನ ಸೌಧದ ಒಳಗೆಲ್ಲಾ ಸುತ್ತಾಡಿ, ಅದರ ಸೌಂದರ್ಯವನ್ನು ತಮ್ಮ ಕಣ್ಮನದೊಳಗೆ ತುಂಬಿಕೊಂಡರು. ಕುಟುಂಬ, ಸ್ನೇಹಿತ ರೊಂದಿಗೆ ಬಂದ ಹಲವರು ವಿಧಾನ ಸೌಧದ ಒಳಗೆ, ಹೊರಗೆ ಸುತ್ತಾಡಿ ಖುಷಿಪಟ್ಟರು. ಸದ್ಯಕ್ಕೆ ಹತ್ತು ಗೈಡ್‌ಗಳು ಪ್ರವಾಸಿಗರಿಗೆ ವಿಧಾನಸೌಧ ವೀಕ್ಷಣೆ ಮಾಡಿಸುವ ಕೆಲಸ ಮಾಡುತ್ತಿದ್ದಾರೆ. ಈ ಮೂಲಕ ಪ್ರವಾಸಿಗರಿಗೆ ವಿಧಾನಸೌಧದ ಮಹತ್ವ, ಇತಿಹಾಸ, ಪರಂಪರೆ, ಅಧಿವೇಶನ ಸಭಾಂಗಣ, ಮಹಾತ್ಮಾಗಾಂಧಿ ಪ್ರತಿಮೆ, ವಿಧಾನಸೌಧ ನಿರ್ಮಾತೃ ಕೆಂಗಲ್ ಹನುಮಂತಯ್ಯ ಪ್ರತಿಮೆ, ವಿಧಾನಸೌಧ ಫೌಂಡೇಷನ್ ಕಲ್ಲು, ಗ್ಯಾಲರಿಗಳು, ವಿಧಾನಸೌಧದ ಕಾರಿಡಾರ್‌ಗಳು, ಕಟ್ಟಡ ವೈಶಿಷ್ಟ್ಯಗಳ ಮಾಹಿತಿ ನೀಡಿದರು.

ಪ್ರತೀ ಭಾನುವಾರ, ಎರಡನೇ ಹಾಗೂ 4ನೇ ಶನಿವಾರ ವಿಧಾನಸೌಧ ಟೂರ್‌ಗೆ ಅವಕಾಶವಿರುತ್ತದೆ. 16 ವರ್ಷ ಮೇಲ್ಪಟ್ಟ ಎಲ್ಲರಿಗೂ ತಲಾ 50 ರೂ, 15 ವರ್ಷದೊಳಗಿನ ಮಕ್ಕಳಿಗೆ ಹಾಗೂ ಎಸ್‌ಎಸ್ ಎಲ್‌ಸಿವರೆಗಿನ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ ಇರಲಿದ್ದು, ಬೆಳಿಗ್ಗೆ 8 ರಿಂದ ಸಂಜೆ 5 ಗಂಟೆವರೆಗೆ ಅವಕಾಶವಿರಲಿದೆ.

ಬೆಂಗಳೂರು–ಪಂಜಾಬ್ ಫೈನಲ್ ಹಣಾಹಣಿ

ಮುಂಬೈ ಪರ ಇನ್ನಿಂಗ್ಸ್ ಆರಂಭಿಸಿದ ರೋಹಿತ್ ಶರ್ಮಾ 8 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. 3ನೇ ಕ್ರಮಾಂಕಕ್ಕೆ ಬಡ್ತಿ ಪಡೆದು ಬಂದ ತಿಲಕ್ ವರ್ಮಾ ಜಾನಿ ಬೈರ್‌ಸ್ಟೋವ್ ಜೊತೆಗೂಡಿ 51 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಪಂದ್ಯದಲ್ಲಿ ಅಬ್ಬರಿಸಿದ ಬೈರ್‌ಸ್ಟೋವ್ 24 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್ ಒಳಗೊಂಡ 38 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ತಿಲಕ್ ಜೊತೆಗೂಡಿದ ಸೂರ್ಯ ಕುಮಾರ್ 3ನೇ ವಿಕೆಟ್‌ಗೆ 42 ಎಸೆತಗಳಲ್ಲಿ 72 ರನ್‌ಗಳ ಜೊತೆಯಾಟ ನೀಡಿದರು. ಉತ್ತಮವಾಗಿ ಆಡುತ್ತಿದ್ದ ಸೂರ್ಯ ಕುಮಾರ್ ಯಾದವ್ 26 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್‌ಗಳ ಸಹಿತ 44 ರನ್ ಗಳಿಸಿ ವಿಕೆಟ್ ಒಪ್ಪಿಸಿದರೇ, ಇವರ ಹಿಂದೆಯೇ 29 ಎಸೆತಗಳಲ್ಲಿ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ 44 ರನ್ ಗಳಿಸಿ ತಿಲಕ್ ವರ್ಮಾ ಸಹ ವಿಕೆಟ್ ಒಪ್ಪಿಸಿದರು. ನಂತರ ಬಂದ ನಾಯಕ ಹಾರ್ದಿಕ್ ಪಾಂಡ್ಯ 1 ಬೌಂಡರಿ ಒಳಗೊಂಡ 15 ರನ್ ಗಳಿಸಿ ಔಟಾದರು. ಮತ್ತೊಂದೆಡೆ ಬಿರುಸಿನ ಬ್ಯಾಟಿಂಗ್ ಮಾಡಿದ ನಮನ್ ಧೀರ್ 18 ಬಾಲ್‌ಗಳಲ್ಲಿ 7 ಬೌಂಡರಿ ಒಳಗೊಂಡ 37 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಪಂಜಾಬ್ ಪರ ಅಜ್ಮತುಲ್ಲಾ ಒಮರ್ಜೈ 2, ಕೈಲ್ ಜೇಮಿಸನ್, ಮಾರ್ಕಸ್ ಸ್ಟೋಯಿನಿಸ್, ವಿಜಯ್ ಕುಮಾರ್ ವೈಶಾಕ್ ಹಾಗೂ ಯಜುವೇಂದ್ರ ಚಹಾಲ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ನಂತರ ಬೃಹತ್ ಗುರಿ ಬೆನ್ನತ್ತಿದ ಪಂಜಾಬ್ ಆರಂಭದಲ್ಲೇ 6 ರನ್ ಗಳಿಸಿದ್ದ ಪ್ರಭ್‌ಸಿಮ್ರಾನ್ ಸಿಂಗ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಜೊತೆಯಾದ ಪ್ರಿಯಾಂಶ್ ಆರ್ಯ ಹಾಗೂ ಜೋಶ್ ಇಂಗ್ಲಿಸ್ 42 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಆದರೆ 1 ಸಿಕ್ಸರ್, 2 ಬೌಂಡರಿ ಒಳಗೊಂಡ 20 ರನ್ ಗಳಿಸಿ ಪ್ರಿಯಾಂಶ್ ಆರ್ಯ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಇಂಗ್ಲಿಸ್ ಬಿರುಸಿನ 38 ರನ್ ಗಳಿಸಿದರು. 4ನೇ ವಿಕೆಟ್‌ಗೆ ಜೊತೆಯಾದ ನೇಹಲ್ ವಧೇರಾ ಹಾಗೂ ನಾಯಕ ಶ್ರೇಯಸ್ ಅಯ್ಯರ್ 4 ವಿಕೆಟ್‌ಗೆ 84ರನ್ ಜೊತೆಯಾಟವಾಡುವ ಮೂಲಕ ತಂಡವನ್ನು ಜಯದ ಹಾದಿಗೆ ತಂದರು. ಆದರೆ ಈ ಹಂತದಲ್ಲಿ 29 ಎಸೆತಗಳಲ್ಲಿ 2 ಸಿಕ್ಸ್ ಮತ್ತು 4 ಬೌಂಡರಿ ಸಹಿತ 48 ರನ್ ಗಳಿಸಿದ್ದ ನೇಹಲ್ ವಧೇರಾ ಔಟಾಗಿ 2 ರನ್‌ಗಳಿಂದ ಅರ್ಧಶತಕದಿಂದ ವಂಚಿತರಾದರು. ನಂತರ ಬಂದ ಶಶಾಂಕ್ ಸಿಂಗ್ 2 ರನ್ ಗಳಿಸಿ ರನೌಟ್ ಆದರು. ಪಂದ್ಯದಲ್ಲಿ ಮುಂಬೈ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಶ್ರೇಯಸ್ ಅಯ್ಯರ್ 41 ಎಸೆತಗಳಲ್ಲಿ 8 ಸಿಕ್ಸರ್, 5 ಬೌಂಡರಿ ಒಳಗೊಂಡ ಅಜೇಯ 87 ರನ್ ಗಳಿಸಿ ತಂಡಕ್ಕೆ ಜಯ ತಂದುಕೊಟ್ಟರು.

ಮುಂಬೈ ಪರ ಅಶ್ವನಿ ಕುಮಾರ್ 2, ಟ್ರೆಂಟ್ ಬೌಲ್ಟ್, ಹಾರ್ದಿಕ್ ಪಾಂಡ್ಯ ತಲಾ ಒಂದೊಂದು ವಿಕೆಟ್ ಪಡೆದರು. ಅಜೇಯ 87 ರನ್ ಬಾರಿಸಿದ ಪಂಜಾಬ್ ಕಿಂಗ್ಸ್ ನಾಯಕ ಶ್ರೇಯಸ್ ಅಯ್ಯರ್ ಪಂದ್ಯ ಪುರುಷೋತ್ತಮರಾದರು.

ವೈದ್ಯರ ನಿರ್ಲಕ್ಷ್ಯ ಆರೋಪ

ಪರಿಹಾರ ನೀಡಬೇಕು ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು.

ಮಿಮ್ಸ್ ನಿರ್ದೇಶಕರಿಗೆ ತರಾಟೆ; ಎಸ್ಪಿ ಮನವಿಗೂ ಜಗ್ಗದ ಪ್ರತಿಭಟನಾಕಾರರು: ಸ್ಥಳಕ್ಕೆ ಮಿಮ್ಸ್ ನಿರ್ದೇಶಕ ಡಾ.ನರಸಿಂಹಸ್ವಾಮಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸ್ಥಳಕ್ಕೆ ಆಗಮಿಸಿದಾಗ ಪ್ರತಿಭಟನಾಕಾರರು ತರಾಟೆಗೆ ತೆಗೆದುಕೊಂಡರು. ವೈದ್ಯರ ನಿರ್ಲಕ್ಷ್ಯದಿಂದಲೇ ಈ ಸಾವು ಸಂಭವಿಸಿದೆ. ಚಿಕಿತ್ಸೆಗಾಗಿ ಆಸ್ಪತ್ರೆಗೆ ಬರುವ ರೋಗಿಗಳ ಜೀವದ ಗ್ಯಾರಂಟಿಯೇ ಇಲ್ಲದಂತಾಗಿದೆ. ಮಿಮ್ಸ್ ವೈದ್ಯರು ಹೊರಗಡೆ ಕ್ಲಿನಿಕ್‌ಗಳಲ್ಲಿ ಕೆಲಸ ಮಾಡುತ್ತಾರೆ. ಇದರ ವಿರುದ್ಧ ನೀವು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ನಿರ್ಲಕ್ಷ್ಯ ವೈದ್ಯರ ಎಫ್‌ಐಆರ್ ದಾಖಲಿಸಿ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಮಾತನಾಡಿ, ಮಗು ಸಾವಿನ ಬಗ್ಗೆ ಸಂಪೂರ್ಣ ತನಿಖೆ ನಡೆಸಲಾಗುವುದು. ತಪ್ಪಿತಸ್ಥ ವೈದ್ಯರ ವಿರುದ್ಧ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ, ಮಗುವಿನ ಸಾವಿಗೆ ಪರಿಹಾರ ನೀಡುವ ಬಗ್ಗೆ ಜಿಲ್ಲಾಡಳಿತ ಕ್ರಮ ವಹಿಸಲಿದೆ. ಆದ್ದರಿಂದ ಬಾಲಕಿಯ ಶವಪರೀಕ್ಷೆ ನಡೆಸಲು ಅವಕಾಶ ಮಾಡಿಕೊಡಬೇಕೆಂದು ಪ್ರತಿಭಟನಾಕಾರರ ಮನವೊಲಿಸುವ ಪ್ರಯತ್ನ ಮಾಡಿದರು. ಆದರೆ ಇದಕ್ಕೆ ಒಪ್ಪದ ಪ್ರತಿಭಟನಾಕಾರರು ಕೂಡಲೇ ಕ್ರಮ ಆಗಬೇಕು ಎಂದು ಪಟ್ಟು ಹಿಡಿದು ಪ್ರತಿಭಟನೆ ಮುಂದುವರೆಸಿದರು.

ಮೈಸೂರಿನಲ್ಲಿ ಮಗುವಿನ ಮರಣೋತ್ತರ ಪರೀಕ್ಷೆ: ಸಂಬಂಧಿಸಿದ ಅಧಿಕಾರಿಗಳು ಹಾಗೂ ಪೊಲೀಸರು ಮಗುವಿನ ಸಾವಿನ ಬಗ್ಗೆ ಸೂಕ್ತ ತನಿಖೆ ನಡೆಸುವ ಭರವಸೆ ನೀಡಿದ ಮೇಲೆ ಪ್ರತಿಭಟನೆ ಕೈಬಿಟ್ಟ ಮಗುವಿನ ಸಂಬಂಧಿಗಳು, ಮರಣೋತ್ತರ ಪರೀಕ್ಷೆ ಮಂಡ್ಯ ಮಿಮ್ಸ್‌ನಲ್ಲಿ ಬೇಡ, ಇಲ್ಲಿ ಮಾಡಿದರೆ ವೈದ್ಯರು ತಮಗಿಷ್ಟ ಬಂದಂತೆ ವರದಿ ತಯಾರು ಮಾಡುತ್ತಾರೆ. ಈಗಾಗಲೇ ಆರ್‌ಎಂಓ ಉಡಾಫೆ ಉತ್ತರ ಕೊಡುತ್ತಿದ್ದು, ಬೇರೆಡೆ ಶವ ಪರೀಕ್ಷೆ ಮಾಡಿಸಬೇಕೆಂದು ಪಟ್ಟು ಹಿಡಿದರು. ಪೋಷಕರ ಒತ್ತಾಯಕ್ಕೆ ಮಣಿದ ಮಿಮ್ಸ್ ಆಡಳಿತ ಮಂಡಳಿ ಮತ್ತು ಪೊಲೀಸರು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದರು.

ಯೋಗ ಧನುಷ್ ಪೂರ್ವಭಾವಿ ಯೋಗ ಪ್ರದರ್ಶನ

ಸಂಬಂಧಿಸಿದ ವ್ಯಾಯಾಮ ಮಾಡಿದರು. ಎಲ್ಲರೂ ಕತ್ತು, ಭುಜ, ಸೊಂಟ, ಮಂಡಿಯ ಚಲನ ಪ್ರಕ್ರಿಯೆ ನಡೆಸಿದರು.

25 ನಿಮಿಷ ಯೋಗಾಸನ: ಬಳಿಕ 25 ನಿಮಿಷಗಳವರೆಗೆ ತಾಡಾಸನ, ಹಸ್ತಾಸನ, ಶಲಭಾಸನ, ಪಾದಹಸ್ತಾಸನ, ಅರ್ಧ ಚಕ್ರಾಸನ, ತ್ರಿಕೋಣಾಸನ, ಭದ್ರಾಸನ, ವಜ್ರಾಸನ, ಅರ್ಧ ಉಷ್ಟ್ರಾಸನ, ಉಷ್ಟ್ರಾಸನ, ಶಶಂಕಾಸನ, ಉತ್ಥಾನ ಮಂಡೂಕಾಸನ, ವಕ್ರಾಸನ, ಮಕರಾಸನ, ಭುಜಂಗಾಸನ, ಶಲಭಾಸನ, ಸೇತುಬಂದಾಸನ, ಉತ್ಥಾನ ಪಾದಾಸನ, ಅರ್ಧ ಹಲಾಸನ, ಪವನ ಮುಕ್ತಾಸನ, ಶವಾಸನಗಳನ್ನು ಪ್ರದರ್ಶಿಸಲಾಯಿತು.

ಪ್ರಾಣಾಯಮ, ಧ್ಯಾನ, ಸಂಕಲ್ಪ: ನೆರೆದಿದ್ದ ಯೋಗಾಸಕ್ತರು ಸುಮಾರು 15 ನಿಮಿಷಗಳ ಕಾಲ ಕಪಾಲಭಾತಿ, ನಾಡಿ ಶೋಧನ ಪ್ರಾಣಾಯಮ, ಶೀತಲಿ, ಭ್ರಾಮರಿ, ಧ್ಯಾನ ಮಾಡುವ ಮೂಲಕ ಯೋಗ ಪ್ರದರ್ಶನ ಅಂತ್ಯಗೊಂಡಿತು. ಇದಕ್ಕೂ ಮುನ್ನ ಯೋಗ ಕಾರ್ಯಕ್ರಮವನ್ನು ಲಲಿತಮಹಲ್ ಪ್ಯಾಲೇಸ್ ಹೋಟೆಲ್ ವ್ಯವಸ್ಥಾಪಕ ಪ್ರಸನ್ನಕುಮಾರ್ ಉದ್ಘಾಟಿಸಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಆಯುಷ್ ಅಧಿಕಾರಿ ಡಾ.ಸಿ.ರೇಣುಕಾದೇವಿ, ಮೈಸೂರಿನ ವಿವಿಧ ಯೋಗ ಸಂಸ್ಥೆಯ ಮುಖ್ಯಸ್ಥರಾದ ಡಾ.ಗಣೇಶ್‌ಕುಮಾರ್, ಶಶಿಕುಮಾರ್, ದೇವರಾಜು, ನಂಜುಂಡಸ್ವಾಮಿ, ಬಿ.ಪಿ.ಮೂರ್ತಿ, ಶಿವಪ್ರಕಾಶ್, ಅನಂತು, ಪಶುಪತಿ, ಶ್ರೀಶೈಲಕುಮಾರ್, ಆಯುಷ್ ಇಲಾಖೆಯ ವೈದ್ಯಾಧಿಕಾರಿಗಳು, ಸಿಬ್ಬಂದಿ, ಆಯುಷ್ ಆರೋಗ್ಯ ಮಂದಿರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಯೋಗ ತರಬೇತುದಾರರು ಹಾಗೂ ನೂರಾರು ಮಂದಿ ಯೋಗಾಸಕ್ತರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಯೋಗಾಸನ ಪ್ರದರ್ಶಿಸಿದರು.

ಲೈಂಗಿಕ ದೌರ್ಜನ್ಯ ತಡೆ ಜಾಗೃತಿಗಾಗಿ ಮ್ಯಾರಥಾನ್



ಜೆಎಸ್‌ಎಸ್ ವೈದ್ಯಕೀಯ ಶಿಕ್ಷಣ ಸಂಸ್ಥೆಯ ಫೋರೆನ್ಸಿಕ್ ಮೆಡಿಸಿನ್ ಮತ್ತು ಟಾಕ್ಸಿಕಾಲಜಿ ವಿಭಾಗದ ವಿದ್ಯಾರ್ಥಿಗಳ ಆಕ್ಯುಲಿಸ್ ಐರಿಸ್ ಕ್ಲಬ್ ಭಾನುವಾರ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿರುವ ಕ್ರೀಡಾಸಕ್ತರು.

ಮೈಸೂರು, ಜೂ.1(ಎಂಟಿವೈ)– ಹೆಣ್ಣು ಮಕ್ಕಳು ಹಾಗೂ ಮಹಿಳೆಯರ ಮೇಲಿನ ಲೈಂಗಿಂಕ ದೌರ್ಜನ್ಯ ತಡೆಗಾಗಿ ಜಾಗೃತಿ ಮೂಡಿಸಲು ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಫೋರೆನ್ಸಿಕ್ ಮೆಡಿಸಿನ್ ಮತ್ತು ಟಾಕ್ಸಿಕಾಲಜಿ ವಿಭಾಗ ಆಯೋಜಿಸಿದ್ದ 5 ಕಿಮಿ ಮ್ಯಾರಾಥಾನ್‌ನಲ್ಲಿ 200ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು.

ಮೈಸೂರಿನ ಪುರಭವನದ ಆವರಣದಲ್ಲಿ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಫೋರೆನ್ಸಿಕ್ ಮೆಡಿಸಿನ್ ಮತ್ತು ಟಾಕ್ಸಿಕಾಲಜಿ ವಿಭಾಗದ ವಿದ್ಯಾರ್ಥಿಗಳ ಆಕ್ಯುಲಿಸ್ ಐರಿಸ್ ಕ್ಲಬ್ ಹಾಗೂ ಸ್ಕೈಲೈನ್ ಈವೆಂಟ್ಸ್ ಸಂಸ್ಥೆ ವತಿಯಿಂದ ಆಯೋಜಿಸಿದ್ದ 5 ಕಿ.ಮಿ ಮ್ಯಾರಾಥಾನ್‌ಗೆ ನಾರಾಯಣ ಆಸ್ಪತ್ರೆ ಹೃದಯ ತಜ್ಞ ಡಾ.ಎಂ.ಎನ್.ರವಿ ಚಾಲನೆ ನೀಡಿದರು. ಬಳಿಕ ಹಾರ್ಡಿಂಗ್ ವೃತ್ತ, ಬಿ.ಎನ್.ರಸ್ತೆ, ಗನ್‌ಹೌಸ್, ಚಾಮರಾಜ ಜೋಡಿ ರಸ್ತೆ. ರಾಮಸ್ವಾಮಿ ವೃತ್ತ, ಜೆಎಲ್‌ಬಿ ರಸ್ತೆ, ಇರ್ವಿನ್ ರಸ್ತೆ, ಅಶೋಕ ರಸ್ತೆ ಮೂಲಕ ಸಾಗಿ ಪುರಭವನದ ಆವರಣ ತಲುಪಿ ಕೊನೆಗೊಂಡಿತು.

ಇತ್ತೀಚೆಗೆ ಹೆಣ್ಣು ಮಕ್ಕಳು, ಮಹಿಳೆಯರ ಮೇಲೆ ಹೆಚ್ಚುತ್ತಿರುವ ಲೈಂಗಿಕ ದೌರ್ಜನ್ಯ ತಡೆಗೆ ಪ್ರತಿಯೊಬ್ಬರು ಕೈಜೋಡಿಸಬೇಕು. ದೌರ್ಜನ್ಯದ ವಿರುದ್ಧ ಎಲ್ಲರೂ ಧ್ವನಿ ಎತ್ತಿದಾಗ ಮಾತ್ರ ಲೈಂಗಿಕ ದೌರ್ಜನ್ಯ ತಡೆಗಟ್ಟಬಹುದಾಗಿದೆ. ಈ ಹಿನ್ನೆಲೆಯಲ್ಲಿ ಸುತ್ತಮುತ್ತಲಿನ ಪರಿಸರದಲ್ಲಿ ಆಗುವ ಲೈಂಗಿಕ ದೌರ್ಜನ್ಯದ ವಿರುದ್ಧ ಒಗ್ಗಟ್ಟಿನ ಹೋರಾಟ ಮಾಡಲು ಎಲ್ಲರೂ ಮುಂದಾಗಬೇಕು ಎಂದು ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದವರು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ಜೆಎಸ್‌ಎಸ್ ಎಹೆಚ್‌ಇಆರ್ ರಿಜಿಸ್ಟ್ರಾರ್ ಡಾ.ಮಂಜುನಾಥ್, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ನಾರಾಯಣಪ್ಪ, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಫೋರೆನ್ಸಿಕ್ ಮೆಡಿಸಿನ್ ಮತ್ತು ಟಾಕ್ಸಿಕಾಲಜಿ ವಿಭಾಗದ ಮುಖ್ಯಸ್ಥ ಡಾ.ಹೆಚ್.ವಿ.ಚಂದ್ರಕಾಂತ್, ಫೋರೆನ್ಸಿಕ್ ಮೆಡಿಸಿನ್ ಮತ್ತು ಟಾಕ್ಸಿಕಾಲಜಿ ವಿಭಾಗದ ವಿದ್ಯಾರ್ಥಿಗಳ ಆಕ್ಯುಲಿಸ್ ಐರಿಸ್ ಕ್ಲಬ್ ಅಧ್ಯಕ್ಷೆ ಕೆ.ಪಿ.ಸಂಯುಕ್ತ, ಉಪಾಧ್ಯಕ್ಷರಾದ ಷಣ್ಮುಖ ವಿಟ್ಟಾ ಮತ್ತು ನವಕಿರಣ್ ಕೌರ್, ಪ್ರಧಾನ ಕಾರ್ಯದರ್ಶಿ ಹೇಮಂತ್ ಕುಮಾವತ್, ಸಂಘಟನಾ ಸಮಿತಿಯ ಸದಸ್ಯರಾದ ಮೃದುಸ್ಮಿತಾ ಹಜಾರಿಕಾ, ರೆಯನಾ ಗುಪ್ತಾ, ತಮನ್ನಾ ಗುಪ್ತಾ, ಸನಾ ಚೋಪ್ರಾ, ಅನಿಕಾ ಬಾಂಬ್ವಾಲ್, ಶ್ರೇಯಾ ಮಾಳಿಗೆ ಮತ್ತು ಶುಭಿ ಗುಪ್ತಾ ಇನ್ನಿತರರು ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿದ್ದರು.

ಮಹಿಳಾ–ಮಕ್ಕಳ ಅಭಿವೃದ್ಧಿ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರ ವರ್ಗಾವಣೆ

ಮೈಸೂರು, ಜೂ.1(ಎಸ್‌ಪಿಎನ್)– ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಆರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ವೃಂದದ ಅಧಿಕಾರಿಗಳನ್ನು ರಾಜ್ಯ ಸರ್ಕಾರ ವರ್ಗಾಯಿಸಿದೆ.

ಮೈಸೂರು ಜಿಲ್ಲೆ ಉಪ ನಿರ್ದೇಶಕರ ಕಚೇರಿ ಜಿಲ್ಲಾ ನಿರೂಪಣಾಧಿಕಾರಿ ಡಿ.ಮಂಜುನಾಥ್ ಅವರನ್ನು ಚಿತ್ರದುರ್ಗ ಜಿಲ್ಲೆಗೆ, ಚಿತ್ರದುರ್ಗದ ಉಪನಿರ್ದೇಶಕರ ಕಚೇರಿಯ ಜಿಲ್ಲಾ ನಿರೂಪಣಾಧಿಕಾರಿ ಎಸ್.ವಿಜಯಕುಮಾರ್ ಅವರನ್ನು ಮೈಸೂರು ಜಿಲ್ಲೆಗೆ, ಚಿತ್ರದುರ್ಗದ ಉಪನಿರ್ದೇಶಕರ ಕಚೇರಿಯ ಜಿಲ್ಲಾ ನಿರೂಪಣಾಧಿಕಾರಿ ಎನ್.ಪವಿತ್ರ ಅವರನ್ನು ಹಾಸನ ಜಿಲ್ಲೆಗೆ ಹಾಗೂ ಇತರೆ ಅಧಿಕಾರಿಗಳನ್ನು ಬೇರೆ ಬೇರೆ ಜಿಲ್ಲೆಗೆ ವರ್ಗಾಯಿಸಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವಾಲಯದ ಅಧೀನ ಕಾರ್ಯದರ್ಶಿ–2 ಎಂ.ಎಸ್.ರಶ್ಮಿ ಆದೇಶಿಸಿದ್ದಾರೆ.

ಆಕಾಶವಾಣಿ ನಿವೃತ್ತ ಹಿರಿಯ ಉದ್ಘೋಷಕ ಪ್ರಭುಸ್ವಾಮಿ ಮಳಿಮಠ್‌ಗೆ ಅಭಿನಂದನೆ



ಮೈಸೂರಿನ ವಿಜಯ ವಿಠಲ ಶಾಲೆ ಆವರಣದಲ್ಲಿ ಆಕಾಶವಾಣಿಯ ನಿವೃತ್ತ ಹಿರಿಯ ಉದ್ಘೋಷಕ ಪ್ರಭುಸ್ವಾಮಿ ಮಳಿಮಠ್ ಅವರನ್ನು ಅಭಿನಂದಿಸಲಾಯಿತು.

ಮೈಸೂರು, ಜೂ.1(ಜಿಎ)–ಮೈಸೂರಿನ ಸರಸ್ವತಿಪುರಂನಲ್ಲಿರುವ ವಿಜಯ ವಿಠಲ ಶಾಲೆ ಆವರಣದಲ್ಲಿ ಸಮುದ್ಯತಾ ಶ್ರೋತೃ ಸಂಘ, ಮೈಸೂರು ಆಕಾಶವಾಣಿ ಕೇಳುಗರ ಬಳಗ, ಆಕಾಶವಾಣಿ ನಾಟಕ ಕಲಾವಿದರ ಸಂಘದ ವತಿಯಿಂದ ಏರ್ಪಡಿಸಲಾಗಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಆಕಾಶವಾಣಿಯ ನಿವೃತ್ತ ಹಿರಿಯ ಉದ್ಘೋಷಕ ಪ್ರಭುಸ್ವಾಮಿ ಮಳಿಮಠ್ ಅವರನ್ನು ಅಭಿನಂದಿಸಲಾಯಿತು.

ಈ ವೇಳೆ ಹಿರಿಯ ರಂಗಕರ್ಮಿ ರಾಜಶೇಖರ್ ಕದಂಬ ಮಾತನಾಡಿ, ಆಕಾಶವಾಣಿಯಲ್ಲಿ ಇಪ್ಪತ್ತು ವರ್ಷಗಳ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಪ್ರಭುಸ್ವಾಮಿ ಅವರು, ಓರ್ವ ಉತ್ತಮ ನಾಟಕಕಾರ ಹಾಗೂ ನಿರ್ದೇಶಕ. ಅವರು ತಮ್ಮ ಅವಧಿಯಲ್ಲಿ ಸಾವಿರಾರು ಶ್ರೋತೃಗಳ ಮನ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ. ನಾಟಕ ಹಾಗೂ ನಿರ್ದೇಶಕ ರಂಗದಲ್ಲಿ ಸಾಕಷ್ಟು ಸಾಧನೆ ಮಾಡಿರುವ ಪ್ರಭುಸ್ವಾಮಿ ಅವರು ನಿವೃತ್ತರಾಗಿದ್ದಾರೆ. ಅವರು ಬಹುಮುಖ ಪ್ರತಿಭೆ. ಅಂತಹವರನ್ನು ಆಕಾಶವಾಣಿ ಬಿಟ್ಟುಕೊಡಬಾರದು. ಅವರಲ್ಲಿ ಇರುವ ಪ್ರತಿಭೆಯನ್ನು ಕಾಲಕಾಲಕ್ಕೆ ಬಳಸಿಕೊಳ್ಳುವ ಕೆಲಸ ಮಾಡಬೇಕು ಎಂದರು.

ಇಂದು ಟಿವಿ ಹಾಗೂ ಮೊಬೈಲ್ ಪ್ರಭಾವದಿಂದ ಆಕಾಶವಾಣಿಯ ಜನಪ್ರಿಯತೆ ಮಂಕಾಗುತ್ತಿದೆ. ಆದರೆ, ಈ ಹಿಂದೆ ಆಕಾಶವಾಣಿ ಎಂಬುದು ಜನರ ಒಂದು ಭಾಗವೇ ಆಗಿತ್ತು. ನಾವು ಚಿಕ್ಕವರಾಗಿದ್ದಾಗ ಪುರಭವನದ ಆವರಣದಲ್ಲಿ ಆಕಾಶವಾಣಿ ಪ್ರಸಾರವಾಗುತ್ತಿತ್ತು. ವಾರ್ತೆ ಕೇಳಲು ಸಾಕಷ್ಟು ಜನರು ಅಲ್ಲಿ ಸೇರುತ್ತಿದ್ದರು. ಯುದ್ಧವೇ ಆಗಲಿ, ರಾಜಕೀಯವೇ ಆಗಲಿ, ಸರ್ಕಾರಗಳ ಯೋಜನೆಗಳು ಆಕಾಶವಾಣಿ ಮೂಲಕವೇ ಜನರಿಗೆ ತಿಳಿಯುವ ಕಾಲವಿತ್ತು. ಈಗ ಎಲ್ಲವೂ ಬದಲಾಗಿದೆ ಎಂದು ಮೆಲುಕು ಹಾಕಿದರು.

ಅಪ್ಪರಂಭ ರಂಗ ತಂಡದ ಸ್ಥಾಪಕ ನಾ.ನಾಗಚಂದ್ರ ಅಧ್ಯಕ್ಷತೆ ವಹಿಸಿದ್ದರು. ಸಮುದ್ಯತಾ ಶ್ರೋತೃ ಸಂಘದ ಅಧ್ಯಕ್ಷ ಕಣ್ಣೂರು ವಿ.ಗೋವಿಂದಚಾರಿ, ಸದಸ್ಯ ರಮೇಶ್ ಪಿ.ರಂಗಸಮುದ್ರ ಕಾರ್ಯ ದರ್ಶಿ ಟಿ.ಎನ್.ರಾಜೇಶ್ವರಿ, ಸುಧಾದೇವಿ ಮಳಿಮಠ್ ಮತ್ತಿತರರು ಪಾಲ್ಗೊಂಡಿದ್ದರು.

ನೂರಾರು ಪ್ರತಿಭಾವಂತ ಮಕ್ಕಳಿಗೆ ಪುರಸ್ಕಾರ

ವಿದ್ಯೆ ಇದ್ದವರಿಗೆ ವೃತ್ತಿ ಕೌಶಲ, ಲೋಕಜ್ಞಾನವಿಲ್ಲದೆ ಬದುಕಲ್ಲಿ ವಿಫಲವಾಗುತ್ತಿರುವ ಯುವ ಸಮೂಹ; ರಘು ಕೌಟಿಲ್ಯ ವಿಷಾದ



ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಮೈಸೂರು, ಜೂ.1(ಎಸ್‌ಪಿಎನ್)– ಇಂದಿನ ಯುವ ಸಮೂಹ ಚೆನ್ನಾಗಿ ಓದಿ ಉತ್ತಮ ಅಂಕಗಳಿಸುತ್ತಾರೆ. ಆದರೆ, ಅದೇ ಶಿಕ್ಷಣದಡಿ ವೃತ್ತಿ ಕೌಶಲ ಹಾಗೂ ಲೌಕಿಕ ಬದುಕು ರೂಪಿಸಿಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ ಎಂದು ನೈಪುಣ್ಯ ವಿದ್ಯಾಸಂಸ್ಥೆ ಅಧ್ಯಕ್ಷರೂ ಆದ ಬಿಜೆಪಿ ಒಬಿಸಿ ಮೋರ್ಚಾ ಅಧ್ಯಕ್ಷ ರಘು ಕೌಟಿಲ್ಯ ವಿಷಾದ ವ್ಯಕ್ತಪಡಿಸಿದರು.

ಮೈಸೂರು ನಿವೇದಿತನಗರದ ಎಸ್.ಆರ್.ಸುಬ್ಬರಾವ್ ಪಾರ್ಕ್ ಆವರಣದಲ್ಲಿ ಪಾಲಿಕೆ ಮಾಜಿ ಸದಸ್ಯ ಜೆ.ಎಸ್.ಜಗದೀಶ್ ನೇತೃತ್ವದಲ್ಲಿ ಏರ್ಪಡಿಸಿದ್ದ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ–2025ರ ಸಮಾರಂಭದಲ್ಲಿ ಅವರು ಮಾತನಾಡಿದರು.

ತಮ್ಮ ಮಕ್ಕಳು ಶಿಕ್ಷಣದಲ್ಲಿ ಉತ್ತಮ ಅಂಕಗಳಿಸಿ ಬದುಕು ರೂಪಿಸಿಕೊಳ್ಳಬೇಕೆಂಬ ಆಸೆಯನ್ನು ಪೋಷಕರು ಹೊಂದಿರುತ್ತಾರೆ. ಆದರೆ, ಅವರಿಗೆ ಲೌಕಿಕ ಜ್ಞಾನ, ವೃತ್ತಿ ಕಲಿಸುವ ಕಡೆ ಗಮನಹರಿಸುವುದಿಲ್ಲ. ವಿದ್ಯಾವಿಕಾಸ ವಿದ್ಯಾಸಂಸ್ಥೆಯ ಕಾರ್ಯದರ್ಶಿ ಕವೀಶ್‌ಗೌಡರಿಗೆ ಪದವೀಧರರ ಸಮಸ್ಯೆ ಬಗ್ಗೆ ಚೆನ್ನಾಗಿ ತಿಳಿದಿದೆ. ಉತ್ತಮ ಅಂಕಗಳಿಸಿರುತ್ತಾರೆ. ಆದರೆ, ಅದಕ್ಕೆ ಬೇಕಾದ ವೃತ್ತಿ ಕೌಶಲ, ಸಮಾಜದಲ್ಲಿ ನಡೆಯುವ ಲೌಕಿಕ ಬದುಕಿನ ಸಾಮರಸ್ಯ ಅರಿಯುವಲ್ಲಿ ವಿಫಲರಾಗುತ್ತಿದ್ದಾರೆ ಎಂದು ಅವರು ತಮ್ಮ ಗಮನಕ್ಕೆ ತಂದ ವಿಚಾರವನ್ನು ಪ್ರಸ್ತಾಪಿಸಿದರು.

ಪ್ರಪಂಚದಲ್ಲಿ ಬೇರೆ ಬೇರೆ ಕ್ಷೇತ್ರದ ಸಾಧಕರು, ಎಲ್ಲಾ ಸನ್ನಿವೇಶವನ್ನು ಎದುರಿಸಿ, ಸಾಧನೆ ಶಿಖರವನ್ನೇರಿರುತ್ತಾರೆ. ಹಾಗಾಗಿ ಪೋಷಕರು ತಮ್ಮ ಮಕ್ಕಳಿಗೆ ಸಮಾಜದ ಕಷ್ಟಗಳ ಬಗ್ಗೆ ತಿಳಿಸಿಕೊಡಲು ಪ್ರಯತ್ನಿಸಬೇಕು. ನಗರಪಾಲಿಕೆ ಮಾಜಿ ಸದಸ್ಯ ಜಗದೀಶ್ ನೇತೃತ್ವದಲ್ಲಿ ಸಿಎಫ್‌ಟಿಆರ್‌ಐ, ನಿವೇದಿತಾನಗರ, ಜನತಾನಗರ, ಬಸವೇಶ್ವರನಗರ, ಶಾರದಾದೇವಿನಗರ, ಆನಂದನಗರ ಹಾಗೂ ರಾಮಕೃಷ್ಣನಗರದ ನಿವಾಸಿಗಳ 300ಕ್ಕೂ ಹೆಚ್ಚು ಪ್ರತಿಭಾವಂತ ಮಕ್ಕಳನ್ನು ಗುರುತಿಸಿ ಪ್ರತಿಭಾ ಪುರಸ್ಕಾರ ನೀಡುತ್ತಿರುವುದು ಉತ್ತಮ ಬೆಳವಣಿಗೆ ಎಂದು ಹೇಳಿದರು.

> ಭಾರತ ಅಭಿವೃದ್ಧಿ ಆಗುತ್ತಿರುವುದು ಶಿಕ್ಷಣದಿಂದ ಮಾತ್ರ ಅಲ್ಲ. ಇಲ್ಲಿನ ಸಂಸ್ಕೃತಿ, ಪರಂಪರೆ, ಮಾನವ ಸಂಪನ್ಮೂಲ ಸದ್ಬಳಕೆಯಿಂದ. ಅಲ್ಲದೆ, ಯುವ ಜನತೆಯೇ ಭಾರತದ ದೊಡ್ಡ ಶಕ್ತಿ. ಪ್ರತಿಭಾ ಪುರಸ್ಕಾರ ಪಡೆಯುತ್ತಿರುವ ಎಲ್ಲ ವಿದ್ಯಾರ್ಥಿಗಳು ಒಳ್ಳೆಯ ಭವಿಷ್ಯ ರೂಪಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಚೆನ್ನಾಗಿ ಓದಿ, ಉತ್ತಮ ಭವಿಷ್ಯ ರೂಪಿಸಿಕೊಂಡು ಸಮಾಜ ಸೇವೆ ಮಾಡಲು ಮುಂದಾಗಬೇಕು. ತಮ್ಮ ಅಭಿವೃದ್ಧಿಯ ಜತೆಗೆ ಸಮಾಜದ ಅಭಿವೃದ್ಧಿಗೆ ಮತ್ತು ದೇಶದ ಬೆಳವಣಿಗೆಗೂ ಸಹಕಾರ ನೀಡಬೇಕು. **–ಟಿ.ಎಸ್.ಶ್ರೀವತ್ಸ, ಕೃಷ್ಣರಾಜ ಕ್ಷೇತ್ರದ ಶಾಸಕ**

ವಿದ್ಯಾ ವಿಕಾಸ ವಿದ್ಯಾಸಂಸ್ಥೆಯ ಕಾರ್ಯದರ್ಶಿಯೂ ಆದ ಬಿಜೆಪಿ ಮುಖಂಡ ಕವೀಶ್‌ಗೌಡ ಮಾತನಾಡಿ, ಮಕ್ಕಳು ವಿದ್ಯಾವಂತರಾಗಿ, ಉತ್ತಮ ಜೀವನ ರೂಪಿಸಿಕೊಳ್ಳಬೇಕು. ಜೊತೆಗೆ ತಮ್ಮ ತಂದೆ–ತಾಯಿಗಳನ್ನು ಗೌರವದಿಂದ ನೋಡಿಕೊಳ್ಳಬೇಕು. ವಿದ್ಯಾವಂತರ ಇಂತಹ ನಡೆ, ಸಮಾಜಕ್ಕೆ ನೀಡುವ ಮಾನವೀಯ ಮೌಲ್ಯದ ಹೆಗ್ಗುರುತು ಎಂದರು.

ಈ ಭಾಗದಲ್ಲಿ ಕಳೆದ 14 ವರ್ಷದಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಎಂ.ಜೆ.ಜಗದೀಶ್ ನೇತೃತ್ವದಲ್ಲಿ ಆಯೋಜಿಸಿ, ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸುತ್ತಿರುವುದು ಸಂತೋಷದ ಸಂಗತಿ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳಿಗೆ ಶಿಕ್ಷಣದ ಪ್ರಮುಖ ಘಟ್ಟ, ಇಂತಹ ಘಟ್ಟವನ್ನು ಯಶಸ್ವಿಯಾಗಿ ಪೂರೈಸಿದ ಮಕ್ಕಳಿಗೆ ಉತ್ತೇಜನ ಕಾರ್ಯಕ್ರಮಗಳ ಮೈಸೂರಿನ ಪ್ರತಿ ಬಡಾವಣೆಯಲ್ಲೂ ನಡೆಸಬೇಕು ಎಂದು ಸಲಹೆ ನೀಡಿದರು.

ವೇದಿಕೆಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಮೇಯರ್ ಶಿವಕುಮಾರ್, ರೊ.ಆಯರಹಳ್ಳಿ ಪಿ.ವಿರೂಪಾಕ್ಷ, ಮರಿಮಲ್ಲಪ್ಪ ಪ್ರೌಢಶಾಲೆ ಶಿಕ್ಷಕ ಬಿ.ಆರ್.ಶಿವಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್, ಲೋಹಿತ್ ಶರ್ಮ, ಶ್ರೀನಿವಾಸ್, ಎಂ.ಎನ್.ಸತ್ಯಾನಂದವಿಟ್ಟು ಮಲ್ಲಣ್ಣ ಎಂ.ಎಲ್. ರವೀಂದ್ರ ಸ್ವಾಮಿ, ಜ್ಞಾನಬುತ್ತಿ ಕಾರ್ಯದರ್ಶಿ ಜೈನಹಳ್ಳಿ ಸತ್ಯನಾರಾಯಣಗೌಡ, ಪ್ರಸನ್ನಕುಮಾರ್, ವಿಜಯ್‌ಕುಮಾರ್, ಡಿ.ಎನ್.ಪರಮೇಶ್, ರವಿ ಸೇರಿದಂತೆ ಇತರರಿದ್ದರು. ಇದೇ ವೇಳೆ 2024–25ನೇ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದಿರುವ 300ಕ್ಕೂ ಹೆಚ್ಚು ಮಕ್ಕಳನ್ನು ಪುರಸ್ಕರಿಸಲಾಯಿತು. ರಾಜರಾಜೇಶ್ವರಿ ನಗರದ ಅಕ್ಕನ ಬಳಗ ಮಹಿಳೆಯರಿಂದ ವಚನ ಗಾಯನ ನೆರವೇರಿತು. ಈ ವೇಳೆ ಹಿರಿಯ ದಂತ ವೈದ್ಯ ಡಾ.ಶರತ್, ಪರಿಸರವಾದಿ ಕೃಷ್ಣ ಹೆಗಡೆ ಅವರನ್ನು ಸನ್ಮಾನಿಸಲಾಯಿತು.

ಶಾಸಕ ಜಿಟಿಡಿ ಅವರಿಂದ ಸಿ.ಬಸವಣ್ಣಗೆ ಅಭಿನಂದನೆ...



ಮೈಸೂರು ಸರ್ಕಾರಿ ಮುದ್ರಣಾಲಯದಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಮೈಸೂರು ತಾಲೂಕು ಡಿ.ಸಾಲುಂಡಿ ಗ್ರಾಮದ ಸಿ.ಬಸವಣ್ಣ ಅವರನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಡಿ.ಸಾಲುಂಡಿ ಕೃಷ್ಣಮೂರ್ತಿ, ತಾಂಡವಪುರ ಭಾಸ್ಕರ್, ಪಾಂಡವಪುರ ರವಿ, ವಿಶ್ವ ಉಪಸ್ಥಿತರಿದ್ದರು.

ನೇರ ಗುತ್ತಿಗೆ ಆಧಾರಿತ ನೇಮಕಾತಿಗೆ ಅರ್ಜಿ ಆಹ್ವಾನ

ಮೈಸೂರು: 2025–26ನೇ ಸಾಲಿಗೆ ಕೃಷಿ ಇಲಾಖೆಯಲ್ಲಿ ರಾಷ್ಟ್ರೀಯ ಆಹಾರ ಭದ್ರತೆ ಮತ್ತು ಪೌಷ್ಟಿಕ ಅಭಿಯಾನ ಯೋಜನೆಯಡಿ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ಖಾಲಿ ಇರುವ ಹುದ್ದೆಗಳಿಗೆ 1 ವರ್ಷದ ನೇರ ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಕಚೇರಿ ಸಮಯದಲ್ಲಿ ಸಂಬಂಧಿಸಿದ ಅರ್ಜಿ ಪಡೆದು ಭರ್ತಿ ಮಾಡಿ ಜೂ.20ರ ಸಂಜೆ 5 ಗಂಟೆ ಒಳಗಾಗಿ ಸಲ್ಲಿಸಬೇಕು. ಮಾಹಿತಿಗೆ ಜಂಟಿ ನಿರ್ದೇಶಕರು, ಮೈಸೂರು ಕಚೇರಿಯ ದೂ.ಸಂ: 0821–2442239 ಸಂಪರ್ಕಿಸಬಹುದು ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಕರಾಟೆ ಪಂದ್ಯಾವಳಿಯಲ್ಲಿ ಪದಕ



ಮೈಸೂರು: ಮೈಸೂರಿನ ಗೊಜು–ರಿಯೋ ಕರಾಟೆ–ಡೊ ಸಂಸ್ಥೆಯ ಕರಾಟೆ ಪಟುಗಳು ಶ್ರೀಲಂಕಾದಲ್ಲಿ 7ನೇ ಏಷಿಯನ್ ಗೊಜು–ರಿಯೋ ಲೆವೆಲ್ ಕರಾಟೆ ಪಂದ್ಯಾವಳಿಯಲ್ಲಿ ಭಾರತ ಪ್ರತಿನಿಧಿಸಿ ಪದಕ ಪಡೆದುಕೊಂಡಿದ್ದಾರೆ.

ಕುಮಿಟೆ ವಿಭಾಗದಲ್ಲಿ ನಾಗೇಂದ್ರ ಎಸ್. ಕಂಚಿನ ಪದಕ, ತನ್ಮಯ್ ಸಿ.ಎಂ. ಬೆಳ್ಳಿ, ಕಟಾ ವಿಭಾಗದಲ್ಲಿ ಕಂಚಿನ ಪದಕ, ಚೇತನ್‌ಗೌಡ ಕೆ. ಕುಮಿಟೆಯಲ್ಲಿ ಚಿನ್ನದ ಪದಕ, ಕಟಾ ವಿಭಾಗದಲ್ಲಿ ಬೆಳ್ಳಿ ಪದಕ, ಭಾಸ್ಕರ್ ಎಸ್. ಕುಮಿಟೆಯಲ್ಲಿ ಕಂಚಿನ ಪದಕ ಪಡೆದಿದ್ದಾರೆ. ನಾಗೇಂದ್ರ ಎಸ್. ಏಷ್ಯಮ್ ಗೊಜು–ರಿಯೋ ತೀರ್ಪುಗಾರರ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಈಗ ಏಷ್ಯನ್ ಲೆವೆಲ್ ತೀರ್ಪುಗಾರರಾಗಿದ್ದಾರೆ. ಇವರಿಗೆ ಗೊಜು–ರಿಯೋ ಕರಾಟೆ–ಡೊ ಸಂಸ್ಥೆ ಮುಖ್ಯ ಶಿಕ್ಷಕ ಸಂಸ್ಥೆ ಮಹೇಶ್ ಆರ್., ಸಂಸ್ಥೆಯ ಶಿಕ್ಷಕರು ಮತ್ತು ಸದಸ್ಯರು ಶುಭಾಶಯ ಕೋರಿದ್ದಾರೆ.

ಮೈಸೂರಲ್ಲಿ ಇನ್ನು ಮೂರ್ನಾಲ್ಕು ದಿನ ಮಳೆ ಬಿಡುವು

●ಹವಾಮಾನ ಇಲಾಖೆ ಮಾಹಿತಿ ●ಕೃಷಿ ಚಟುವಟಿಕೆಯಲ್ಲಿ ತೊಡಗುವಂತೆ ರೈತರಿಗೆ ಸಲಹೆ ●ಕಬಿನಿ ಜಲಾಶಯ ತುಂಬಲು ಕೇವಲ 4 ಅಡಿ ಬಾಕಿ

ಮೈಸೂರು, ಜೂ.1(ಬಿಎಲ್‌ಯು)– ಕಳೆದ ಒಂದು ವಾರದಿಂದ ಆರ್ಭಟಿಸಿದ್ದ ವರುಣ ಇನ್ನು ಮೂರ್ನಾಲ್ಕು ದಿನ ಬಿಡುವು ನೀಡಲಿದ್ದಾನೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ನಾಗನಹಳ್ಳಿಯ ಹವಾಮಾನ ಇಲಾಖೆಯ ತಾಂತ್ರಿಕ ಅಧಿಕಾರಿ ಡಾ.ಸುಮಂತ್ ಕುಮಾರ್ ಅವರು, ಮೈಸೂರು ಜಿಲ್ಲೆಯಲ್ಲಿ 95 ಮಿಲಿ ಮೀಟರ್ ವಾಡಿಕೆ ಮಳೆಯಾಗಬೇಕು. ಆದರೆ ಈ ತಿಂಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗಲಿದೆ ಎಂದು ಹೇಳಿದರು.

ಕಳೆದ ಒಂದು ವಾರದಿಂದ ನಿರಂತರವಾಗಿ ಸುರಿದ ಮಳೆಯಿಂದ ಕೃಷಿ ಚಟುವಟಿಕೆಗಳಿಗೆ ತೊಂದರೆ ಉಂಟಾಗಿತ್ತು. ಆದರೆ ಈಗ ಮಳೆ ಬಿಡುವು ನೀಡಿರುವ ಕಾರಣ ರೈತರು ಭತ್ತ ಒಕ್ಕಣೆ ಮಾಡುವುದು, ರಾಸಾಯನಿಕ ಸಿಂಪಡಣೆ ಮಾಡುವುದು ಸೇರಿದಂತೆ ಹಲವು ಕೃಷಿ ಕಾರ್ಯ ಕೈಗೊಳ್ಳಬಹುದು ಎಂದು ಡಾ.ಸುಮಂತ್ ಕುಮಾರ್ ಸಲಹೆ ನೀಡಿದ್ದಾರೆ.

ಕೇರಳದ ವೈನಾಡು ಪ್ರದೇಶದಲ್ಲಿ ಧಾರಾಕಾರ ಮಳೆ ಸುರಿಯುತ್ತಿರುವ ಹಿನ್ನೆಲೆಯಲ್ಲಿ ಹೆಚ್.ಡಿ.ಕೋಟೆಯ ಕಬಿನಿ ಜಲಾಶಯ ತುಂಬಲು ಇನ್ನು 4 ಅಡಿ ಮಾತ್ರ ಬಾಕಿ ಇದೆ. ಕಬಿನಿ ಜಲಾಶಯದ ಗರಿಷ್ಠ ಮಟ್ಟ 2,284 ಅಡಿಗಳಾಗಿದ್ದು, ಇಂದಿನ ಮಟ್ಟ 2,280 ಅಡಿಗಳಾಗಿದೆ. ಜಲಾಶಯಕ್ಕೆ 14,521 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 8 ಸಾವಿರ ಕ್ಯೂಸೆಕ್ ನೀರು ಹೊರಗೆ ಬಿಡಲಾಗುತ್ತಿದೆ.

ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆಯಾಗುತ್ತಿರುವ ಹಿನ್ನೆಲೆಯಲ್ಲಿ ಕೃಷ್ಣರಾಜ ಸಾಗರ ಜಲಾಶಯಕ್ಕೆ ಕೂಡ ನೀರಿನ ಪ್ರಮಾಣ ಹೆಚ್ಚಾಗುತ್ತಿದೆ. ಕೆಆರ್‌ಎಸ್ ಜಲಾಶಯದ ಗರಿಷ್ಠ ಮಟ್ಟ 124.80 ಅಡಿಗಳಾಗಿದ್ದು, ಇಂದಿನ ಮಟ್ಟ 103.70 ಅಡಿಗಳಾಗಿದೆ. ಜಲಾಶಯಕ್ಕೆ 17,472 ಕ್ಯೂಸೆಕ್ ನೀರು ಹರಿದು ಬರುತ್ತಿದ್ದು, ಜಲಾಶಯದಿಂದ 735 ಕ್ಯೂಸೆಕ್ ನೀರು ಹೊರಗೆ ಬಿಡಲಾಗುತ್ತಿದೆ.

ನಿವೃತ್ತ ಅಧಿಕಾರಿ ಶಿವಸ್ವಾಮಿ ಅಭಿನಂದಿಸಿದ ಎಂಕೆಎಸ್



ಮೈಸೂರು ಮಹಾನಗರಪಾಲಿಕೆಯಲ್ಲಿ ವರ್ಕ್ ಇನ್‌ಸ್ಪೆಕ್ಟರ್ ಆಗಿ ಸೇವೆ ಸಲ್ಲಿಸಿ ನಿವೃತ್ತರಾದ ಅಶೋಕಪುರಂನ ಶಿವಸ್ವಾಮಿ ಅವರನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿನಂದಿಸಿದರು. ಈ ವೇಳೆ ದೊಡ್ಡ ಗರಡಿ ಅಧ್ಯಕ್ಷ ಜೋಗಿ ಮಹೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಕಾಂಗ್ರೆಸ್ ಮುಖಂಡರಾದ ರಮೇಶ್, ಮಂಜು, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹ್ಮದ್ ಫಾರೂಖ್, ಯುವ ಮುಖಂಡರಾದ ಜಗನ್ನಾಥ್ ಭೋವಿ, ಮಹೇಂದ್ರ, ಚಂದ್ರಶೇಖರ್, ಅವಿನಾಶ್ ಮತ್ತಿತರರು ಉಪಸ್ಥಿತರಿದ್ದರು.



ಕಡಕೊಳ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ನೋಟ್‌ಬುಕ್, ಸಮವಸ್ತ್ರ, ಸಿಹಿ ನೀಡಿ ಸ್ವಾಗತಿಸಲಾಯಿತು. ಈ ವೇಳೆ ಕಡಕೊಳ ಕುಮಾರಸ್ವಾಮಿ, ಶ್ರೀಕಂಠ ತೊಂಡೇಗೌಡ, ರಮೇಶ್, ಶ್ರೀಕಾಂತ್, ದುಂಡಯ್ಯ, ಮೂರ್ತಿನಾಯಕ್, ರವಿ, ಮಂಜುನಾಥ್, ಮಹದೇವಸ್ವಾಮಿ, ಕುಮಾರ್ ಮತ್ತಿತರರಿದ್ದರು.

ಬಾಯಿ ಕ್ಯಾನ್ಸರ್‌ಗೆ ಭಾವನಾತ್ಮಕ, ಆಧ್ಯಾತ್ಮಿಕ ಯೋಗಕ್ಷೇಮದ ಮೂಲಕ ಚಿಕಿತ್ಸೆ

ಇಶಾ ಫೌಂಡೇಶನ್‌ನೊಂದಿಗೆ ಕೈ ಜೋಡಿಸಿದ ಮೈಸೂರು ಅಪೋಲೋ ಬಿಜಿಎಸ್ ಆಸ್ಪತ್ರೆ

ಮೈಸೂರು, ಜೂ.1(ಜಿಎ)–ಬಾಯಿ ಕ್ಯಾನ್ಸರ್‌ಗೆ ಮಾನಸಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ಯೋಗಕ್ಷೇಮದೊಂದಿಗೆ ಚಿಕಿತ್ಸೆ ನೀಡಲು ಮೈಸೂರಿನ ಅಪೋಲೋ ಬಿಜಿಎಸ್ ಆಸ್ಪತ್ರೆಯು ಇಶಾ ಫೌಂಡೇಷನ್‌ನೊಂದಿಗೆ ಕೈ ಜೋಡಿಸಿದೆ ಎಂದು ಅಪೋಲೋ ಬಿಜಿಎಸ್ ಆಸ್ಪತ್ರೆಯ ಸಲಹೆಗಾರ ವೈದ್ಯಕೀಯ ಆಂಕಾಲಾಜಿಸ್ಟ್ ಡಾ.ನವೀನ್ ಜಯರಾಮ್ ತಿಳಿಸಿದರು.

ಮೈಸೂರಿನ ಅಪೋಲೋ ಆಸ್ಪತ್ರೆ ಆವರಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ತಂಬಾಕು ಬಳಕೆಯು ರಾಷ್ಟ್ರೀಯ ಆರೋಗ್ಯ ಬಿಕ್ಕಟ್ಟಾಗಲಿದೆ. ಬಾಯಿಯ ಕ್ಯಾನ್ಸರ್ ಪ್ರಕರಣಗಳಲ್ಲಿ ಜಗತ್ತಿನಲ್ಲಿ ಭಾರತವು ಸುಮಾರು ಮೂರನೇ ಒಂದು ಭಾಗದಷ್ಟಿದೆ. ವಾರ್ಷಿಕವಾಗಿ 77,000 ಮಂದಿ ಕ್ಯಾನ್ಸರ್ ಕಾಯಿಲೆಗೆ ತುತ್ತಾಗುತ್ತಿದ್ದಾರೆ. 52,000 ಸಾವುಗಳು ಸಂಭವಿಸುತ್ತವೆ. ಬದುಕುಳಿಯುವಿಕೆಯ ಪ್ರಮಾಣವು ಶೇ.50ರಷ್ಟು ಮಾತ್ರ ಇದೆ. ಈ ಪ್ರಮಾಣವು ಅಭಿವೃದ್ಧಿ ಹೊಂದಿದ ದೇಶಗಳಿಗಿಂತ ಗಮನಾರ್ಹವಾಗಿ ಕಡಿಮೆಯಾಗಿದೆ ಎಂದರು.



ಮೈಸೂರಿನ ಅಪೋಲೋ ಆಸ್ಪತ್ರೆಯಲ್ಲಿ ನಡೆದ ಸುದ್ದಿ ಗೋಷ್ಠಿಯಲ್ಲಿ ಡಾ.ರಮ್ಯಾ ಯೆತಡ್ಕ ಮಾತನಾಡಿದರು.

ವಿಶ್ವ ತಂಬಾಕುರಹಿತ ದಿನದ (ಶನಿವಾರ)ಅಂಗವಾಗಿ ಅಪೋಲೋ ಕ್ಯಾನ್ಸರ್ ಸೆಂಟರ್ 'ಒರಲೈಫ್' ಎಂಬ ಬಾಯಿಯ ಕ್ಯಾನ್ಸರ್ ಆರಂಭಿಕ ಪತ್ತೆಯ ಮೇಲೆ ಕೇಂದ್ರೀಕರಿಸಿದ ಪೂರ್ವಭಾವಿ ಸ್ಕ್ರೀನಿಂಗ್ ಉಪಕ್ರಮವನ್ನು ಪ್ರಾರಂಭಿಸಿದೆ. ತಂಬಾಕು ಬಳಕೆದಾರರು, ಮದ್ಯ ಸೇವಿಸುವವರು, ಹೆಚ್‌ಪಿವಿ–16 ಸೋಂಕಿನಿಂದ ಬಳಲುತ್ತಿರುವವರು ಮತ್ತು ಹಲವು ದಿನಗಳಿಂದ ಬಾಯಿಯಲ್ಲಿ ಗಾಯಗಳನ್ನು ಹೊಂದಿರುವ ಜನರು ಸೇರಿದಂತೆ ಇನ್ನಿತರ ಅಪಾಯಕಾರಿ ರೋಗ ಲಕ್ಷಣ ಹೊಂದಿರುವವರಿಗೆ ಜಾಗೃತಿ ಮೂಡಿಸಿ, ನಿಯಮಿತ ತಪಾಸಣೆ ಮೂಲಕ ಚಿಕಿತ್ಸೆ ನೀಡಲಾಗುವುದು ಎಂದು ತಿಳಿಸಿದರು.

ಈ ಉಪಕ್ರಮದ ಭಾಗವಾಗಿ ತಂಬಾಕು ವ್ಯಸನದಿಂದ ಮುಕ್ತವಾಗ ಬಯಸುವ ವ್ಯಕ್ತಿಗಳಿಗೆ ಸಮಗ್ರ ಬೆಂಬಲ ಒದಗಿಸಲು ಎಸಿಸಿಯು ಇಶಾ ಫೌಂಡೇಶನ್‌ನೊಂದಿಗೆ ಪಾಲುದಾರಿಕೆ ಹೊಂದಿದ್ದು, ಈ ಸಹಯೋಗವು ಮಾನಸಿಕ ಮತ್ತು ಭಾವನಾತ್ಮಕ ಯೋಗಕ್ಷೇಮ ಬೆಂಬಲದೊಂದಿಗೆ ದೈಹಿಕ ಆರೋಗ್ಯ ಕಾಪಾಡಲು ಕಾರ್ಯಕ್ರಮಗಳನ್ನು ಸಂಯೋಜಿಸುತ್ತಿದೆ ಎಂದರು.

ತಂಬಾಕು ಬಳಸುವವರು ಬಾಯಿಯ ಕ್ಯಾನ್ಸರ್‌ಗೆ ಒಳಗಾಗುವ ಸಾಧ್ಯತೆ ಆರರಿಂದ ಏಳು ಪಟ್ಟು ಹೆಚ್ಚು. ಸರಳ ಮೌಖಿಕ ಪರೀಕ್ಷೆಯ ಮೂಲಕ ಆರಂಭಿಕ ಹಂತದಲ್ಲಿ ಪತ್ತೆ ಹಚ್ಚಬಹುದಾದ ಕೆಲವೇ ಕ್ಯಾನ್ಸರ್‌ಗಳಲ್ಲಿ ಬಾಯಿಯ ಕ್ಯಾನ್ಸರ್ ಒಂದಾಗಿದೆ. ಈ ಕಾರ್ಯಕ್ರಮದ ಮೂಲಕ ತಡವಾಗುವ ಮೊದಲು ಪ್ರಕರಣಗಳನ್ನು ಮೊದಲೇ ಪತ್ತೆಹಚ್ಚುವುದು ನಮ್ಮ ಗುರಿಯಾಗಿದೆ ಎಂದು ತಿಳಿಸಿದರು.

ಭಾರತೀಯ ಪುರುಷರಲ್ಲಿ ಬಾಯಿಯ ಕ್ಯಾನ್ಸರ್ ಅತ್ಯಂತ ಸಾಮಾನ್ಯವಾದ ಕ್ಯಾನ್ಸರ್ ಆಗಿದ್ದು, ಮಹಿಳೆಯರಲ್ಲಿ ಸ್ಥಿರವಾಗಿ ಹೆಚ್ಚುತ್ತಿದೆ. ಘಟನೆಗಳ ದರಗಳು ರಾಜ್ಯಗಳಲ್ಲಿ ವ್ಯಾಪಕವಾಗಿ ಬದಲಾಗುತ್ತವೆ. ಚೆನ್ನೈ ಮೂಲದ ಅಧ್ಯಯನಗಳು ಹೆಚ್ಚಿನ ಮೆಟಾಸ್ಟಾಟಿಕ್ ಸಾಮರ್ಥ್ಯಕ್ಕೆ ಹೆಸರುವಾಸಿಯಾದ ಸ್ಥಳಗಳಾದ ನಾಲಿಗೆಯ ಬುಡ ಮತ್ತು ಬಾಯಿಯ ನೆಲದ ಕ್ಯಾನ್ಸರ್‌ಗಳ ಹೆಚ್ಚಳವನ್ನು ಗುರುತಿಸಿವೆ. ಬುಕ್ಕಲ್ ಲೋಳೆಪೊರೆಯು ದೇಶಾದ್ಯಂತ ಹೆಚ್ಚಾಗಿ ಪರಿಣಾಮ ಬೀರುವ ತಾಣವಾಗಿದೆ. ಗಮನಾರ್ಹವಾಗಿ, ಮಹಿಳೆಯರಲ್ಲಿ ಹೊಗೆರಹಿತ ತಂಬಾಕು ಬಳಕೆಯು ಹೆಚ್ಚುತ್ತಿದೆ ಎಂದರು. ಗೋಷ್ಠಿಯಲ್ಲಿ ಸರ್ಜಿಕಲ್ ಆಂಕಾಲಾಜಿಸ್ಟ್ ಡಾ.ರಮ್ಯಾ ಯೆತಡ್ಕ, ಡಾ.ಅಮನ್ ನಾಯಕ್, ಇಶಾ ಫೌಂಡೇಶನ್ ಪ್ರತಿನಿಧಿ ಡಾ.ವೀಣಾ ಉಪಸ್ಥಿತರಿದ್ದರು.

ದೇಶ – ವಿದೇಶ

ಪ್ರತಿಭಟನೆ ನಿಗ್ರಹ ವೇಳೆ 1400 ಜನರ ನರಮೇಧ ಶೇಖ್ ಹಸೀನಾ ವಿರುದ್ಧ ವಿಚಾರಣೆ ಶುರು



ಢಾಕಾ: ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ವಿರುದ್ಧ ಬಾಂಗ್ಲಾದೇಶದ ನ್ಯಾಯಮಂಡಳಿ ದೊಡ್ಡ ನಿರ್ಧಾರ ಪ್ರಕಟಿಸುವ ಸಾಧ್ಯತೆ. ಬಾಂಗ್ಲಾದೇಶದ ಅಂತರರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿ ಶೇಖ್ ಹಸೀನಾ ವಿರುದ್ಧದ ಆರೋಪಗಳನ್ನು ವಿಚಾರಣೆ ನಡೆಸುತ್ತಿರುವುದರಿಂದ ನ್ಯಾಯಮಂಡಳಿ ಶೇಖ್ ಹಸೀನಾಗೆ ಮರಣದಂಡನೆ ವಿಧಿಸಬಹುದು ಎಂದು ಹೇಳಲಾಗುತ್ತಿದೆ. 2024ರ ವಿದ್ಯಾರ್ಥಿ ನೇತೃತ್ವದ ಚಳವಳಿ ಸಮಯದಲ್ಲಿ ನಡೆದ ಹಿಂಸಾತ್ಮಕ ದಮನಕ್ಕೆ ಆದೇಶ ನೀಡಿದ ಹಿನ್ನೆಲೆಯಲ್ಲಿ ಬಾಂಗ್ಲಾದೇಶದ ಪ್ರಾಸಿಕ್ಯೂಟರ್‌ಗಳು ಮಾಜಿ ಪ್ರಧಾನಿ ಶೇಖ್ ಹಸೀನಾ ಮತ್ತು ಇಬ್ಬರು ಹಿರಿಯ ಅಧಿಕಾರಿಗಳ ಮೇಲೆ ಮಾನವೀಯತೆಯ ವಿರುದ್ಧದ ಅಪರಾಧಗಳ ಆರೋಪ ಹೊರಿಸಿದ್ದಾರೆ. ಭಾನುವಾರ ನಡೆದ ವಿಚಾರಣೆಯಲ್ಲಿ ಮುಖ್ಯ ಪ್ರಾಸಿಕ್ಯೂಟರ್ ತಾಜುಲ್ ಇಸ್ಲಾಂ, ಈ ಹತ್ಯೆಗಳನ್ನು ಯೋಜಿಸಲಾಗಿತ್ತು ಎಂದರು. ಇದಕ್ಕಾಗಿ ವಿವಿಧ ಏಜೆನ್ಸಿಗಳ ನಡುವಿನ ವೀಡಿಯೊ ಪುರಾವೆಗಳು ಮತ್ತು ರಹಸ್ಯ ಸಂದೇಶಗಳನ್ನು ಉಲ್ಲೇಖಿಸಿದರು. ಅಶಾಂತಿಯ ಸಮಯದಲ್ಲಿ ಭದ್ರತಾ ಪಡೆಗಳ ಕ್ರಮಗಳಿಗೆ ಸರ್ಕಾರದ ಮುಖ್ಯಸ್ಥರಾಗಿ ಶೇಖ್ ಹಸೀನಾ ಅವರ ಮೇಲೆ ಆದೇಶದ ಜವಾಬ್ದಾರಿ ಇದೆ ಎಂದು ಪ್ರಾಸಿಕ್ಯೂಟರ್‌ಗಳು ಆರೋಪಿಸಿದ್ದಾರೆ.

ಈಶಾನ್ಯ ಭಾರತದಲ್ಲಿ ಭಾರಿ ಪ್ರವಾಹ, ಭೂಕುಸಿತ: ಮೃತರ ಸಂಖ್ಯೆ 31ಕ್ಕೇರಿಕೆ

ಗುವಾಹಟಿ: ಈಶಾನ್ಯ ರಾಜ್ಯಗಳಲ್ಲಿ ಭಾರಿ ಮಳೆಯಿಂದ ಉಂಟಾದ ಹಠಾತ್ ಪ್ರವಾಹ, ಭೂಕುಸಿತ ಮತ್ತು ವ್ಯಾಪಕ ಹಾನಿಗೆ ಮೃತಪಟ್ಟವರ ಸಂಖ್ಯೆ 31ಕ್ಕೆ ಏರಿಕೆಯಾಗಿದೆ.



ಕಳೆದ 48 ಗಂಟೆಗಳಲ್ಲಿ, ಅಸ್ಸಾಂ ಮತ್ತು ಅರುಣಾಚಲ ಪ್ರದೇಶದ ತಲಾ 9, ಮೇಘಾಲಯದ 6, ಮಿಜೋರಾಂನ 5 ಮತ್ತು ನಾಗಾಲ್ಯಾಂಡ್ ಮತ್ತು ತ್ರಿಪುರದ ತಲಾ ಒಬ್ಬರು ಮೃತಪಟ್ಟಿದ್ದಾರೆ. ಅರುಣಾಚಲದಲ್ಲಿ ಭೂಕುಸಿತ ಸಂಭವಿಸಿ ವಾಹನವು ಆಳವಾದ ಕಂದಕಕ್ಕೆ ಬಿದ್ದ ಪರಿಣಾಮ 7 ಮಂದಿ ಮೃತಪಟ್ಟಿದ್ದಾರೆ. ನಾಲ್ವರು ಮಕ್ಕಳು ಮತ್ತು ಇಬ್ಬರು ಗರ್ಭಿಣಿಯರು ಸೇರಿದಂತೆ ಮೃತರು ಎರಡು ಕುಟುಂಬಗಳಿಗೆ ಸೇರಿದವರು. ಪೂರ್ವ ಕಮೆಂಗ್ ಜಿಲ್ಲೆಯ ಬನಾ–ಸೆಪ್ಪಾ ರಸ್ತೆಯಲ್ಲಿ ಬಲಿಯಾದವರು ಬನಾದಿಂದ ಪೂರ್ವ ಕಮೆಂಗ್ ಜಿಲ್ಲಾ ಕೇಂದ್ರ ಸೆಪ್ಪಾಗೆ ಪ್ರಯಾಣಿಸುತ್ತಿದ್ದಾಗ ಘಟನೆ ಸಂಭವಿಸಿದೆ. ಅದೇ ಭೂಕುಸಿತದಲ್ಲಿ ಸಿಲುಕಿಕೊಂಡ ನಂತರ ಎರಡನೇ ಪ್ರಯಾಣಿಕ ವಾಹನವು ಕೂದಲೆಳೆ ಅಂತರದಲ್ಲಿ ಪಾರಾಗಿದೆ. ಮತ್ತೊಂದು ಭೂಕುಸಿತ ಘಟನೆಯಲ್ಲಿ, ರಾಜ್ಯದ ಲೋವರ್ ಸುಬನ್ಸಿರಿ ಜಿಲ್ಲೆಯಲ್ಲಿ ಇಬ್ಬರು ಕಾರ್ಮಿಕರು ಮೃತಪಟ್ಟು ಇನ್ನಿಬ್ಬರನ್ನು ರಕ್ಷಿಸಲಾಗಿದೆ. ಜಿರೋ–ಕಮ್ಲೆ ರಸ್ತೆಯಲ್ಲಿ ಈ ಘಟನೆ ಸಂಭವಿಸಿದೆ.

ಗಾಜಾದ ನೆರವು ಕೇಂದ್ರದ ಮೇಲೆ ಗುಂಡಿನ ದಾಳಿ, 30 ಮಂದಿ ಸಾವು

ರಫಾ: ದಕ್ಷಿಣ ಗಾಜಾದ ರಫಾದಲ್ಲಿರುವ ಅಮೆರಿಕ ಬೆಂಬಲಿತ ನೆರವು ಕೇಂದ್ರದ ಬಳಿ ಇಸ್ರೇಲಿ ಪಡೆಗಳು ನಡೆಸಿದ ಶೆಲ್ ದಾಳಿಯಲ್ಲಿ ಕನಿಷ್ಠ 30 ಜನರು ಸಾವನ್ನಪ್ಪಿದ್ದಾರೆ ಮತ್ತು 115ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ.



ಪರಿಹಾರ ಸಾಮಗ್ರಿಗಳನ್ನು ಸ್ವೀಕರಿಸಲು ಸಾವಿರಾರು ಪ್ಯಾಲೆಸ್ತೀನಿಯನ್ನರು ಕೇಂದ್ರದ ಬಳಿ ಜಮಾಯಿಸಿದ್ದಾಗ ಬೆಳಗಿನ ಜಾವ ಈ ಘಟನೆ ಸಂಭವಿಸಿದೆ. ಇಸ್ರೇಲಿ ಟ್ಯಾಂಕ್‌ಗಳು ಜನಸಮೂಹದ ಮೇಲೆ ಮನಬಂದಂತೆ ಗುಂಡು ಹಾರಿಸಿವೆ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ. ಕತ್ತೆ ಬಂಡಿಯ ಮೂಲಕ ಮೃತರು ಮತ್ತು ಗಾಯಗೊಂಡವರ ಶವಗಳನ್ನು ಸ್ಥಳದಿಂದ ಹೊರತೆಗೆಯಲಾಯಿತು. ಇದು ಈ ಪ್ರದೇಶದ ಭೀಕರ ಮಾನವೀಯ ಪರಿಸ್ಥಿತಿ ಪ್ರತಿಬಿಂಬಿಸುತ್ತದೆ. ಹಮಾಸ್ ಈ ಘಟನೆಯನ್ನು ನರಮೇಧ ಎಂದು ಕರೆದಿದೆ. ಏತನ್ಮಧ್ಯೆ, ಗಾಜಾದಲ್ಲಿ ಕದನ ವಿರಾಮಕ್ಕೆ ಅಮೆರಿಕದ ಪ್ರಸ್ತಾಪವನ್ನು ಹಮಾಸ್ ಒಪ್ಪಿಕೊಂಡಿಲ್ಲ. ಅಕ್ಟೋಬರ್ 7, 2023 ರಂದು ಇಸ್ರೇಲ್ ಮೇಲೆ ದಾಳಿ ನಡೆಸಿದಾಗ ಹಮಾಸ್ 250 ಜನರನ್ನು ಸೆರೆಹಿಡಿದಿತ್ತು. ಅವರಲ್ಲಿ 58 ಜನರು ಇನ್ನೂ ಗಾಜಾದಲ್ಲಿ ಜೀವಂತವಾಗಿದ್ದಾರೆ. ಅಮೆರಿಕ ಬೆಂಬಲಿತ ಕದನ ವಿರಾಮ ಪ್ರಸ್ತಾವನೆಗೆ ತಾನು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿರುವುದಾಗಿ ಹಮಾಸ್ ಹೇಳಿದೆ.

ಸಿಕ್ಕಿಂನಲ್ಲಿ ಭೂಕುಸಿತ: ಸಿಲುಕಿಕೊಂಡ 1,500 ಪ್ರವಾಸಿಗರು, 8 ಮಂದಿ ನಾಪತ್ತೆ

ಸಿಕ್ಕಿಂ: ನಿರಂತರ ಮಳೆಯಿಂದಾಗಿ ಭೂಕುಸಿತಗೊಂಡು ಮುಖ್ಯ ರಸ್ತೆಗಳು ಮುಚ್ಚಿಹೋಗಿದ್ದರಿಂದ ಉತ್ತರ ಸಿಕ್ಕಿಂನ ವಿವಿಧ ಭಾಗಗಳಲ್ಲಿ ಸುಮಾರು 1,500 ಪ್ರವಾಸಿಗರು ಸಿಲುಕಿಕೊಂಡಿದ್ದಾರೆ.



ಮತ್ತೊಂದೆಡೆ, ಕಾಣೆಯಾದ 8 ಪ್ರವಾಸಿಗರ ಹುಡುಕಾಟಕ್ಕೆ ಭಾರಿ ಮಳೆ ಅಡ್ಡಿಯಾಯಿತು. ತೀಸ್ತಾ ನದಿಯಲ್ಲಿ ನೀರಿನ ಮಟ್ಟ ಹೆಚ್ಚಾದ ನಂತರ ಅದನ್ನು ಅಂತಿಮವಾಗಿ ಸ್ಥಗಿತಗೊಳಿಸಲಾಯಿತು. 11 ಪ್ರವಾಸಿಗರು ಪ್ರಯಾಣಿಸುತ್ತಿದ್ದ ವಾಹನವು ಮಂಗನ್ ಜಿಲ್ಲೆಯ ತೀಸ್ತಾಂಗ್ ಬಳಿ ಸಾವಿರ ಅಡಿಗಳಿಗಿಂತ ಹೆಚ್ಚು ಆಳದ ನದಿಗೆ ಬಿದ್ದಾಗ ಒಬ್ಬರು ಮೃತಪಟ್ಟು, ಇಬ್ಬರು ಗಾಯಗೊಂಡರು ಮತ್ತು 8 ಮಂದಿ ನಾಪತ್ತೆಯಾದರು. ಲಾಚೆನ್–ಲಾಚುಂಗ್ ಹೆದ್ದಾರಿ ಉದ್ದಕ್ಕೂ ಮುನ್ಸಿಥಾಂಗ್ ಬಳಿ ವಾಹನವು 1,000 ಅಡಿಗಳಿಗಿಂತ ಹೆಚ್ಚು ಆಳದ ನದಿಗೆ ಬಿದ್ದಿತು. ಲಾಚೆನ್‌ನಲ್ಲಿ 115 ಪ್ರವಾಸಿಗರು ಮತ್ತು ಲಾಚುಂಗ್‌ನಲ್ಲಿ 1,350 ಪ್ರವಾಸಿಗರು ಸಿಲುಕಿಕೊಂಡಿದ್ದಾರೆ. ಹಲವಾರು ಸ್ಥಳಗಳಲ್ಲಿ ಭೂಕುಸಿತದಿಂದಾಗಿ ಎರಡೂ ದಿಕ್ಕುಗಳಿಂದ ನಿರ್ಗಮನ ಮುಚ್ಚಲ್ಪಟ್ಟಿರುವುದರಿಂದ ಪ್ರವಾಸಿಗರು ತಮ್ಮ ಹೋಟೆಲ್‌ಗಳಲ್ಲಿಯೇ ಇರಲು ಸೂಚಿಸಲಾಗಿದೆ. ರಸ್ತೆಗಳು ಸಂಪೂರ್ಣವಾಗಿ ತೆರೆದ ನಂತರ ಅವರನ್ನು ಸ್ಥಳಾಂತರಿಸಲಾಗುವುದು ಎಂದು ಹೇಳಿದರು.

ರಷ್ಯಾದಲ್ಲಿ ಸೇತುವೆ ಕುಸಿತ: ಹಳಿತಪ್ಪಿದ ರೈಲು, 7 ಸಾವು, 69 ಜನರಿಗೆ ಗಾಯ

ಮಾಸ್ಕೋ: ಶನಿವಾರ ತಡರಾತ್ರಿ ಉಕ್ರೇನ್‌ನ ಗಡಿಯ ರಷ್ಯಾ ಪ್ರದೇಶದಲ್ಲಿ ಸೇತುವೆ ಕುಸಿದ ಪರಿಣಾಮ ಪ್ರಯಾಣಿಕರ ರೈಲು ಹಳಿತಪ್ಪಿ ಕನಿಷ್ಠ ಏಳು ಜನರು ಮೃತಪಟ್ಟು, 69 ಮಂದಿ ಗಾಯಗೊಂಡಿದ್ದಾರೆ.



ರಷ್ಯಾದ ಗಡಿ ಪಟ್ಟಣವಾದ ಕ್ಲಿಮೊವೊದಿಂದ ರಾಜಧಾನಿ ಮಾಸ್ಕೋಗೆ ಪ್ರಯಾಣಿಸುತ್ತಿದ್ದ ರೈಲು ಹಳಿತಪ್ಪಿತು. ಸೋಷಿಯಲ್ ಮೀಡಿಯಾದಲ್ಲಿ ಹರಿದಾಡಿದ ಪೋಸ್ಟ್‌ನಲ್ಲಿ ಕಂಡುಬರುತ್ತಿರುವಂತೆ ದೊಡ್ಡ ಅವಶೇಷಗಳ ದಿಬ್ಬದ ಸ್ಥಳದಲ್ಲಿ ರಕ್ಷಣಾ ಕಾರ್ಯಕರ್ತರು ಕೆಲಸ ಮಾಡುತ್ತಿರುವುದನ್ನು ತೋರಿಸಿದರೆ, ಇನ್ನೊಂದು ವೀಡಿಯೊ ಜನರು ಸಂಕಷ್ಟದಲ್ಲಿ ಕೂಗುತ್ತಿರುವುದು ಕಾಣುತ್ತಿದೆ. ರೈಲ್ವೆ ಹಳಿಗಳ ಮೇಲೆ ಸೇತುವೆ ಕುಸಿದ ಪರಿಣಾಮವಾಗಿ ಏಳು ಮಂದಿ ಮೃತಪಟ್ಟಿದ್ದಾರೆ ಎಂದು ಬ್ರಿಯಾನ್ಸ್ಕ ಪ್ರದೇಶದ ಗವರ್ನರ್ ಅಲೆಕ್ಸಾಂಡರ್ ಬೊಗೊಮಾಜ್ ಟೆಲಿಗ್ರಾಮ್‌ನಲ್ಲಿ ಬರೆದಿದ್ದಾರೆ. ಮೂವರು ಮಕ್ಕಳು ಸೇರಿದಂತೆ ಕನಿಷ್ಠ 69 ಜನರು ಗಾಯಗೊಂಡಿದ್ದಾರೆ. ಸರ್ಕಾರಿ ಸ್ವಾಮ್ಯದ ಅಂಗಸಂಸ್ಥೆಯಾದ ಮಾಸ್ಕೋ ರೈಲ್ವೆ, ಸಾರಿಗೆ ಕಾರ್ಯಾಚರಣೆಯಲ್ಲಿ ಅಕ್ರಮ ಹಸ್ತಕ್ಷೇಪದ ಪರಿಣಾಮವಾಗಿ ಕ್ಲಿಮೋವ್ ಮತ್ತು ಮಾಸ್ಕೋ ನಡುವೆ ರಸ್ತೆ ಸೇತುವೆಯ ಕುಸಿತದಿಂದಾಗಿ ಪ್ರಯಾಣಿಕ ರೈಲು ಹಳಿತಪ್ಪಿದೆ ಎಂದು ಹೇಳಿದೆ.

ಮೈಸೂರು ಮಿತ್ರ ಸೋಮವಾರ 2 ಜೂನ್ 2025

ಮಳೆ ಹಾನಿ ಪ್ರದೇಶಗಳಿಗೆ ಶಾಸಕ ಪೊನ್ನಣ್ಣ ಭೇಟಿ



ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಶಾಸಕ ಪೊನ್ನಣ್ಣ ಪರಿಶೀಲನೆ ನಡೆಸಿದರು.

ಮಡಿಕೇರಿ: ವಿರಾಜಪೇಟೆ ತಾಲೂಕಿನ ವಿವಿಧ ಮಳೆ ಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಪರಿಶೀಲನೆ ನಡೆಸಿದರು. ಬೆಟ್ಟೋಳಿ ಗ್ರಾಮ ಬಳಿಯ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ತಡೆಗೋಡೆ ಪರಿಶೀಲಿಸಿ, ಎಂಜಿನಿಯರಿಂಗ್ ವಿಭಾಗದವರಿಗೆ ಕೂಡಲೇ ಸರಿಪಡಿಸಿ,ಗೋಡೆ ಮತ್ತಷ್ಟು ಬೀಳುವ ಸಾಧ್ಯತೆ ಇದ್ದು, ಯಾರಿಗೂ ತೊಂದರೆ ಆಗದಂತೆ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಿದರು.

ಆರ್ಜಿ ಗ್ರಾಮದ ಅಸ್ಥುಲ್ ಉದಾ ಶಾಲೆಯ ಬಳಿ ಸಣ್ಣ ನೀರಾವರಿ ಇಲಾಖೆಯಿಂದ ನಡೆಯುತ್ತಿರುವ ಕಾಮಗಾರಿಯ ಗುಣಮಟ್ಟ ಕಾಯ್ದುಕೊಳ್ಳಬೇಕು. ಮುಂದಿನ ದಿನಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇರುವುದರಿಂದ ಕಾಮಗಾರಿಯನ್ನು ವ್ಯವಸ್ಥಿತವಾಗಿ ನಿರ್ವಹಿಸುವಂತೆ ಎಂಜಿನಿಯರ್‌ಗೆ ಆದೇಶಿಸಿದರು.

ಪಟ್ಟಣದಲ್ಲಿ ನೂತನವಾಗಿ ನಿರ್ಮಿಸಿರುವ ಅಂಬೇಡ್ಕರ್ ಭವನದ ತಡೆಗೋಡೆ ಕಾಮಗಾರಿ ಬಗ್ಗೆ ಮಾಹಿತಿ ಪಡೆದು ಅಂಬೇಡ್ಕರ್ ಭವನಕ್ಕೆ ತೆರಳುವ ದಾರಿಯಲ್ಲಿಯೇ ಮಣ್ಣು ಬಿದ್ದಿದ್ದು, ಇದನ್ನು ತೆರವುಗೊಳಿಸಬೇಕು. ಇಲ್ಲಿನ ಕಾಮಗಾರಿ ನಿರ್ವಹಣೆಗೆ ಈ ಹಿಂದೆ ಏಜೆನ್ಸಿ ಅವರಿಗೆ ನೇರವಾಗಿ 10 ಲಕ್ಷ ರೂ ಅನುದಾನ ಬಿಡುಗಡೆಯಾಗಿದೆ. ಈ ಬಗ್ಗೆ ಮಾಹಿತಿ ಒದಗಿಸುವಂತೆ ಸಂಬಂಧಪಟ್ಟ ಎಂಜಿನಿಯರ್‌ಗೆ ಸೂಚಿಸಿದರು.

ಬಳಿಕ ಸಿದ್ದಾಪುರಕ್ಕೆ ತೆರಳಿದ ಶಾಸಕರು, ಅಲ್ಲಿನ ರಸ್ತೆ ಕಾಮಗಾರಿ ಪರಿಶೀಲಿಸಿ ತೀವ್ರ ಅತೃಪ್ತಿ ವ್ಯಕ್ತಪಡಿಸಿದರು. ಡಿಸೆಂಬರ್ ತಿಂಗಳಲ್ಲಿಯೇ ಕಾಮಗಾರಿ ಆರಂಭವಾದರೂ ಸಹ ಇಂದಿಗೂ ಪೂರ್ಣಗೊಳ್ಳದಿರುವುದಕ್ಕೆ ಸ್ಥಳದಲ್ಲಿಯೇ ಗುತ್ತಿಗೆದಾರರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಚರಂಡಿ ನಿರ್ಮಾಣಕ್ಕೆ ಗುಂಡಿ ತೆಗೆಯಲಾಗಿದೆ. ಆದರೆ ಕಾಮಗಾರಿ ಕೈಗೊಂಡಿಲ್ಲ ಹೀಗಾದಲ್ಲಿ ನಾಗರಿಕರು ಓಡಾಡುವುದು ಹೇಗೆ? ಎಂದು ಅಸಮಾಧಾನ ಹೊರಗೆಡವಿದ ಶಾಸಕರು, ಎರಡು-ಮೂರು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸುತ್ತೇವೆಂದು ಕಾಮಗಾರಿ ಪಡೆದು, 5 ತಿಂಗಳಾದರೂ ಕೆಲಸ ಪೂರ್ಣಗೊಳಿಸದಿರುವುದಕ್ಕೆ ಗುತ್ತಿಗೆದಾರರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಭೂ ಕುಸಿತಕ್ಕೆ ಕಾಫಿ ಗಿಡಗಳ ನಾಶ

ಆತಂಕದಲ್ಲಿ ಜನತೆ



ಮಡಿಕೇರಿ, ಜೂ.1-ಸೋಮವಾರಪೇಟೆ ತಾಲೂಕಿನ ತೋಳೂರುಶೆಟ್ಟಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೂತಿ ಗ್ರಾಮದಲ್ಲಿ ವಾರದಿಂದ ಸುರಿದ ಧಾರಾಕಾರ ಮಳೆಗೆ ಭೂ ಕುಸಿತ ಉಂಟಾಗಿ ಅಪಾರ ಪ್ರಮಾಣದ ಕಾಫಿ ಗಿಡಗಳು ನಾಶವಾಗಿವೆ.

ಗ್ರಾಮದ ನಿವಾಸಿ ಡಿ.ಕೆ ಪ್ರಕಾಶ್‌ರಿಗೆ ಸೇರಿದ ಅರ್ಧ ಎಕರೆಯಷ್ಟು ಕಾಫಿ ತೋಟ ಭೂಕುಸಿತದಿಂದ ಕೊಚ್ಚಿ ಹೋಗಿದೆ. ಕೂತಿ-ಹೊಸೂರು-ಶನಿವಾರ ಸಂತೆಗೆ ಸಂಪರ್ಕ ಕಲ್ಪಿಸುವ ಬೆಟ್ಟದ ರಸ್ತೆಯಲ್ಲಿ ಭೂ ಕುಸಿತವಾಗಿದೆ. ಮಳೆ ಹೀಗೆ ಮುಂದುವರೆದರೆ ರಸ್ತೆಯು ಕುಸಿಯುವ ಆತಂಕ ಇದೆ ಎಂದು ಪ್ರಕಾಶ್ ಕಳವಳ ವ್ಯಕ್ತಪಡಿಸಿದ್ದಾರೆ.

ಸ್ಥಳಕ್ಕೆ ಗ್ರಾಮ ಆಡಳಿತ ಅಧಿಕಾರಿ ಕರಿಬಸವರಾಜು, ಪ್ರಭಾರ ಸಹಾಯ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

2018ರಲ್ಲಿ ಭಾರಿ ಪ್ರಮಾಣದಲ್ಲಿ ಭೂ ಕುಸಿತ ಉಂಟಾದ ಪ್ರದೇಶದ ಸಮೀಪದಲ್ಲೆ ಕುಸಿತ ಉಂಟಾಗಿದ್ದು ಜನರಲ್ಲಿ ಆತಂಕ ಮೂಡಿಸಿದೆ.

ಪ್ರವಾಸಿ ತಾಣಗಳಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧಕ್ಕೆ ಆದೇಶ

ಕುಶಾಲನಗರ: ಜಿಲ್ಲೆಯ ಪ್ರಮುಖ ಪ್ರವಾಸಿ ತಾಣಗಳಾದ ದುಬಾರೆ ಸಾಕಾನೆ ಶಿಬಿರ, ಕಾವೇರಿ ನಿಸರ್ಗಧಾಮ, ಹಾರಂಗಿ ಸಾಕಾನೆ ಶಿಬಿರ ಪ್ರವಾಸಿ ತಾಣಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿ ಅರಣ್ಯ ಇಲಾಖೆ ಆದೇಶ ಹೊರಡಿಸಿದೆ.

ಪ್ರವಾಸಿ ತಾಣಗಳಲ್ಲಿರುವ ಸಾಕಾನೆಗಳು, ಜಿಂಕೆಗಳು ಇತರೆ ಪ್ರಾಣಿ ಪಕ್ಷಿಗಳಿಗೂ ಪ್ಲಾಸ್ಟಿಕ್ ಬಳಕೆಯಿಂದ ಹಾನಿ ಉಂಟಾಗುತ್ತಿದೆ. ಪ್ರವಾಸಿಗರು ಎಲ್ಲೆಂದರಲ್ಲಿ ನೀರಿನ ಬಾಟಲಿ, ಪ್ಲಾಸ್ಟಿಕ್ ಕವರ್, ಚಾಕಲೇಟ್ ಕವರ್, ಚಿಪ್ಸ್ ಪ್ಯಾಕೆಟ್ ಇತ್ಯಾದಿ ಏಕ ಬಳಕೆಯ ಪ್ಲಾಸ್ಟಿಕ್‌ಗಳನ್ನು ಹಾಕುತ್ತಿರುವುದರಿಂದ ಪ್ರಾಣಿ ಪಕ್ಷಿಗಳಿಗೂ ಹಾನಿಯಾಗುವುದಲ್ಲದೆ, ಪ್ರವಾಸಿ ತಾಣದ ಶುಚಿತ್ವ ಹಾಳಾಗಿ ಸಾಕಾನೆ ಶಿಬಿರದಲ್ಲಿರುವ ಆನೆಗಳ ಆರೋಗ್ಯದ ಮೇಲೂ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ.

ಆದ್ದರಿಂದ ಸದರಿ ಪ್ರವಾಸಿ ತಾಣಗಳಲ್ಲಿ ಇಂದಿನಿಂದ ಜಾರಿಗೆ ಬರುವಂತೆ ಏಕ ಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿದೆ.

ಹಳೇ ವಿದ್ಯಾರ್ಥಿಗಳ ಸಂಘದಿಂದ ಬೂಕರ್ ಪ್ರಶಸ್ತಿ ಪುರಸ್ಕೃತೆ ಲೇಖಕಿ ದೀಪಾಭಾಸ್ತಿಗೆ ಸನ್ಮಾನ



ಬೂಕರ್ ಪ್ರಶಸ್ತಿ ಪುರಸ್ಕೃತೆ ಲೇಖಕಿ ದೀಪಾಭಾಸ್ತಿರನ್ನು ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘ ಸನ್ಮಾನಿಸಿತು.

ಮಡಿಕೇರಿ, ಜೂ.1-ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ವಿಜೇತೆ ಲೇಖಕಿ ದೀಪಾ ಭಾಸ್ತಿಯವರನ್ನು ನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕಾಲೇಜು ಹಾಗೂ ಕಾಲೇಜಿನ ಹಳೇ ವಿದ್ಯಾರ್ಥಿಗಳ ಸಂಘ ಸನ್ಮಾನಿಸಿತು.

ಕಾಲೇಜಿನ ಪ್ರಾಂಶುಪಾಲರು, ಉಪನ್ಯಾಸಕರು ಮತ್ತು ಸಂಘದ ಪದಾಧಿಕಾರಿಗಳು ದೀಪಾಭಾಸ್ತಿ ಹಾಗೂ ಪತಿ ಚೆಟ್ಟೀರ ನಾಣಯ್ಯರನ್ನು ಅವರ ಮನೆಯಲ್ಲೇ ಸನ್ಮಾನಿಸಿದರು.

ಪ್ರಾಂಶುಪಾಲ ಮೇಜರ್ ಪ್ರೊ ಬಿ.ರಾಘವ ಮಾತನಾಡಿ, ಕಾಲೇಜಿನ ಹಳೇ ವಿದ್ಯಾರ್ಥಿನಿ ದೀಪಾಭಾಸ್ತಿ ಸಾಧನೆಯನ್ನು ಜಗತ್ತೇ ಮೆಚ್ಚಿಕೊಂಡಿದೆ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪರ ಹೆಸರಿನಲ್ಲಿ ರಾರಾಜಿಸುತ್ತಿರುವ ಕಾಲೇಜಿನ ಹಿರಿಮೆಯನ್ನು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿಸಿದ್ದು, ಮತ್ತೊಂದು ಗರಿ ಬಂದಂತಾಗಿದೆ. ಮುಂದಿನ ದಿನಗಳಲ್ಲೂ ಸಾಹಿತ್ಯ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡುವಂತಾಗಲಿ ಎಂದು ಶುಭ ಹಾರೈಸಿದರು.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿ, ಭಾನು ಮುಷ್ತಾಕ್ ಅವರ ಹಸೀನಾರ ಕೃತಿಯನ್ನು ಅನುವಾದಿಸಿರುವುದು ಸುಲಭದ ಕಾರ್ಯವಲ್ಲ. ಕನ್ನಡ ಭಾಷಾ ಕೃತಿಯನ್ನು ಭಾಷಾ ಶ್ರೀಮಂತಿಕೆಗೆ ಚ್ಯುತಿ ಬಾರದಂತೆ ಆಂಗ್ಲ ಭಾಷೆಗೆ ಅನುವಾದಿಸಿ ಅಂತರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತೆ ಮಾಡಿರುವುದು ಶ್ಲಾಘನೀಯ ಎಂದರು. ಲೇಖಕಿ ದೀಪಾ ಭಾಸ್ತಿ ಮಾತನಾಡಿ, ಸುಮಾರು 3 ವರ್ಷಗಳ ನಿರಂತರ ಶ್ರಮದಿಂದ ಈ ಪ್ರಶಸ್ತಿ ಲಭ್ಯವಾಗಿದೆ. ಪತಿಯ ಸಹಕಾರ ಹಾಗೂ ಪೋಷಕರ ಪ್ರೋತ್ಸಾಹದಿಂದ ಯಶಸ್ಸು ಪಡೆಯಲು ಸಾಧ್ಯವಾಯಿತು ಎಂದು ತಮ್ಮ ಅನುಭವಗಳನ್ನು ಹಂಚಿಕೊಂಡರು.

ಉಪನ್ಯಾಸಕರಾದ ಪ್ರೊ.ಕೆ.ಪಿ.ನಾಗರಾಜು, ಪ್ರೊ.ಆರ್.ರಾಜೇಂದ್ರ ಪ್ರೊ ಗಾಯತ್ರಿದೇವಿ, ಡಾ.ಶೈಲಶ್ರೀ, ಡಾ. ಪ್ರದೀಪ್ ಬಂಡಾರಿ, ಬಿ.ಹೆಚ್.ತಳವಾರ, ಹೆಚ್.ಆರ್.ರಮೇಶ್, ಹಳೇ ವಿದ್ಯಾರ್ಥಿ ಸಂಘದ ಪ್ರಧಾನ ಕಾರ್ಯದರ್ಶಿ ಚಂದನ್ ನಂದರಬೆಟ್ಟು, ನಿರ್ದೇಶಕರಾದ ಎಸ್.ಆರ್.ವತ್ಸಲ, ಲೋಹಿತ್ ಮಾಗುಲು ಮನೆ ಮತ್ತಿತರರು ಹಾಜರಿದ್ದರು.

ಮುಷ್ಕರ ನಿರತ ಪೌರ ಸೇವಾ ನೌಕರರ ಭೇಟಿ ಮಾಡಿದ ಪೊನ್ನಣ್ಣ



ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪೌರ ಸೇವಾ ನೌಕರರು ಮುಷ್ಕರ ನಡೆಸಿದರು.

ವಿರಾಜಪೇಟೆ, ಜೂ.1- ಬಾಕಿ ಉಳಿದಿರುವ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಪುರಸಭೆಯ ಪೌರ ಸೇವಾ ನೌಕರರು ಪಟ್ಟಣದಲ್ಲಿ ಸ್ವಚ್ಛತೆ ಸ್ಥಗಿತ ಗೊಳಿಸಿ ಮುಷ್ಕರ ನಡೆಸುತ್ತಿರುವುದರಿಂದ ಮುಖ್ಯ ರಸ್ತೆ ಬದಿಯಲ್ಲಿ ಕಸದ ರಾಶಿಗಳು ಕಂಡುಬರುತ್ತಿತ್ತು.

ಪುರಸಭೆ ಅಧ್ಯಕ್ಷರು, ಉಪಾಧ್ಯಕ್ಷೆ ಹಾಗೂ ಕೆಲ ಸದಸ್ಯರು ಮನವೊಲಿಕೆಗೆ ಒಗ್ಗೊಡದ ಕಾರಣ ಶಾಸಕರಿಗೆ ವಿಷಯ ತಿಳಿಸಿದಾಗ, ಅವರು ಮುಷ್ಕರ ನಿರತ ಸ್ಥಳಕ್ಕೆ ಭೇಟಿ ನೀಡಿದ ಪೊನ್ನಣ್ಣ ಖಾಸಗಿ ಕಾರ್ಮಿಕರನ್ನು ಕರೆದುಕೊಂಡು ಕಸ ತುಂಬಿಸುವ ವಾಹನವನ್ನು ಚಾಲನೆ ಮಾಡಿದಾಗ ಮುಷ್ಕರದಲ್ಲಿ ಭಾಗಿಯಾಗಿದ್ದ ಪ್ರತಿಭಟನಾ ಪೌರ ಕಾರ್ಮಿಕರು ಮನವಿ ನೀಡಿದರು.

ಮನವಿ ಸ್ವೀಕರಿಸಿದ ಶಾಸಕರು ಇದು ಸರಕಾರದ ಮಟ್ಟದಲ್ಲಿ ಆಗಬೇಕು ಅದುವರೆಗೂ ಮುಷ್ಕರದಲ್ಲಿ ಭಾಗಿಯಾದರೆ ಕರ್ತವ್ಯ-ಸ್ವಚ್ಛತೆ ಬಗ್ಗೆ ಪ್ರಶ್ನಿಸಿದಾಗ ಪೌರ ನೌಕರರು ನಾಳೆಯಿಂದ ಕರ್ತವ್ಯದಲ್ಲಿ ಭಾಗವಹಿಸುತ್ತೇವೆಂದು ಪೌರ ಸೇವಾ ನೌಕರರ ರಾಜ್ಯ ಪರಿಷತ್ ಸದಸ್ಯ ಕೆ.ಕೆ.ಇರ್ಫಾನ್ ತಿಳಿಸಿದರು.

ಪೌರ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ಅಕ್ಕಮಹಾದೇವಿ, ಕಾರ್ಯದರ್ಶಿ ವೇಲುಮುರುಗ, ಉಪಾಧ್ಯಕ್ಷ ಸುಂದರ, ಮಣಿ ಸೇರಿದಂತೆ ಪೌರ ಕಾರ್ಮಿಕವರ್ಗ, ಹಾಗೂ ಜಿಲ್ಲಾ ಕಾಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿ ಪೂಣಚ್ಚ, ನಗರ ಅಧ್ಯಕ್ಷ ಮಾದಂಡ ತಿಮ್ಮಯ್ಯ, ಪುರಸಭೆ ಮುಖ್ಯಧಿಕಾರಿ ಪಿ.ಕೆ.ನಾಚಪ್ಪ, ಅಧ್ಯಕ್ಷೆ ಎಂ.ಕೆ.ದೇಚಮ್ಮ, ಉಪಾಧ್ಯಕ್ಷೆ ಫಸಿಹತಬಸವ್, ಸ್ಥಾಯಿ ಸಮಿತಿ ಅಧ್ಯಕ್ಷ ಅಬ್ದುಲ್ ಜಲೀಲ್, ಹೆಚ್.ಎಂ. ಪೂರ್ಣಿಮಾ, ಸದಸ್ಯ ಎಸ್.ಹೆಚ್. ಮತೀನ್, ವಿ.ಆರ್.ರಜನಿ ಕಾಂತ್, ಶಹುಲ್ ಹಮೀದ್ ಮತ್ತಿತರರು ಉಪಸ್ಥಿತರಿದ್ದರು.

ವೆಲ್ಡರ್‌ಗಳಿಗೆ ವೆಲ್ಡಿಂಗ್ ಕಿಟ್‌ಗಳ ವಿತರಣೆ



ಶಾಸಕ ಡಾ.ಮಂತರ್‌ಗೌಡ ನೋಂದಾಯಿತ ವೆಲ್ಡರ್‌ಗಳಿಗೆ ಕಿಟ್‌ಗಳನ್ನು ವಿತರಿಸಿದರು.

ಮಡಿಕೇರಿ, ಜೂ.1- ಮಡಿಕೇರಿಯ ಜಿಲ್ಲಾ ಪಂಚಾಯತ್ ಕೆಡಿಪಿ ಸಭಾಂಗಣದಲ್ಲಿ ಶುಕ್ರವಾರ ನಡೆದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಶಾಸಕ ಡಾ.ಮಂತರ್ ಗೌಡ ನೋಂದಾಯಿತ ವೆಲ್ಡರ್‌ಗಳಿಗೆ ನೋಂದಣಿಯ ಹಿರಿತನದ ಆಧಾರದ ಮೇಲೆ ವೆಲ್ಡಿಂಗ್ ಕಿಟ್‌ಗಳನ್ನು ವಿತರಿಸಿದರು.

ಈ ಸಂದರ್ಭದಲ್ಲಿ ಕೆಡಿಪಿ ಸಭೆಯ ನಾಮನಿರ್ದೇಶಿತ ಸದಸ್ಯರುಗಳಾದ ಎಂ.ಯು.ಅಬ್ದುಲ್ ರಜಾಕ್, ಮಂದ್ರಿರಾ ಮೋಹನ್ ದಾಸ್, ಶ್ಯಾಮ್ ಸುಬ್ಬಯ್ಯ, ತಹಶೀಲ್ದಾರ್ ಪ್ರವೀಣ್ ಕುಮಾರ್, ತಾಪಂ ಇಒ ಶೇಖರ್, ತಾಲೂಕು ಕಾರ್ಮಿಕ ಅಧಿಕಾರಿ ಎಂ.ಎಂ.ಯತ್ನಟ್ಟಿ ಇದ್ದರು.

ಮಳೆಗೆ ನೆಲಕ್ಕುರುಳಿದ ವಿದ್ಯುತ್ ಕಂಬ



ರಾಷ್ಟ್ರೀಯ ಹೆದ್ದಾರಿಯಲ್ಲಿ ಮರ ಬಿದ್ದು, ನೆಲಕ್ಕುರುಳಿದ ವಿದ್ಯುತ್ ಕಂಬ.

ಮಡಿಕೇರಿ: ಮಡಿಕೇರಿ-ಮದೆನಾಡು ನಡುವಿನ ರಾಷ್ಟ್ರೀಯ ಹೆದ್ದಾರಿ 275ನಲ್ಲಿ ಮರ ಬಿದ್ದು, ವಿದ್ಯುತ್ ಕಂಬಗಳು ನೆಲಕ್ಕುರುಳಿದ ಘಟನೆ ನಡೆದಿದೆ. ಪರಿಣಾಮ ಕೆಲವು ಗಂಟೆಗಳ ಕಾಲ ಹೆದ್ದಾರಿಯ ಎರಡೂ ಬದಿಗಳಲ್ಲಿ ನೂರಾರು ವಾಹನಗಳು ಕಾದು ನಿಲ್ಲುವಂತಾಯಿತು.

ಅರಣ್ಯ ಇಲಾಖೆ, ಚೆಸ್ಕಾಂ ಸಿಬ್ಬಂದಿ ಸ್ಥಳಕ್ಕಾಗಮಿಸಿ ಮರ ತೆರವು ಮಾಡಿ, ಮುರಿದು ಬಿದ್ದ ವಿದ್ಯುತ್ ಕಂಬಗಳನ್ನು ಬದಿಗೆ ಸರಿಸಿ ವಾಹನಗಳ ಸಂಚಾರಕ್ಕೆ ಅನುವು ಮಾಡಿದರು. ಮರ ಬಿದ್ದು, ವಿದ್ಯುತ್ ಕಂಬಗಳಿಗೆ ಹಾನಿಯಾದ ಪರಿಣಾಮ ಮದೆನಾಡು, ಮೊಣ್ಣಂಗೇರಿ, ಜೋಡುಪಾಲ ಕಡೆಗಳಲ್ಲಿ ವಿದ್ಯುತ್ ವ್ಯತ್ಯಯ ಕಂಡು ಬಂದಿದೆ. ಮಳೆ ಬಿಡುವು ನೀಡಿರುವ ಹಿನ್ನೆಲೆಯಲ್ಲಿ ವಿದ್ಯುತ್ ಕಂಬಗಳನ್ನು ಬದಲಿಸಿ ದುರಸ್ತಿ ಮಾಡುವ ಕಾರ್ಯವೂ ಭರದಿಂದ ಸಾಗಿದೆ.

ಪತ್ರಿಕೆ ಉಳಿಸುವ ಚಳವಳಿ ಆರಂಭಿಸಿ

ಹಿರಿಯ ರಂಗಕರ್ಮಿ ಕೆ. ವೆಂಕಟರಾಜು ಸಲಹೆ



ಜಿಲ್ಲಾ ಪತ್ರಿಕಾ ವಿತರಕರ ಸಂಘವು ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಕೆ.ಎಸ್. ಫಾಲಲೋಚನ ಆರಾಧ್ಯ ಅವರನ್ನು ಅಭಿನಂದಿಸಿತು.

ಚಾಮರಾಜನಗರ, ಜೂ.1-ಪತ್ರಿಕೆಗಳ ಓದುವವರ ಸಂಖ್ಯೆ ಹೆಚ್ಚಿಸಲು ಬಲವಂತವಾಗಿ ಆದರೂ ಪತ್ರಿಕೆ ಕೊಂಡು ಓದುವ ಚಳವಳಿಯನ್ನು ಕನ್ನಡ ರಾಜ್ಯೋತ್ಸವ ದಿನದಂದೇ ಆಯೋಜಿಸಬೇಕು ಎಂದು ಹಿರಿಯ ರಂಗಕರ್ಮಿ ಕೆ. ವೆಂಕಟರಾಜು ಸಲಹೆ ನೀಡಿದ್ದಾರೆ.

ಜಿಲ್ಲಾ ಪತ್ರಿಕಾ ವಿತರಕರ ಸಂಘವು ಆಯೋಜಿಸಿದ್ದ ಶ್ರೀ ಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಕೆ.ಎಸ್. ಫಾಲಲೋಚನ ಆರಾಧ್ಯರಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ದಶಕಗಳ ಹಿಂದೆ ಪತ್ರಿಕೆಗಳಲ್ಲಿ ಸುದ್ದಿ ಓದುವವರು ಸಂಖ್ಯೆ ಗಣನೀಯ ಪ್ರಮಾಣದಲ್ಲಿತ್ತು ಇತ್ತೀಚಿನ ದಿನಗಳಲ್ಲಿ ಪತ್ರಿಕೆಗಳನ್ನು ಓದುವವರ ಸಂಖ್ಯೆ ಕ್ಷೀಣಿಸುತ್ತಿದ್ದು, ಪತ್ರಿಕೆಗಳು ಕೇವಲ ಜಾಹೀರಾತನ್ನು ಅವಲಂಬಿಸಿಕೊಂಡಿದೆ ಹೀಗಾಗಿ ಕನ್ನಡ ಪತ್ರಿಕೆಗಳನ್ನು ಉಳಿಸುವ ಚಳವಳಿಯನ್ನು ನಗರದಿಂದಲೇ ಕನ್ನಡ ರಾಜ್ಯೋತ್ಸವ ದಂದೇ ಆರಂಭಿಸಬೇಕು ಎಂದರು.

ಯಾವುದೇ ಪಕ್ಷ, ಜಾತಿ, ಗುಂಪಿನ ಜೊತೆ ಗುರುತಿಸಿಕೊಳ್ಳದೆ ಯಾವುದೇ ಗೊಂದಲಗಳಿಗೆ ಎಡೆಮಾಡಿಕೊಡದೆ ಸರಳವಾಗಿ ಸುದ್ದಿ ಮಾಡುವ ಧೋರಣೆಯೊಂದಿರುವ ಫಾಲಲೋಚನ ಆರಾಧ್ಯರ ನಿಸ್ವಾರ್ಥ ಸೇವೆಗಾಗಿ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚು ಪ್ರಶಸ್ತಿ ಸಿಗುವಂತಾಗಲಿ ಎಂಬ ಆಶಯ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಸಿ.ಕೆ.ಮಹೇಂದ್ರ ಮಾತನಾಡಿ, ಕನ್ನಡ ಪತ್ರಿಕೆ ಉಳಿಸುವ ಕಾರ್ಯಕ್ಕೆ ಮೈಸೂರು ಜಿಲ್ಲಾ ಪತ್ರಕರ್ತರು ಕೈಜೋಡಿಸಲಿದ್ದು, ಈ ಕಾರ್ಯವನ್ನು ಚಾಮರಾಜನಗರದಿಂದಲೇ ಆರಂಭಿಸಿ ಎಂದು ಮನವಿ ಮಾಡಿದರು.

ಬಳಿಕ ಸನ್ಮಾನ ಸ್ವೀಕರಿಸಿದ ಆರಾಧ್ಯ ಮಾತನಾಡಿ, ಪತ್ರಿಕೆಗಳು ಇಂದು ಉಳಿದಿವೆ ಎಂದರೆ ಅದಕ್ಕೆ ಕಾರಣ ಪತ್ರಿಕಾ ವಿತರಕರು. ಪತ್ರಿಕಾ ವರದಿಗಾರನಾಗಲು ಹಿರಿಯ ಪತ್ರಕರ್ತ ರೇಣುಕಾರಾಧ್ಯ, ವೆಂಕಟರಾಜು ಅವರ ಮಾರ್ಗದರ್ಶನ ಮರೆಯುವಂತಿಲ್ಲ, ಪತ್ರಿಕಾ ವಿತರಕ ಸಂಘದಿಂದ ಸನ್ಮಾನಿಸಿ ಅಭಿನಂದಿಸಿರುವುದು ತಮಗೆ ಖುಷಿ ತಂದಿದೆ ಎಂದರು.

ಜಿಲ್ಲಾ ಪತ್ರಿಕಾ ವಿತರಕರ ಸಂಘದ ಅಧ್ಯಕ್ಷ ಸಿ.ಪುರುಷೋತ್ತಮ್ ಮಾತನಾಡಿ, ಜಿಲ್ಲೆಯಲ್ಲಿ ಈಗಾಗಲೇ ಪತ್ರಿಕಾ ವಿತರಕರಿಗೆ ಇ-ಶ್ರಮ್‌ಕಾರ್ಡ್ ಮಾಡಿಸಿಕೊಡಲಾಗಿದೆ. ಪಿಎಂ ಸ್ವ-ನಿಧಿ ಯೋಜನೆಯಡಿ ಪತ್ರಿಕಾ ವಿತರಕರಿಗೆ 10 ಸಾವಿರ ಸಾಲ ಸೌಲಭ್ಯ ಸಿಕ್ಕಿತ್ತು, ಎರಡನೇ ಬಾರಿಗೆ ಮಂಜೂರಾಗಬೇಕಿದ್ದ 20 ಸಾವಿರ ರೂ, ಸಾಲವನ್ನು ನಗರಸಭೆಯವರು ಯೋಜನೆ ಸ್ಥಗಿತಗೊಳಿಸಿದ್ದು, ಪತ್ರಿಕಾ ವಿತರಕರು ಸಂಕಷ್ಟದಲ್ಲಿ ಸಿಲುಕಿದ್ದಾರೆ. ಕೂಡಲೇ ಕೇಂದ್ರ ಸರ್ಕಾರ ಪಿಎಂ ಸ್ವ-ನಿಧಿ ಯೋಜನೆಯನ್ನು ಪುನರಾರಂಭಿಸಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಲಕ್ಕೂರು ಪ್ರಸಾದ್, ಜಿಲ್ಲಾ ಪತ್ರಿಕಾ ವಿತರಕರ ಸಂಘದ ಪ್ರಧಾನ ಕಾರ್ಯದರ್ಶಿ ಎನ್. ಅಕ್ಷಯ್, ಗೌರವಾಧ್ಯಕ್ಷ ಚಂದ್ರಶೇಖರ್, ಉಪಾಧ್ಯಕ್ಷ ಹೆಗ್ಗವಾಡಿಪುರ ಮಹದೇವು, ಸಹ ಕಾರ್ಯದರ್ಶಿ ನವೀನ್, ನಿರ್ದೇಶಕ ಆರ್.ಎನ್. ಸಿದ್ದಲಿಂಗಸ್ವಾಮಿ, ಎಂ. ಲಿಂಗಪ್ಪ, ಸಿದ್ದರಾಜು, ಶಿವಲಿಂಗ ಮೂರ್ತಿ, ಖಜಾಂಚಿ ಎಸ್. ಪ್ರತಾಪ್, ಬಿಳಿಗಿರಿ ಶ್ರೀನಿವಾಸ್, ಚರಣ್ ಬಿಳಿಗಿರಿ ಹಾಗೂ ಸದಸ್ಯರು ಹಾಜರಿದ್ದರು.

ಸರ್ಕಾರದ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಳ್ಳಿ

ಫಲಾನುಭವಿಗಳಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಪರಿಕರ ವಿತರಣೆ



ಅಂಬೇಡ್ಕರ್ ಅಭಿವೃದ್ಧಿ ನಿಗಮ ಹಾಗೂ ಬೋವಿ ಅಭಿವೃದ್ಧಿ ನಿಗಮದಿಂದ ಕೊಳವೆಬಾವಿ ಪರಿಕರ ಹಾಗೂ ವಾಹನಗಳನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಫಲಾನುಭವಿಗಳಿಗೆ ವಿತರಿಸಿದರು.

ಚಾಮರಾಜನಗರ, ಜೂ.1- ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಸ್ವಾವಲಂಬಿ ಸಾರಥಿ ಯೋಜನೆಯಡಿಯಲ್ಲಿ ಬೋವಿ ಅಭಿವೃದ್ಧಿ ನಿಗಮದ ವತಿಯಿಂದ ವಿತರಿಸುತ್ತಿರುವ ಸರ್ಕಾರದ ಸವಲತ್ತುಗಳನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಹೇಳಿದರು.

ನಗರದ ಡಾ.ಬಿ.ಆರ್. ಅಂಬೇಡ್ಕರ್ ಭವನದ ಆವರಣದಲ್ಲಿ ಶನಿವಾರ ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿಯಿಂದ ಕ್ಷೇತ್ರದ ವಿವಿಧ ಗ್ರಾಮಗಳ 5 ಫಲಾನುಭವಿಗಳಿಗೆ ಗಂಗಾ ಕಲ್ಯಾಣ ಯೋಜನೆಯಡಿ ಕೊರೆದ ಕೊಳವೆಬಾವಿ ಪರಿಕರಗಳು ಹಾಗೂ ಬೋವಿ ಅಭಿವೃದ್ಧಿ ನಿಗಮದಿಂದ ಇಬ್ಬರು ಫಲಾನುಭವಿಗಳಿಗೆ ವಾಹನ ವಿತರಿಸಿ ಕೊಳವೆ ಬಾವಿ ಪರಿಕರ ಪಡೆದವರು ಸಕಾಲಕ್ಕೆ ಅಳವಡಿಸಿಕೊಳ್ಳುವ ಮೂಲಕ ಕೃಷಿಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕು ಎಂದರು.

ಅಂಬೇಂಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಾಜು, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಬಿಸಲವಾಡಿ ರವಿ, ನಾರಾಯಣನಾಯ್ಕ, ನಗರಸಭೆ ನಾಮನಿರ್ದೇಶನ ಸದಸ್ಯ ಸ್ವಾಮಿ, ಅಮಚವಾಡಿ, ಶಿವಣ್ಣ, ನಾಗಯ್ಯ, ನಾಗವಳ್ಳಿ, ವಿನೋದ್, ಮೋಹನ್ ನಗು, ನಾಗೇಂದ್ರ, ಸ್ವಾಮಿ ರಾಮಸಮುದ್ರ, ಚಿಕ್ಕಕೆಂಪಿಹುಂಡಿ, ಅಮಚವಾಡಿ, ಬಿಸಲವಾಡಿ, ಮಂಗಲ, ಚಾಮರಾಜನಗರದ ಫಲಾನುಭವಿಗಳು ಹಾಜರಿದ್ದರು.

ಪತಿ ನಾಪತ್ತೆ: ಪತ್ನಿ ದೂರು



ಕೊಳ್ಳೇಗಾಲ: ತಾಲೂಕಿನ ಕುಂತೂರು ಗ್ರಾಮದ ವಾಸಿ ಗೋವಿಂದ' (47)ಎಂಬುವರು 25 ದಿನಗಳಿಂದ ಕಾಣೆಯಾಗಿರುವ ಬಗ್ಗೆ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಮೇ 8ರಂದು ಕುಂತೂರು ವೃತ್ತದ ಬಳಿಗೆ ಹೋಗಿ ಬರುವುದಾಗಿ ತನ್ನ ಪತಿ ಗೋವಿಂದ ಹೇಳಿ ತೆರಳಿದರಾದರೂ ಸಹ ಇನ್ನು ವಾಪಸ್ಸು ಬಂದಿಲ್ಲ, ಸಂಬಂಧಿಕರು ಹಾಗೂ ಅವರು ತೆರಳುವ ಎಲ್ಲಾ ಕಡೆ ಹುಡುಕಿದರೂ ಸಿಕ್ಕಿಲ್ಲ, ನನ್ನ ಪತಿಯನ್ನು ಹುಡುಕಿ ಕೊಡಿ ಎಂದು ಕಾಣೆಯಾದ ಗೋವಿಂದನ ಪತ್ನಿ ಸಾವಿತ್ರಿ ಪೊಲೀಸರಿಗೆ ನೀಡಿರುವ ದೂರಿನಲ್ಲಿ ಮನವಿ ಮಾಡಿದ್ದಾರೆ.

ಸಿಎಂ ವಿರುದ್ಧ ಅಸಂವಿಧಾನಿಕ ಪದ ಪ್ರಯೋಗ : ಎಸ್‌ಪಿಗೆ ದೂರು



ರೈತ ಸಂಘದ ಹೊನ್ನೂರು ಪ್ರಕಾಶ್ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಸಿದ್ದರಾಮಯ್ಯ ಅಭಿಮಾನಿ ಬಳಗ ಎಸ್‌ಪಿಗೆ ದೂರು ಸಲ್ಲಿಸಿತು.

ಚಾಮರಾಜನಗರ, ಜೂ.1- ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಅಸಂವಿಧಾನಿಕ ಪದ ಪ್ರಯೋಗ ಮಾಡಿರುವ ರೈತ ಸಂಘದ ಹೊನ್ನೂರು ಪ್ರಕಾಶ್ ವಿರುದ್ಧ ಸೂಕ್ತ ಕ್ರಮ ಜರುಗಿಸುವಂತೆ ರಾಜ್ಯ ಸಿದ್ದರಾಮಯ್ಯ ಅಭಿಮಾನಿ ಬಳಗ ಹಾಗೂ ಅಹಿಂದ ಮತ್ತು ಹಿಂದುಳಿದ ವರ್ಗಗಳ ಒಕ್ಕೂಟ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಅವರಿಗೆ ದೂರು ಸಲ್ಲಿಸಿತು.

ಚಾಮುಲ್‌ನಲ್ಲಿ ಎನ್‌ಕ್ರೀಂ ಘಟಕ ಸ್ಥಾಪನೆ ವಿರೋಧಿಸಿ ನಡೆದ ರೈತ ಸಂಘದ ಪ್ರತಿಭಟನೆಯಲ್ಲಿ ರೈತ ಸಂಘದ ಹೊನ್ನೂರು ಪ್ರಕಾಶ್ ಮುಖ್ಯಮಂತ್ರಿಗಳನ್ನು ಸಂಬೋಧಿಸಿ ಇಲ್ಲೇ ಮುಖ್ಯಮಂತ್ರಿ ಕಾಲು, ಬಾಲ ಕಟ್ಟು ಮಾಡುತ್ತೇವೆ' ಎಂದು ಬಹಿರಂಗ ಹೇಳಿಕೆ ನೀಡುವ ಮೂಲಕ ಸಾರ್ವಜನಿಕವಾಗಿ ಬೆದರಿಕೆಯೊಡ್ಡಿರುವ ವ್ಯಕ್ತಿಯ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ದೂರಿನಲ್ಲಿ ಅಭಿಮಾನಿ ಬಳಗದ ಜಿಲ್ಲಾಧ್ಯಕ್ಷ ಬೆಳೇಗೌಡ ಒತ್ತಾಯಿಸಿದ್ದಾರೆ.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಸಮಿತಿ ಅಧ್ಯಕ್ಷ ಹೆಚ್.ವಿ. ಚಂದ್ರು, ಜಿ.ಪಂ. ಮಾಜಿ ಸದಸ್ಯ ರಮೇಶ್, ತಾ.ಪಂ. ಮಾಜಿ ಸದಸ್ಯ ಮಹದೇವಶೆಟ್ಟಿ, ರಾಜೇಂದ್ರ ಸ್ವಾಮಿ, ಚಾಮುಲ್ ನಿರ್ದೇಶಕ ರೇವಣ್ಣ, ಮಹದೇವಪ್ರಸಾದ್ ಫಸಿ, ಸೊತ್ತನಹುಂಡಿ ಎಂ.ಸೋಮಣ್ಣ, ಕುದೇರು ಲಿಂಗಣ್ಣ, ತಮ್ಮಡಹಳ್ಳಿಗೌಡ, ತಾಲೂಕು ಕುರುಬರ ಸಂಘದ ನಿರ್ದೇಶಕ ಹೊಮ್ಮ ಶಿವಕುಮಾರ್, ಮನೋಜ್, ಶಿವಮೂರ್ತಿ ನಂಜೇದೇವನಪುರ ಇತರರು ಹಾಜರಿದ್ದರು.

ರಸ್ತೆ, ಚರಂಡಿ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ



ತಾಲೂಕಿನ ಲಕ್ಕೂರು ಗ್ರಾಮದ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಭೂಮಿಪೂಜೆ ನೆರವೇರಿಸಿದರು.

ಗುಂಡ್ಲುಪೇಟೆ ಜೂ.1 (ಸೋಮ್.ಜಿ)- ತಾಲೂಕಿನ ಲಕ್ಕೂರು ಗ್ರಾಮದ ಸಾಮಾನ್ಯ ವರ್ಗದ ಬೀದಿಯಲ್ಲಿ ಮುಖ್ಯಮಂತ್ರಿಗಳ ವಿಶೇಷ ಅನುದಾನದಲ್ಲಿ 30 ಲಕ್ಷ ವೆಚ್ಚದ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿಗೆ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಭೂಮಿಪೂಜೆ ನೆರವೇರಿಸಿದರು.

ತಾಲೂಕಿನ ವಿವಿಧಗ್ರಾಮಗಳಲ್ಲಿನ ಸಾಮಾನ್ಯ ವರ್ಗದವರ ಬೀದಿಗಳಲ್ಲಿ ರಸ್ತೆಗಳು ಮತ್ತು ಚರಂಡಿ ಹದಗೆಟ್ಟಿದ್ದು, ತೀರಾ ಅವಶ್ಯಕವಾದ ಹಿನ್ನೆಲೆಯಲ್ಲಿ ಲಕ್ಕೂರು ಗ್ರಾಮದಲ್ಲಿ 30 ಲಕ್ಷ ರೂಪಾಯಿಗಳ ಅಂದಾಜು ಮೊತ್ತದಲ್ಲಿ ಕಾಂಕ್ರೀಟ್‌ರಸ್ತೆ ಮತ್ತು ಚರಂಡಿ ನಿರ್ಮಿಸುವ ಗುರಿಯನ್ನು ಹೊಂದಲಾಗಿದೆ. ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು ಎಂದರು.

ಗ್ರಾಪಂ ಅಧ್ಯಕ್ಷೆ ಮಂಗಳಮ್ಮ, ಮುಖಂಡರಾದ ಕಬ್ಬಳ್ಳಿ ಮಹೇಶ್, ಬಸವರಾಜಪ್ಪ, ಗುರುಮಲ್ಲಪ್ಪ, ನಾಗಮಲ್ಲಪ್ಪ, ಶಿವಶಂಕರ ಮೂರ್ತಿ, ಚಂದ್ರು, ಎನ್.ಲಕ್ಕೂರು, ರವಿ, ಗಂಗಾಧರ್, ಶಿವಕುಮಾರ್, ವೆಂಕಟಶೆಟ್ಟಿ, ಪುಟ್ಟಸ್ವಾಮಿ, ಚಿನ್ನಸ್ವಾಮಿ, ಗಿರೀಶ್ ಮತ್ತು ಗ್ರಾಮಸ್ಥರು ಹಾಜರಿದ್ದರು.

ಕಮಲಹಾಸನ್ ಹೇಳಿಕೆ ಖಂಡಿಸಿ ಕರವೇ ಪ್ರತಿಭಟನೆ

ಚಾಮರಾಜನಗರ, ಜೂ.1- ಬಹುಭಾಷಾ ನಟ ಕಮಲಹಾಸನ್ ವಿವಾದಾತ್ಮಕ ಹೇಳಿಕೆ ನೀಡಿದ್ದನ್ನು ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ರಸ್ತೆತಡೆ ನಡೆಸಿ, ನಟ ಕಮಲ್ ಭಾವಚಿತ್ರ ಹರಿದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆ ನೇತೃತ್ವ ವಹಿಸಿದ್ದ ಜಿಲ್ಲಾಧ್ಯಕ್ಷ ಮಂಜೇಶ್ ಮಾತನಾಡಿ, ಕೂಡಲೇ ಕಮಲ ಹಾಸನ್ ಕನ್ನಡಿಗರ ಹಾಗೂ ಕನ್ನಡ ಭಾಷೆಯ ಬಗ್ಗೆ ಕ್ಷಮೆ ಕೋರಬೇಕು ಇಲ್ಲದಿದ್ದಲ್ಲಿ ಮುಂದಿನ ವಾರ ತೆರೆ ಕಾಣಲಿರುವ ಅವರ ಥಗ್‌ಲೈಫ್ ಸಿನಿಮಾವನ್ನು ರಾಜ್ಯಾದ್ಯಂತ ಬಹಿಷ್ಕಾರ ಮಾಡುತ್ತೇವೆ. ಒಂದು ವೇಳೆ ಚಿತ್ರ ಬಿಡುಗಡೆ ಮಾಡಿದರೆ ಬೀದಿಗಿಳಿದು ಉಗ್ರ ಹೋರಾಟ ಮಾಡಿ ತಡೆಯುವುದಾಗಿ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ತಾಲೂಕು ಅಧ್ಯಕ್ಷ ಹಂಡ್ರಕಳ್ಳಿ ಸಂತೋಷ್, ಮಹಿಳಾ ಜಿಲ್ಲಾಧ್ಯಕ್ಷೆ ಭಾಗ್ಯಲಕ್ಷ್ಮೀ, ತಾಲೂಕು ಅಧ್ಯಕ್ಷೆ ಸುಮಾ, ರಾಘವೇಂದ್ರ, ರಮೇಶ್ ನಾಯಕ, ಮಹೇಶ್, ಕುಮಾರ್, ಸುಂದರ್, ಮಹಾದೇವಸ್ವಾಮಿ, ರೂಪೇಶ್, ರಾಜೇಂದ್ರ ಇತರರು ಭಾಗವಹಿಸಿದ್ದರು.



ಕಮಲಹಾಸನ್ ಹೇಳಿಕೆ ಖಂಡಿಸಿ ಕರ್ನಾಟಕ ರಕ್ಷಣಾ ವೇದಿಕೆ ನಗರದಲ್ಲಿ ಪ್ರತಿಭಟನೆ ನಡೆಸಿತು.

ರಾಜಕೀಯ ದ್ವೇಷಕ್ಕೆ ಜನೌಷಧಿ ಕೇಂದ್ರಗಳು ಬಲಿಯಾಗದಿರಲಿ


ಸಂದೇಶ್ ಸ್ವಾಮಿ

ಮೈಸೂರು, ಜೂ.1– ಕಾಂಗ್ರೆಸ್ ಪಕ್ಷದ ರಾಜಕೀಯ ದ್ವೇಷಕ್ಕೆ ಪ್ರಧಾನಮಂತ್ರಿ ಭಾರತೀಯ ಜನೌಷಧಿ ಕೇಂದ್ರಗಳು ಬಲಿಯಾಗದಿರಲಿ ಎಂದು ಬಿಜೆಪಿ ಮುಖಂಡರೂ ಆದ ಮಾಜಿ ಮೇಯರ್ ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ.

ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿನ ಸುಮಾರು 140ಕ್ಕೂ ಹೆಚ್ಚು ಜನೌಷಧ ಮಳಿಗೆಗಳನ್ನು ಮುಚ್ಚುವಂತೆ ಸರ್ಕಾರ ಆದೇಶಿಸಿರುವುದು ಜನ ವಿರೋಧಿ ಕ್ರಮ ಎಂದಿರುವ ಅವರು, ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳ ಚಿಕಿತ್ಸೆಗೆ ಇತ್ತೀಚೆಗಷ್ಟೆ ದುಬಾರಿ ಶುಲ್ಕ ವಿಧಿಸಿದ ಕಾಂಗ್ರೆಸ್ ಸರ್ಕಾರ, ಇದೀಗ ರೋಗಿಗಳಿಗೆ ಕಡಿಮೆ ದರದಲ್ಲಿ ಔಷಧಿಗಳನ್ನು ಮಾರಾಟ ಮಾಡುತ್ತಿದ್ದ ಜನೌಷಧಿ ಕೇಂದ್ರಗಳನ್ನು ಮುಚ್ಚಿಸುತ್ತಿರುವುದು ಗಾಯದ ಮೇಲೆ ಮತ್ತಷ್ಟು ಬರೆ ಎಳೆದಂತಾಗಿದೆ. ಬಡರೋಗಿಗಳ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕಾದ ರಾಜ್ಯ ಸರ್ಕಾರ ಪ್ರಧಾನಿ ಹೆಸರಿನಲ್ಲಿ ಔಷಧ ಮಳಿಗೆಗಳಿರುವುದನ್ನು ಸಹಿಸದೆ ರಾಜಕೀಯ ಸೇಡಿನ ಕ್ರಮ ಅನುಸರಿಸುತ್ತಿರುವುದು ನಿಜಕ್ಕೂ ನಾಚಿಕೆಗೇಡಿನ ಸಂಗತಿ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸರ್ಕಾರದ ಬಹುತೇಕ ಆಸ್ಪತ್ರೆಗಳಲ್ಲಿ ವೈದ್ಯರು ಅಗತ್ಯ ಔಷಧಿಗಳಿಗೆ ಚೀಟಿ ಬರೆದು ಕೊಡುತ್ತಾರೆ. ಆ ಚೀಟಿ ಪಡೆದು ಆಸ್ಪತ್ರೆಯ ಔಷಧ ವಿಭಾಗಕ್ಕೆ ಕೊಟ್ಟರೆ, ಒಂದು ಔಷಧ ಇದ್ದರೆ ಮತ್ತೊಂದು ಇರುವುದಿಲ್ಲ. ಅದನ್ನು ಹೊರಗೆ ಖರೀದಿಸುವಂತೆ ಸೂಚಿಸುತ್ತಾರೆ. ಖಾಸಗಿ ಔಷಧ ಮಳಿಗೆಗಳಲ್ಲಿ ಬಡವರು ಅಧಿಕ ಹಣ ತೆತ್ತು ಖರೀದಿಸಲು ಸಾಧ್ಯವಾಗುತ್ತಿರಲಿಲ್ಲ. ಆದ ಕಾರಣ ಅತಿ ಅಗ್ಗದ ದರಕ್ಕೆ ಬಡರೋಗಿಗಳಿಗೆ ಔಷಧಿಗಳು ಲಭ್ಯವಾಗಲೆಂದು ಸರ್ಕಾರಿ ಆಸ್ಪತ್ರೆಗಳ ಆವರಣದಲ್ಲಿಯೇ ಜನೌಷಧಿ ಮಳಿಗೆಗಳನ್ನು ತೆರೆಯಲಾಗಿತ್ತು. ಆದರೆ ಏಕಾಏಕಿ ರೋಗಿಗಳ ಪಾಲಿಗೆ ವರದಾನವಾಗಿದ್ದ ಜನೌಷಧಿ ಮಳಿಗೆಗಳನ್ನು ಮುಚ್ಚಿಸುತ್ತಿರುವುದು ಅನ್ಯಾಯ ಎಂದಿದ್ದಾರೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಅಗತ್ಯವಾಗಿರುವ ಎಲ್ಲಾ ಔಷಧಗಳನ್ನು ಸರಬರಾಜು ಮಾಡುತ್ತಿದ್ದೇವೆಯೇ ಎಂಬುದರ ಬಗ್ಗೆ ಆರೋಗ್ಯ ಸಚಿವರು ಆತ್ಮಾವಲೋಕನ ಮಾಡಿಕೊಳ್ಳಬೇಕು. ಸಿಎಂ ಸಿದ್ದರಾಮಯ್ಯ ಅವರು ಜನರ ಆರೋಗ್ಯದ ಬಗ್ಗೆಯೂ ಕಾಳಜಿ ವಹಿಸಬೇಕು. ಭಾರತೀಯ ಜನೌಷಧಿ ಮಳಿಗೆಗಳನ್ನು ಮುಚ್ಚಿಸುವ ರಾಜ್ಯ ಸರ್ಕಾರದ ಆದೇಶವನ್ನು ಪುನರ್ ಪರಿಶೀಲಿಸುವಂತೆ ಸಂದೇಶ್ ಸ್ವಾಮಿ ಮನವಿ ಮಾಡಿದ್ದಾರೆ.

ಜೂ.22, ಮೈಸೂರಲ್ಲಿ ರಾಜ್ಯಮಟ್ಟದ ದ್ವಿತೀಯ ಯೋಗ ಸಮ್ಮೇಳನ

ಯೋಗ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಪ್ರೊ.ರಾಮಚಂದ್ರ ವಿ.ಭಟ್ ಆಯ್ಕೆ

ಮೈಸೂರು, ಜೂ.1(ಜಿಎ)–ಕರ್ನಾಟಕ ಯೋಗ ಶಿಕ್ಷಕರ ಒಕ್ಕೂಟವು ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಮೈಸೂರಿನಲ್ಲಿ ರಾಜ್ಯ ಮಟ್ಟದ ದ್ವಿತೀಯ ಯೋಗ ಸಮ್ಮೇಳನವನ್ನು ಜೂ.22 ರಂದು ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಯೋಗ ಶಿಕ್ಷಕರ ಒಕ್ಕೂಟದ ಕಾರ್ಯಾಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯೋಗ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಬೆಂಗಳೂರಿನ ವೇದ ವಿಜ್ಞಾನ ಗುರುಕುಲದ ಅಧ್ಯಕ್ಷ ಕೋಟೆ ಮನೆ ಪ್ರೊ. ರಾಮಚಂದ್ರ ವಿ. ಭಟ್ ಅವರನ್ನು ಆಯ್ಕೆ ಮಾಡಲಾಗಿದೆ. ಧ್ವಜಾರೋಹಣ, ಆಕರ್ಷಕ ರಥದಲ್ಲಿ ಸಮ್ಮೇಳನದ ಸರ್ವಾಧ್ಯಕ್ಷರನ್ನು ಮಂಗಳವಾದ್ಯ ಹಾಗೂ ಕಲಾ ತಂಡಗಳೊಂದಿಗೆ ಹಳೇ ಜಿಲ್ಲಾಧಿಕಾರಿ ಕಚೇರಿ ಬಳಿಯಿಂದ ಕಲಾಮಂದಿರದ ಮುಖ್ಯ ದ್ವಾರದವರೆಗೂ ಕರೆತರಲಾಗುವುದು, ಈ ವೇಳೆ ಮೈಸೂರಿನ ಯೋಗ ಸಾಧಕರ ಸಿದ್ಧಿ– ಪ್ರಸಿದ್ಧಿ ಗ್ರಂಥ ಲೋಕಾರ್ಪಣೆ ನಡೆಯಲಿದೆ ಎಂದರು.

ಬಳಿಕ ಹಿರಿಯ ವಿದ್ವಾಂಸರಿಂದ ವಿದ್ವತ್ಗೋಷ್ಠಿಗಳು, ಪರಂಪರಾನುಗತಯೋಗ ದರ್ಶಿನಿ ಪ್ರದರ್ಶನ, ರಾಜ್ಯದ ವಿವಿಧೆಡೆಯ ಯೋಗ ಸಾಧಕರಿಗೆ ಯೋಗ ರತ್ನಾಕರ ಪ್ರಶಸ್ತಿ ಪ್ರದಾನ, ರಾಜ್ಯದ 31 ಜಿಲ್ಲೆಗಳ ಯೋಗ ಪ್ರತಿನಿಧಿಗಳಿಗೆ ಪ್ರಮಾಣ ಪತ್ರ ವಿತರಣೆ, ಬೆಳಗ್ಗೆ ಚಹಾ, ಮಧ್ಯಾಹ್ನ ಭೋಜನ, ಸಂಜೆ ಲಘು ಉಪಾಹಾರದ ವ್ಯವಸ್ಥೆ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಯೋಗದಿಂದ ಅನೇಕ ರೀತಿಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬಹುದು. ರೋಗ ಬರದಂತೆ ತಡೆಗಟ್ಟಲು ಯೋಗ ಸಹಕಾರಿಯಾಗಿದೆ. ದೇಶ ವಿದೇಶಗಳಲ್ಲಿ ಯೋಗ ಪ್ರಖ್ಯಾತಿ ಪಡೆಯುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಗೌರವಾಧ್ಯಕ್ಷೆ ಹಾಗೂ ಜಿಲ್ಲಾ ಆಯುಷ್ ಅಧಿಕಾರಿ ಸಿ. ರೇಣುಕಾದೇವಿ, ಪ್ರಧಾನ ಸಂಚಾಲಕ ಎನ್. ಅನಂತ, ಕಾರ್ಯನಿರ್ವಾಹಕ ಕೆ.ಜಿ. ದೇವರಾಜ್, ಉಪಾಧ್ಯಕ್ಷ ಸಿ. ರಮೇಶ್ಶೆಟ್ಟಿ, ಬಿ.ಪಿ. ಮೂರ್ತಿ, ಬಿ. ಶಾಂತಾರಾಮ್, ಯೋಗ ಕುಮಾರ್ ಉಪಸ್ಥಿತರಿದ್ದರು.

ಏರ್ ಬ್ಲಾಸ್ಟ್: ಕಾರ್ಮಿಕ ದುರ್ಮರಣ

ರಾಯಚೂರು: ಜಿಲ್ಲೆಯ ಲಿಂಗಸುಗೂರಿನ ಹಟ್ಟಿ ಚಿನ್ನದಗಣಿಯಲ್ಲಿ ಏರ್ ಬ್ಲಾಸ್ಟ್ ಆಗಿ ಓರ್ವ ಕಾರ್ಮಿಕ ಸಾವನ್ನಪ್ಪಿದ್ದು, ಮತ್ತೊಬ್ಬ ಗಂಭೀರವಾಗಿ ಗಾಯಗೊಂಡಿದ್ದಾರೆ.

ಮೃತನನ್ನು ಶರಣಬಸವ(40) ಎಂದು ಗುರುತಿಸಲಾಗಿದೆ. ಗಂಭೀರ ಗಾಯಗೊಂಡ ಕಾರ್ಮಿಕನನ್ನು ನಿರುಪಾದಿ ಎಂದು ಗುರುತಿಸಲಾಗಿದೆ. ಚಿನ್ನದ ಗಣಿಯ ಮಲ್ಲಪ್ಪ ಶಾಫ್ಟ್‌ನಲ್ಲಿ ಈ ಅವಘಡ ಸಂಭವಿಸಿದೆ. ಸುಮಾರು 2,800 ಅಡಿ ಆಳದಲ್ಲಿ ಗಣಿಗಾರಿಕೆ ಮಾಡುತ್ತಿದ್ದಾಗ ಏರ್ ಬ್ಲಾಸ್ಟ್ ಆಗಿದೆ ಎಂದು ತಿಳಿದು ಬಂದಿದೆ.

ಕೆಳಗೆ ಕಾರ್ಮಿಕರು ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ಚಿನ್ನದ ಗಣಿ ರೆಸ್ಕ್ಯೂ ಟೀಂನಿಂದ ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ. ಗಾಯಗೊಂಡ ಕಾರ್ಮಿಕನನ್ನ ಚಿನ್ನದ ಗಣಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಇಂದು ಮೈಸೂರಿನ ಕಿರುರಂಗಮಂದಿರದಲ್ಲಿ ಆಳಿದ ಮಾಸ್ವಾಮಿಗಳು ನಾಟಕ

ಮೈಸೂರು, ಜೂ.1– ನಾಲ್ವಡಿ ಸೋಶಿಯಲ್, ಕಲ್ಚರಲ್ ಅಂಡ್ ಎಜುಕೇಷನಲ್ ಟ್ರಸ್ಟ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ 'ಆಳಿದ ಮಾಸ್ವಾಮಿಗಳು' ನಾಟಕವನ್ನು ಜೂ.2ರಂದು ಸಂಜೆ 6 ಗಂಟೆಗೆ ಕಿರು ರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಹಿರಿಯ ರಂಗಕರ್ಮಿ ಬಿ.ಎಂ. ರಾಮಚಂದ್ರ ಈ ವಿಷಯ ತಿಳಿಸಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನಾಧಾರಿತ ಈ ನಾಟಕ ಪ್ರದರ್ಶನದ ಜತೆಗೆ ಉಚಿತ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭವು ನಡೆಯಲಿದೆ ಎಂದರು.

ಶಾಸಕ ಕೆ.ಹರೀಶ್ ಗೌಡ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅಧ್ಯಕ್ಷತೆ ವಹಿಸುವರು. ನಾಲ್ವಡಿ ಟ್ರಸ್ಟ್ ಅಧ್ಯಕ್ಷ ದಿನೇಶ್ ಚಮ್ಮಾಳಿಗೆ ಪ್ರಾಸ್ತಾವಿಕ ಭಾಷಣ ಮಾಡುವರು. ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಚಿಕ್ಕ ಜವರಪ್ಪ, ಬಸವ ಮಾರ್ಗ ಫೌಂಡೇಷನ್‌ನ ಬಸವರಾಜು, ಕಿರುತೆರೆ ಕಲಾವಿದ ಶಿವಾಜಿರಾವ್ ಜಾದವ್, ವಕೀಲ ಶಿವಪ್ರಸಾದ್ ಎಂ.ಸಿ. ಹುಂಡಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಹಿನ್ನೆಲೆ ಗಾಯಕಿ ಅನಿತಾ ಸಾ.ರಾ. ಮಹೇಶ್, ಮೈಸೂರು ನಗರಪಾಲಿಕೆ ಉಪ ಆಯುಕ್ತ ಸೋಮಶೇಖರ್ ಜಿಗಣಿ, ನಟ ಆದಿ ಲೋಕೇಶ್, ಸಂಗೊಳ್ಳಿ ರಾಯಣ್ಣ ಯುವ ವೇದಿಕೆ ರಾಜ್ಯಾಧ್ಯಕ್ಷ ರಾಜಶೇಖರ್, ಗೌತಮ ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು, ಸಂದೇಶ್ ಕುಮಾರ್, ನಿಂಗರಾಜು ಅವರು ವಿಶೇಷ ಆಹ್ವಾನಿತರಾಗಿ ಆಗಮಿಸಲಿದ್ದಾರೆ ಎಂದರು.

ಈ ವೇಳೆ ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿ, ರಾಜವಂಶಸ್ಥರಿಗೆ ಮೈಸೂರು ಸಂಸ್ಥಾನದ ಆಸ್ತಿ ಬಗ್ಗೆ ಚಿಂತೆ. ಶೋಷಿತರಿಗೆ ನಾಲ್ವಡಿಯೇ ಆಸ್ತಿ. ನಮಗೇ ನಾಲ್ವಡಿಯವರ ಆದರ್ಶ, ಬದುಕಿದ ರೀತಿ, ಕೊಟ್ಟ ಕೊಡುಗೆಗಳು, ಸಾಮಾಜಿಕ ನ್ಯಾಯ ಆಸ್ತಿಯಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಟ್ರಸ್ಟ್ ಅಧ್ಯಕ್ಷ ದಿನೇಶ್ ಚಮ್ಮಾಳಿಗೆ, ಪ್ರಜ್ಞಾ ಟ್ರಸ್ಟ್ ಅಧ್ಯಕ್ಷ ಸೋಸಲೆ ಸಿದ್ದರಾಜು, ಡಾ. ನಿಂಗರಾಜು, ಮಹದೇವ್, ಶಿವು ಚಾಮುಡಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಸೋಮವಾರ 2 ಜೂನ್ 2025

ಶಾಲೆಗಳಿಗೆ ಮೂಲ ಸೌಕರ್ಯಕ್ಕೆ ಒತ್ತಾಯಿಸಿ ಪ್ರತಿಭಟನೆ



ಗೋಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎದುರು ಪೋಷಕರು ಪ್ರತಿಭಟನೆ ನಡೆಸಿದರು.

ಹೆಚ್.ಡಿ.ಕೋಟೆ, ಜೂ.1– ತಾಲೂಕಿನ ಆನೆಮಾಳ, ಗೋಳೂರು ಮತ್ತು ಬಳ್ಳೆ ಹಾಡಿಗಳ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ ಸ್ವಂತ ಕಟ್ಟಡ ನಿರ್ಮಿಸಿ, ಮೂಲ ಸೌಕರ್ಯ ಒದಗಿಸುವಂತೆ ಒತ್ತಾಯಿಸಿ ಪೋಷಕರು ಗೋಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎದುರು ಪ್ರತಿಭಟನೆ ನಡೆಸಿದರು.

ನಂತರ ಮಾತನಾಡಿದ ಗೋಳೂರು ಹಾಡಿ ಪೋಷಕರು, ಹೆಚ್.ಡಿ.ಕೋಟೆ ತಾಲೂಕಿನ ಆನೆಮಾಳ ಹಾಡಿಯಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಒಂದರಿಂದ ಆರನೇ ತರಗತಿವರೆಗೆ 32 ವಿದ್ಯಾರ್ಥಿಗಳು ಓದುತ್ತಿದ್ದಾರೆ. ಈ ಶಾಲೆಗೆ ಇರುವುದು ಒಂದೇ ಕಟ್ಟಡ. ಅಲ್ಲೇ ಅಡುಗೆ ಅಲ್ಲೇ ಪಾಠ ಮತ್ತು ಶಿಕ್ಷಕರಿಗಾಗಿ ಪ್ರತ್ಯೇಕ ಕೊಠಡಿ ಇಲ್ಲವಾಗಿದೆ. ಎಲ್ಲಾ ಒಂದೇ ಕೊಠಡಿಯಲ್ಲಿ ನಡೆಯುತ್ತಿದೆ. ಹೀಗಾದರೆ ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಬಲಿಷ್ಠಗೊಳ್ಳಲು ಹೇಗೆ ಸಾಧ್ಯ? ಎಂದ ಅವರು ಶಾಲೆಯಲ್ಲಿ ಶಿಕ್ಷಕರು ಇಲ್ಲ. ಕುಡಿಯುವ ನೀರಿನ ವ್ಯವಸ್ಥೆ ಇಲ್ಲ ಮತ್ತು ಶೌಚಾಲಯ ಕೂಡ ಬಳಸುವ ರೀತಿಯಲ್ಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಹಾಡಿಗಳ ನಿವಾಸಿಗಳು ಯಾವುದೇ ಸೌಲಭ್ಯವಿಲ್ಲದೇ ಮಣ್ಣಿನ ಮನೆಯಲ್ಲಿ ಜೀವನ ಸಾಗಿಸುತ್ತಿದ್ದಾರೆ. ಅಲ್ಲದೇ ಅಧಿಕಾರಿಗಳು, ಜನಪ್ರತಿನಿಧಿಗಳ ಮಕ್ಕಳು ಭವ್ಯ ಕಟ್ಟಡದ ಶಾಲೆಗಳಲ್ಲಿ ಓದುತ್ತಿದ್ದಾರೆ. ಆದರೆ ಆದಿವಾಸಿಗಳ ಮಕ್ಕಳು ಶಾಲಾ ಕಟ್ಟಡವಿಲ್ಲದೇ ಪರದಾಡುವಂತಾಗಿದೆ. ಸರ್ಕಾರಿ ಶಾಲೆಗಳ ಪರಿಸ್ಥಿತಿ ಹೀಗಿರುವಾಗ ಮಕ್ಕಳು ಬರುತ್ತಿಲ್ಲ ಎಂಬ ನೆಪಕೊಟ್ಟು ಸರ್ಕಾರಿ ಶಾಲೆಗಳನ್ನು ಮುಚ್ಚುವುದು ಖಂಡನೀಯ. ಹಿಂದುಳಿದ ಬುಡಕಟ್ಟು ಜನಾಂಗದ ವಿದ್ಯಾರ್ಥಿಗಳಿಗೆ ಶಿಕ್ಷಣ ದೊರೆಬೇಕೆಂದರೆ ಸರ್ಕಾರ ಈ ಕೂಡಲೇ ತ್ವರಿತಗತಿಯಲ್ಲಿ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬೇಕೆಂದು ಆಗ್ರಹಿಸಿದರು.

ಶಾಲೆಗೆ ಸ್ವಂತ ಕಟ್ಟಡ ಮತ್ತು ಹೆಚ್ಚುವರಿ ಕಟ್ಟಡಗಳನ್ನು ನಿರ್ಮಿಸಬೇಕು, ಅವಶ್ಯಕ ಶಿಕ್ಷಕರನ್ನು ನೇಮಕ ಮಾಡಿಕೊಡಬೇಕು, ಶೌಚಾಲಯ ಸಮಸ್ಯೆ ನಿವಾರಿಸಬೇಕು, ಆಟದ ಮೈದಾನ ನಿರ್ಮಿಸಬೇಕು ಎಂಬುದು ಸೇರಿದಂತೆ ಇನ್ನಿತರ ಬೇಡಿಕೆಗಳನ್ನು ಈಡೇರಿಸುವಂತೆ ಮನವಿ ಮಾಡಿದರು.

ಈ ವೇಳೆ ಹಾಡಿ ನಿವಾಸಿಗಳಾದ ಕೆಂಪಮ್ಮ ಮಾರ, ಚಿಕ್ಕ, ಕೆಂಚಯ್ಯ, ಎಐಡಿಎಸ್‌ಓ ಜಿಲ್ಲಾಧ್ಯಕ್ಷೆ ಚಂದ್ರಕಲಾ, ರಾಜ್ಯ ಖಜಾಂಚಿ ಸುಭಾಷ್, ನಿತಿನ್, ಸ್ವಾತಿ, ಚೈತ್ರಾ, ಚಂದನ, ಚಂದ್ರಿಕಾ, ಹೇಮ, ನಂದೀಶ್, ಅಭಿಷೇಕ್, ನಿಶಾಂತ್ ಮತ್ತು ಆನೆಮಾಳ, ಗೋಳೂರು, ಬಳ್ಳೆ ಹಾಡಿಗಳ ಪೋಷಕರು ಉಪಸ್ಥಿತರಿದ್ದರು.

ವಿಳಂಬ ಮಾಡದೆ ನಿವೇಶನ ಹಕ್ಕು ಪತ್ರ ವಿತರಿಸಿ

ಪುರಸಭಾಧಿಕಾರಿಗಳಿಗೆ ಡಿಸಿಸಿ ಸದಸ್ಯ ಎಂ.ಶಿವಕುಮಾರ್ ಮನವಿ



ಸುದ್ದಿಗೋಷ್ಠಿಯಲ್ಲಿ ಡಿಸಿಸಿ ಸದಸ್ಯ ಎಂ.ಶಿವಕುಮಾರ್ ಮಾತನಾಡಿದರು.

ತಿ.ನರಸೀಪುರ, ಜೂ.1– ತಾಲೂಕಿನ ವರುಣ ಹಾಗೂ ತಿ.ನರಸೀಪುರ ಕ್ಷೇತ್ರ ವ್ಯಾಪ್ತಿಯ ಗೋಪಾಲಪುರ ಹಾಗೂ ಭೈರಾಪುರ ಗ್ರಾಮದ ಬಡ ನಿವಾಸಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಸಚಿವ ಹೆಚ್.ಸಿ.ಮಹದೇವಪ್ಪ ನಿವೇಶನದ ಹಕ್ಕು ಪತ್ರ ನೀಡುವಂತೆ ಆದೇಶಿಸಿದ್ದು, ಪುರಸಭಾಧಿಕಾರಿಗಳು ವಿಳಂಬ ಮಾಡದೇ ಹಕ್ಕು ಪತ್ರ ನೀಡುವ ಪ್ರಕ್ರಿಯೆಗೆ ಚಾಲನೆ ನೀಡಬೇಕೆಂದು ಜಿಲ್ಲಾ ಕಾಂಗ್ರೆಸ್ ಸಮಿತಿ ಸದಸ್ಯ ಎಂ.ಶಿವಕುಮಾರ್ ಒತ್ತಾಯಿಸಿದರು.

ಪಟ್ಟಣದ ಪಿಡಬ್ಲ್ಯೂಡಿ ಅತಿಥಿ ಗೃಹದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವರುಣ ಕ್ಷೇತ್ರ ವ್ಯಾಪ್ತಿಯ ಭೈರಾಪುರ ಗ್ರಾಮದ ಸರ್ವೆ ನಂ 43/1 ರಲ್ಲಿ 1.18 ಗುಂಟೆ ಹಾಗೂ ತಿ.ನರಸೀಪುರ ಕ್ಷೇತ್ರ ವ್ಯಾಪ್ತಿಯ ಕಸಬಾ ಹೋಬಳಿ ಗೋಪಾಲಪುರ ಗ್ರಾಮದ ಬಾಬು ಜಗಜೀವನರಾಂ ಭವನದ ಪಕ್ಕದಲ್ಲಿರುವ ಸರ್ವೆ ನಂ.7ರಲ್ಲಿ 5.18 ಎಕರೆ ಜಾಗವನ್ನು ನಿವೇಶನವಾಗಿ ಪರಿವರ್ತಿಸಿ ಗೋಪಾಲಪುರ ಗ್ರಾಮಸ್ಥರಿಗೆ ನೀಡುವಂತೆ ಈ ಹಿಂದೆ ಎಂಎಲ್‌ಸಿ ಡಾ.ಯತೀಂದ್ರ ಅವರಿಗೆ ಮನವಿ ಸಲ್ಲಿಸಲಾಗಿತ್ತು. ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಿವೇಶನ ಕೊಡಿಸಿಕೊಡುವ ಭರವಸೆ ದೊರಕಿತ್ತು. ಅದರಂತೆ ಆಶ್ರಯ ಕಮಿಟಿ ಅಧ್ಯಕ್ಷರಾಗಿದ್ದ ಡಾ.ಯತೀಂದ್ರ ಗ್ರಾಮಸ್ಥರ ಮನವಿಗೆ ಸ್ಪಂದಿಸಿ ಆಶ್ರಯ ಕಮಿಟಿ ರಚಿಸಿ 2020ರಲ್ಲಿ ಖುದ್ದಾಗಿ ನಿಂತು ನಿವೇಶನದ ಸರ್ವೆ ಮಾಡಿಸಿದ್ದರು. ಈ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗೋಪಾಲಪುರದ ಬಡ ಜನರಿಗೆ ಹಕ್ಕು ಪತ್ರ ವಿತರಣೆ ಮಾಡುವಂತೆ ಆದೇಶ ಮಾಡಿದ್ದರು. ಸಚಿವ ಮಹದೇವಪ್ಪನವರು ಸಹ ತಹಸೀಲ್ದಾರ್ ಅವರಿಗೆ ನಿರ್ದೇಶನ ನೀಡಿ ಅಗತ್ಯ ಕ್ರಮಕ್ಕೆ ಸೂಚನೆ ನೀಡಿದ್ದರು. ತಹಸೀಲ್ದಾರ್ ಸಹ ವಿಳಂಬ ಮಾಡದೇ ಮುಖ್ಯಾಧಿಕಾರಿಗಳಿಗೆ ಪತ್ರ ಕಳುಹಿಸಿದ್ದು, ಈಗ ಹಕ್ಕು ಪತ್ರ ವಿತರಣೆ ಮಾಡಬೇಕಿದೆ ಎಂದರು.

ಕಸಬಾ ಹೋಬಳಿ ಗೋಪಾಲಪುರ ಗ್ರಾಮದ ಸರ್ವೆ ನಂ.7ಕ್ಕೆ ಸಂಬಂಧಿಸಿದಂತೆ ನಿವೇಶನ ಕೊಡಿಸುವಂತೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರಿಗೆ ಜನಸ್ಪಂದನಾ ಕಾರ್ಯಕ್ರಮದಲ್ಲಿ ಗ್ರಾಮಸ್ಥರು ಅರ್ಜಿ ಸಲ್ಲಿಸಿದ್ದನ್ನು ಪರಿಗಣಿಸಿದ ಸಚಿವರು ನಿವೇಶನ ನೀಡಲು ಕ್ರಮ ಕೈಗೊಳ್ಳುವಂತೆ ತಾಲೂಕು ಆಡಳಿತಕ್ಕೆ ನಿರ್ದೇಶನ ನೀಡಿದ್ದಾರೆ. ಹಾಗಾಗಿ ಕೂಡಲೇ ಪುರಸಭೆ ಮುಖ್ಯಾಧಿಕಾರಿಗಳು ವಿಳಂಬ ಮಾಡದೇ ನಿವೇಶನದ ಹಕ್ಕು ಪತ್ರ ನೀಡಿ ಬಡವರಿಗೆ ಮೂಲ ಸೌಕರ್ಯ ಒದಗಿಸುವಂತೆ ಮನವಿ ಮಾಡಿದರು.

ಗೋಪಾಲಪುರದ ಬಡವರಿಗೆ ನಿವೇಶನ ನೀಡುವಂತೆ ಆದೇಶಿಸಿರುವ ಸಿಎಂ ಸಿದ್ದರಾಮಯ್ಯ, ಸಚಿವ ಹೆಚ್.ಸಿ.ಮಹದೇವಪ್ಪ ಸಂಸದ ಸುನೀಲ್ ಬೋಸ್ ಹಾಗೂ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರಿಗೆ ಗ್ರಾಮಸ್ಥರ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಸರ್ವೆ ಪಾರದರ್ಶಕವಾಗಿ ನಡೆದಿದೆ: ಒಳ ಮೀಸಲಾತಿಗಾಗಿ ನಡೆಯುತ್ತಿರುವ ಪ.ಜಾತಿ ಜನಾಂಗದವರ ಸರ್ವೆ ಕಾರ್ಯ ಯಾವುದೇ ಗೊಂದಲಗಳಿಲ್ಲದೇ ಮುಕ್ತವಾಗಿ ನಡೆಯುತ್ತಿದ್ದು, ಯಾರೂ ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. ಸರ್ಕಾರ ಪಾರದರ್ಶಕವಾಗಿ ಒಳ ಮೀಸಲಾತಿ ಅನುಷ್ಠಾನಗೊಳಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಗ್ರಾಮಾಂತರ ಕಾರ್ಯದರ್ಶಿ ಮಹೇಶ್, ಕಾಂಗ್ರೆಸ್ ಮುಖಂಡರಾದ ರವಿಕುಮಾರ್, ನಂಜುಂಡಯ್ಯ ಹಾಜರಿದ್ದರು.

ಹೆಳವರಹುಂಡಿಯಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ತಿ.ನರಸೀಪುರ, ಜೂ.1– ಸಾಕಷ್ಟು ಒತ್ತಡಗಳ ನಡುವೆ ಕರ್ತವ್ಯ ನಿರ್ವಹಿಸುವ ವೈದ್ಯರನ್ನು ನಾವು ಗೌರವಿಸಬೇಕು ಎಂದು ಅಖಿಲ ಭಾರತ ವೀರಶೈವ ಮಹಾಸಭಾ ಯುವ ಘಟಕದ ಅಧ್ಯಕ್ಷ ಕೈಯಂಬಳ್ಳಿ ಎನ್.ಅಶೋಕ್ ಹೇಳಿದರು.

ಪಟ್ಟಣದ ಪುರಸಭಾ ವ್ಯಾಪ್ತಿಯ ಹೆಳವರಹುಂಡಿ ಗ್ರಾಮದ ಶ್ರೀಬಸವೇಶ್ವರ ಮೆಡಿಕಲ್ ಅಂಡ್ ಸರ್ಜಿಕಲ್ ಮತ್ತು ಶ್ರೀಬಸವೇಶ್ವರ ಕ್ಲಿನಿಕ್ ಸಹಯೋಗದೊಂದಿಗೆ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮೀಣ ಜನತೆಗೆ ವೈದ್ಯಕೀಯ ಸೌಲಭ್ಯ ಕಲ್ಪಿಸಲು ಆಗಮಿಸಿರುವ ವೈದ್ಯರು ಹಾಗೂ ಆಸ್ಪತ್ರೆ ಸಿಬ್ಬಂದಿಗೆ ಪಟ್ಟಣದ ಜನತೆ ಪರವಾಗಿ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ವಕೀಲರ ಸಂಘದ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ ಮಾತನಾಡಿ, ಉಚಿತ ಆರೋಗ್ಯ ತಪಾಸಣೆ ಶಿಬಿರಗಳನ್ನು ಗ್ರಾಮೀಣ ಜನತೆಗೆ ಹೆಚ್ಚು ಒದಗಿಸಬೇಕೆಂಬ ಆಶಯದಿಂದ ಹೆಳವರಹುಂಡಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದೆ. ಗ್ರಾಮೀಣ ಕಡುಬಡವರಿಗೂ ಖಾಸಗಿ ಆಸ್ಪತ್ರೆ ಸೇವೆಗಳು ದೊರೆಯುವಂತಾಗಬೇಕು. ಆ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಜನತೆ ಇದರ ಸದುಪಯೋಗ ಪಡೆದುಕೊಳ್ಳುವಂತೆ ಕರೆ ನೀಡಿದರು.

ಶಿಬಿರದಲ್ಲಿ ಉಚಿತ ಬಿಪಿ ಶುಗರ್, ಮೂಳೆ ಸಾಂದ್ರತಾ ಪರೀಕ್ಷೆ ಹಮ್ಮಿಕೊಳ್ಳಲಾಗಿತ್ತು. 150 ರಿಂದ 200 ಮಂದಿ ಆರೋಗ್ಯ ಶಿಬಿರದ ಪ್ರಯೋಜನ ಪಡೆದುಕೊಂಡರು. ಈ ವೇಳೆ ಶ್ರೀಬಸವೇಶ್ವರ ಮೆಡಿಕಲ್ ಅಂಡ್ ಸರ್ಜಿಕಲ್ ಮಾಲೀಕರಾದ ಶ್ರುತಿ ನಾಗರಾಜು ಹಾಗೂ ಶ್ರೀ ಬಸವೇಶ್ವರ ಕ್ಲಿನಿಕ್ ಮಾಲೀಕ ರಾಜೇಶ್ ಮುಟ್ಟನಹಳ್ಳಿ, ಕಿರಗಸೂರು ಗ್ರಾಪಂ ಸದಸ್ಯ ಮಹದೇವಸ್ವಾಮಿ, ಬಸವಶ್ರೀ ಜಗದೀಶ್, ಕಾಂಗ್ರೆಸ್ ಯುವ ಮುಖಂಡರಾದ ಅರುಣ್ ಉಪಸ್ಥಿತರಿದ್ದರು.

ಎಂ.ಎಲ್.ಹುಂಡಿ ಮಠದ ಶ್ರೀಗಳಿಗೆ ಸನ್ಮಾನ



ತಿ.ನರಸೀಪುರ ತಾಲೂಕು ವೀರಶೈವ ಲಿಂಗಾಯತ ಮಹಾಸಭಾ ವತಿಯಿಂದ ಜನ್ಮ ವರ್ಧಂತಿ ಪ್ರಯುಕ್ತ ಎಂ.ಎಲ್.ಹುಂಡಿ ಮಠದ ಶ್ರೀಗಳನ್ನು ಸನ್ಮಾನಿಸಲಾಯಿತು. ಈ ವೇಳೆ ಮಹಾಸಭಾ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಖಜಾಂಚಿ ನಂಜುಂಡಸ್ವಾಮಿ, ಪ್ರಧಾನ ಕಾರ್ಯದರ್ಶಿ ಶಿವು, ಕಾರ್ಯದರ್ಶಿ ಪರಮೇಶ್ ಪಟೇಲ್, ಕೃಷಿಕ ಸಮಾಜದ ಅಧ್ಯಕ್ಷ ಶಿವಮಲ್ಲಪ್ಪ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸೋಮಶೇಖರಪ್ಪ, ಯುವ ಘಟಕದ ಅಧ್ಯಕ್ಷ ಅಶೋಕ್, ಡಿ.ಎಲ್.ಮಹದೇವಪ್ಪ, ಲೋಕೇಶ್, ವಕೀಲರಾದ ಜ್ಞಾನೇಂದ್ರಮೂರ್ತಿ, ರವಿ, ಮಹದೇವಸ್ವಾಮಿ, ಸತೀಶ್ ಇತರರಿದ್ದರು.

ಸುತ್ತೂರಲ್ಲಿ ವಿಕಸಿತ ಕೃಷಿ ಸಂಕಲ್ಪ ಅಭಿಯಾನ



ರೈತರಿಗೆ ಡ್ರೋನ್ ಬಳಸಿ ರಸಗೊಬ್ಬರ, ಕೀಟನಾಶಕ ಸಿಂಪಡಿಸುವ ವಿಧಾನವನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಲಾಯಿತು.

ನಂಜನಗೂಡು, ಜೂ.1– ತಾಲೂಕಿನ ಸುತ್ತೂರು ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದಲ್ಲಿ ಮುಂಗಾರು ಪೂರ್ವದಲ್ಲಿ ಬೆಳೆಗಳ ಭೂಮಿ ಸಿದ್ಧತೆ, ನಾಟಿ ಹಾಗೂ ಬೀಜೋಪಚಾರ, ಬೆಳೆಗಳಲ್ಲಿ ಕಂಡು ಬರುವ ಕೀಟಗಳ ನಿಯಂತ್ರಣ, ಜೈವಿಕ ಕೀಟನಾಶಕಗಳ ಕುರಿತು ರೈತರಿಗೆ ಮಾಹಿತಿ ನೀಡಲಾಯಿತು.

ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಸಿಬ್ಬಂದಿಯೊಂದಿಗೆ, ಕೃಷಿ ಅಧಿಕಾರಿಗಳು, ತೋಟಗಾರಿಕೆ ಇಲಾಖೆ ಅಧಿಕಾರಿಗಳು, ಪಶು ಪಾಲನಾ ಹಾಗೂ ವೈದ್ಯಕೀಯ ಇಲಾಖೆಯ ಅಧಿಕಾರಿಗಳು ವಿಕಸಿತ ಕೃಷಿ ಸಂಕಲ್ಪ ಅಭಿಯಾನದಲ್ಲಿ ವಿಷಯ ತಜ್ಞರುಗಳನ್ನೊಳಗೊಂಡ ಪ್ರತ್ಯೇಕ 3 ತಂಡಗಳಾಗಿ ವಿಂಗಡಿಸಿಕೊಂಡು ತಾಲೂಕಿನ ಸಿಂಧುವಳ್ಳಿ, ಕಸುವಿನಹಳ್ಳಿ, ಕುರಹಟ್ಟಿ ಗ್ರಾಮಗಳಲ್ಲಿ ರೈತರಿಗೆ ಮಾಹಿತಿ ನೀಡಲಾಯಿತು.

ವಿಶೇಷವಾಗಿ ತೆಂಗಿನ ಬೆಳೆಗಳಲ್ಲಿ ಬರುವ ಬಿಳಿ ನೊಣ, ಕಪ್ಪು ತಲೆ ಹುಳ, ಕೆಂಪು ಮೂತಿ ಹುಳಗಳ ಲಕ್ಷಣ ಹಾಗೂ ಅವುಗಳ ಜೈವಿಕ ನಿಯಂತ್ರಣದ ಕುರಿತು ರೈತರಿಗೆ ಮಾಹಿತಿ ನೀಡಲಾಯಿತು.

ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ದೊರಕುವ ಯೋಜನೆಗಳ ಕುರಿತು ಮಾಹಿತಿ ನೀಡಲಾಯಿತು. ಸಂಸ್ಥೆ ವತಿಯಿಂದ ರೈತರಿಗೆ ಡ್ರೋನ್ ಬಳಸಿ ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ಸಿಂಪಡಿಸುವುದನ್ನು ಪ್ರಾತ್ಯಕ್ಷಿಕೆ ಮೂಲಕ ತೋರಿಸಲಾಯಿತು.

ಮುಂಗಾರಿನಲ್ಲಿ ಟೋಮ್ಯಾಟೊ, ಹತ್ತಿ ಬೀನ್ಸ್, ಚೆಂಡು ಹೂ ಬೆಳೆಗಳಲ್ಲಿ ಬರುವ ರೋಗಗಳು ಹಾಗೂ ಅವುಗಳ ಜೈವಿಕ ನಿರ್ವಹಣಾ ಕ್ರಮಗಳ ಕುರಿತು ಮಾಹಿತಿ ನೀಡಲಾಯಿತು. ತಂಬಾಕು ಬೆಳೆಗೆ ಪರ್ಯಾಯವಾಗಿ ಜೋಳ, ರಾಗಿ ಹಾಗೂ ಹಿಪ್ಪುನೇರಳೆ ಬೆಳೆ ಬೆಳೆಯುವ ಕುರಿತು ರೈತರಿಗೆ ಮಾಹಿತಿ ನೀಡಲಾಯಿತು. ಸಾವಯುವ ಪದ್ಧತಿಯಲ್ಲಿ ಬೆಳೆ ಬೆಳೆಯುವ ಹಾಗೂ ಸಾವಯುವ ಕೃಷಿ ಪದ್ಧತಿ ಅಳವಡಿಸಿಕೊಂಡು ಮಣ್ಣಿನ ಆರೋಗ್ಯ ಕಾಪಾಡುವ ವಿಧಾನಗಳನ್ನು ರೈತರಿಗೆ ತಿಳಿಸಲಾಯಿತು.

ಹಿರಿಯ ವಿಜ್ಞಾನಿ ಡಾ.ಬಿ.ಎನ್.ಜ್ಞಾನೇಶ್, ಡಾ.ಶಾಮರಾಜ್, ಡಾ. ಯು.ಎಂ.ರಕ್ಷಿತ್ ರಾಜ್, ಡಾ.ದೀಪಕ್, ಡಾ.ಜಿ.ಎಂ.ವಿನಯ್, ಡಾ.ವೈ.ಪಿ.ಪ್ರಸಾದ್ ಹಾಗೂ ಕೃಷಿ, ತೋಟಗಾರಿಕೆ, ಮೀನುಗಾರಿಕೆ ಹಾಗೂ ಪಶುಪಾಲನಾ ಇಲಾಖೆ ಅಧಿಕಾರಿಗಳು, ಸಂಶೋಧನಾ ಸಂಸ್ಥೆಯ ವಿಜ್ಞಾನಿಗಳು ಉಪಸ್ಥಿತರಿದ್ದರು.

ಗುಣಾತ್ಮಕ ಶಿಕ್ಷಣಕ್ಕಾಗಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ



ಮಕ್ಕಳನ್ನು ಬರಮಾಡಿಕೊಳ್ಳಲಾಯಿತು.

ಸರಗೂರು, ಜೂ.1– ಗುಣಾತ್ಮಕ ಶಿಕ್ಷಣಕ್ಕಾಗಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸುವಂತೆ ಮುಳ್ಳೂರು ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯ ಶಿಕ್ಷಕಿ ಹೆಚ್.ಬಿ.ಜ್ಯೋತಿ ತಿಳಿಸಿದರು.

ತಾಲೂಕಿನ ಮುಳ್ಳೂರು ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರೊಂದಿಗೆ ಮಕ್ಕಳಿಗೆ ಗುಲಾಬಿ ಹೂ ನೀಡಿ, ಸಿಹಿ ಹಂಚಿ ಸಂಭ್ರಮದಿಂದ ಸ್ವಾಗತಿಸಿ ಮಾತನಾಡಿದ ಅವರು, ಪ್ರಸಕ್ತ ಸಾಲಿಗೆ ಕರ್ನಾಟಕ ಶಾಲಾ ಶಿಕ್ಷಣ ಇಲಾಖೆ ರಾಜ್ಯ ಪಠ್ಯಕ್ರಮದ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಅನ್ವಯವಾಗುವಂತಹ ವೇಳಾಪಟ್ಟಿ ಪ್ರಕಟಿಸಿದ್ದು, ಮೇ 29ರಿಂದ ಶಾಲೆಗಳು ಆರಂಭವಾಗಿದೆ. ಅಲ್ಲದೇ ಶೈಕ್ಷಣಿಕ ವರ್ಷದ ಚಟುವಟಿಕೆ ಉಚಿತ ದಾಖಲಾತಿ ಶುರುವಾಗಿದೆ ಎಂದರು.

ಗುಣಮಟ್ಟದ ಶಿಕ್ಷಣ ಪಡೆಯಲು ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕು. ಆ ಮೂಲಕ ಸರ್ಕಾರದ ಸೌಲಭ್ಯಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು. ಸರ್ಕಾರದ ಉಚಿತ ದಾಖಲಾತಿ ಬಳಸಿಕೊಂಡರೆ ಮಕ್ಕಳ ಶಿಕ್ಷಣಕ್ಕಾಗಿ ಹಣ ವ್ಯಯ ಮಾಡುವುದು ತಪ್ಪಲಿದೆ. ತಮ್ಮ ಕುಟುಂಬದ ಆರ್ಥಿಕ ಪರಿಸ್ಥಿತಿ ಸುಧಾರಿಸಲಿದೆ. ಪಿಎಂಶ್ರೀ ಸರ್ಕಾರಿ ಶಾಲೆಯಲ್ಲಿಯೂ ಎಲ್‌ಕೆಜಿಯಿಂದ ಐದನೇ ತರಗತಿವರೆಗೆ ಇಂಗ್ಲಿಷ್ ಶಿಕ್ಷಣ ಸಿಗಲಿದೆ. ನಮ್ಮಲ್ಲಿನ ಶಿಕ್ಷಕರೂ ಸಹ ಮಕ್ಕಳ ವಿದ್ಯಾರ್ಜನೆಗೆ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ ಎಂದು ತಿಳಿಸಿದರು.

ಶಾಲಾ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಶಿಕ್ಷಕರಾದ ಹೆಚ್.ಬಿ.ಜ್ಯೋತಿ, ಶಿಕ್ಷಕರಾದ ಸ್ವಾಮಿ, ಸುಕನ್ಯಾ, ರಾಜೇಶ್, ಪ್ರೇಮ, ಶೃತಿ, ಪೂಜಾ, ರೋಜ ಹಾಗೂ ಶಾಲಾ ಮಕ್ಕಳು ಉಪಸ್ಥಿತರಿದ್ದರು.

ಟೌನ್ ಟೆನ್ನಿಸ್ ಕ್ಲಬ್‌ಗೆ ಮಹೇಶ್ ಅಧ್ಯಕ್ಷ, ನಾಗೇಂದ್ರ ಉಪಾಧ್ಯಕ್ಷ



ಟೌನ್ ಟೆನ್ನಿಸ್ ಕ್ಲಬ್‌ಗೆ ಪದಾಧಿಕಾರಿಗಳು ಆಯ್ಕೆಯಾದರು.

ನಂಜನಗೂಡು, ಜೂ.1– ನಗರದ ಟೌನ್ ಟೆನ್ನಿಸ್ ಕ್ಲಬ್ ನೂತನ ಅಧ್ಯಕ್ಷರಾಗಿ ಕುರಹಟ್ಟಿ ಕೆ.ಜಿ.ಮಹೇಶ್, ಉಪಾಧ್ಯಕ್ಷರಾಗಿ ಎನ್. ನಾಗೇಂದ್ರ, ಕಾರ್ಯದರ್ಶಿಯಾಗಿ ಮಧುಸೂಧನ್ ಆಯ್ಕೆಯಾದರು.

ಭಾನುವಾರ ಟೌನ್ ಟೆನ್ನಿಸ್ ಕ್ಲಬ್ ಆವರಣದಲ್ಲಿ ನೂತನ ಆಡಳಿತ ಮಂಡಳಿ ಆಯ್ಕೆಗಾಗಿ ಚುನಾವಣೆ ನಡೆಸಲಾಯಿತು. ಅಧ್ಯಕ್ಷ ಸ್ಥಾನಕ್ಕೆ ಕುರಹಟ್ಟಿ ಕೆ.ಜಿ.ಮಹೇಶ್, ಎನ್.ಎಂ.ಮಂಜುನಾಥ್ ಸ್ಪರ್ಧಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಕೆ.ಜಿ. ಮಹೇಶ್ 102 ಮತಗಳನ್ನು ಪಡೆದು ಅಧ್ಯಕ್ಷರಾದರೆ, ಎನ್.ಎಂ.ಮಂಜುನಾಥ್ 75 ಮತ ಪಡೆದು ಸೋತರು. ಮಧುಸೂದನ್ 108 ಮತ ಪಡೆದು ಕಾರ್ಯದರ್ಶಿಯಾದರೆ, ವಿಷಕಂಠ 67 ಮತ ಪಡೆದು ಪರಾಭವಗೊಂಡರು. ಎನ್.ನಾಗೇಂದ್ರ 117 ಮತ ಪಡೆದು ಉಪಾಧ್ಯಕ್ಷರಾಗಿ ಆಯ್ಕೆಯಾದರೆ, ನಂಜುಂಡಸ್ವಾಮಿ ಬೊಮ್ಮಾಯಿ 59 ಮತಗಳನ್ನು ಪಡೆದು ಪರಾಭವಗೊಂಡರು.

ನಿರ್ದೇಶಕರಾಗಿ ಚಂದ್ರಶೇಖರ್ 122, ಎನ್.ಟಿ.ಗಿರೀಶ 120, ಹೆಚ್.ಕೆ.ಜಗದೀಶ 113, ಎಲ್.ಬಾಬು107, ನಂಜುಂಡಸ್ವಾಮಿ ಅಂಬಿ 105, ಅರುಣ್ 89, ಶ್ರೀನಿವಾಸ ರೆಡ್ಡಿ 85 ಮತಗಳನ್ನು ಪಡೆದು ಆಯ್ಕೆಯಾದರು. ಕ್ರೀಡಾ ಕಾರ್ಯದರ್ಶಿಯಾಗಿ ಎಂ.ವಿಜಯ್ ಕುಮಾರ್ ಅವಿರೋಧವಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷ ಕೆ.ಜಿ.ಮಹೇಶ್ ಮಾತನಾಡಿ, ನಂಜನಗೂಡು ರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾ ಇತಿಹಾಸ ಹೊಂದಿದ್ದು, ಟೌನ್ ಟೆನ್ನಿಸ್ ಕ್ಲಬ್‌ಗೆ 100 ವರ್ಷಗಳ ಇತಿಹಾಸವಿದೆ. ನಂಜನಗೂಡಿನ ಕ್ರೀಡಾ ಇತಿಹಾಸ ಮರುಕಳಿಸುವಂತೆ ಮಾಡಲು ಕ್ರೀಡಾಸಕ್ತರನ್ನು ಪ್ರೋತ್ಸಾಹಿಸಿ ಕ್ರೀಡಾಪಟುಗಳನ್ನು ರೂಪಿಸುವುದರೊಂದಿಗೆ, ನಂಜನಗೂಡಿನಲ್ಲಿ ಈಜುಕೊಳ ಸೌಲಭ್ಯವಿಲ್ಲದೆ ಕ್ರೀಡಾ ಪ್ರೇಮಿಗಳಿಗೆ ಮತ್ತು ಸಾರ್ವಜನಿಕರಿಗೆ ತೊಂದರೆ ಉಂಟಾಗಿದೆ. ಇದನ್ನು ನಿವಾರಿಸಲು ಶೀಘ್ರ ಈಜುಕೊಳ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು ಎಂದರು.

ಈ ವೇಳೆ ನಿಕಟಪೂರ್ವ ಅಧ್ಯಕ್ಷ ನಾಗರಾಜು, ಮುಖಂಡರಾದ ಶ್ಯಾಂ ಪಟೇಲ್, ವಿನಯ್ ಕುಮಾರ್, ಉಮೇಶ್ ಸೇರಿದಂತೆ ಇತರರು ಇದೇ ವೇಳೆ ಹಾಜರಿದ್ದರು.

ನಿವೃತ್ತ ವಾಣಿಜ್ಯ ಇಲಾಖೆ ಅಧಿಕಾರಿಗೆ ಬೀಳ್ಕೊಡುಗೆ



ವಾಣಿಜ್ಯ ತೆರಿಗೆ ಇಲಾಖೆಯಲ್ಲಿ 35 ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಎಸ್.ಸಿದ್ದಪ್ಪ ಅವರನ್ನು ನಂಜನಗೂಡು ತಾಲೂಕಿನ ದುಗ್ಗಹಳ್ಳಿ ಗ್ರಾಪಂ ಅಧ್ಯಕ್ಷ ಶಂಕರ್ ಸನ್ಮಾನಿಸಿ ಬೀಳ್ಕೊಟ್ಟರು. ಈ ವೇಳೆ ಎಂ.ಎಸ್.ಡೆವಲಪರ್ಸ್ ಎನ್.ಮಂಜು, ಜಯರಾಂ, ಮೋಹನ್, ಶಿವಪ್ರಸಾದ್, ಜೆಡಿಎಸ್ ಮುಖಂಡ ಸಂದೇಶ್, ಕಾಂಗ್ರೆಸ್ ಮುಖಂಡ ಕುಮಾರ್ ಹಾಜರಿದ್ದರು.

ಸೋಸಲೆ ನವೋದಯ ಸ್ಪೋರ್ಟ್ಸ್ ಕ್ಲಬ್‌ಗೆ ಪರಶಿವಮೂರ್ತಿ ಅಧ್ಯಕ್ಷ



ನೂತನ ಅಧ್ಯಕ್ಷ ಎಂ.ಪರಶಿವಮೂರ್ತಿ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಜೂ.1– ಕ್ರೀಡಾಪಟುಗಳಿಗೆ ಉತ್ತಮ ಅವಕಾಶಗಳನ್ನು ಕಲ್ಪಿಸಲು ಸೋಸಲೆ ನವೋದಯ ಸ್ಪೋರ್ಟ್ಸ್ ಕ್ಲಬ್ ವತಿಯಿಂದ ಹೆಚ್ಚಿನ ಕ್ರೀಡಾಕೂಟ ಆಯೋಜಿಸಲಾಗುವುದು ಎಂದು ನೂತನ ಅಧ್ಯಕ್ಷ ಎಂ.ಪರಶಿವಮೂರ್ತಿ ತಿಳಿಸಿದರು.

ಪಟ್ಟಣದ ಲೋಕೋಪಯೋಗಿ ಅತಿಥಿ ಗೃಹದಲ್ಲಿ ಭಾನುವಾರ ನಡೆದ ಸೋಸಲೆ ನವೋದಯ ಸ್ಪೋರ್ಟ್ಸ್ ಕ್ಲಬ್ ಪದಾಧಿಕಾರಿಗಳ ಸಭೆಯಲ್ಲಿ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಬಳಿಕ ಮಾತನಾಡಿದ ಅವರು, ಶಿಕ್ಷಕ ಸಮುದಾಯ ಹಾಗೂ ಕ್ರೀಡಾಪಟುಗಳು ಸ್ಥಾಪಿಸಿರುವ ಸ್ಪೋರ್ಟ್ಸ್ ಕ್ಲಬ್ ಕ್ರಿಯಾಶೀಲವಾಗಿರಲು ಆಗಾಗ ಕ್ರೀಡಾಕೂಟಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಹಲವು ದಶಕಗಳಿಂದ ನವೋದಯ ಸ್ಪೋರ್ಟ್ಸ್ ಕ್ಲಬ್‌ನಿಂದ ರಾಜ್ಯಮಟ್ಟದ ವಾರ್ಷಿಕ ಕ್ರೀಡಾಕೂಟ ಆಯೋಜಿಸಲಾಗುತ್ತಿದೆ. ಹೋಬಳಿ ಕೇಂದ್ರದಲ್ಲಿ ಕ್ರೀಡಾಂಗಣ ಕಲ್ಪಿಸಿಕೊಡಲು ನಿವೇಶನ ಮತ್ತು ಅನುದಾನ ಮಂಜೂರು ಮಾಡುವುದಾಗಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಭರವಸೆ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಸ್ಪೋರ್ಟ್ಸ್ ಕ್ಲಬ್‌ಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗುವುದು ಎಂದರು.

ಕ್ಲಬ್ ನಿಕಟಪೂರ್ವ ಅಧ್ಯಕ್ಷ ಎಂ. ಪುಟ್ಟಸ್ವಾಮಿ, ಕಾರ್ಯದರ್ಶಿ ಪಿ.ಚಂದ್ರಶೇಖರ್, ಖಜಾಂಚಿ ಎಸ್.ವಿ.ತಿರುಮಲ್ಲೇಶ್, ಸಹ ಕಾರ್ಯದರ್ಶಿ ಎಸ್. ನಾಗೇಶ್, ಸದಸ್ಯರಾದ ನಾಗರಾಜು, ಸೂರಜ್ ಪೃಥ್ವಿ, ಪಂಕಜ, ಹರೀಶ್, ಮುಖಂಡ ಎನ್.ನಿಂಗಯ್ಯ ಇತರರಿದ್ದರು.

ತಂಬಾಕು ಉತ್ಪನ್ನಗಳ ಕಡೆ ಯುವಜನತೆ ಆಕರ್ಷಣೆ

8ನೇ ಹೆಚ್ಚುವರಿ ಸತ್ರ ನ್ಯಾಯಾಧೀಶ ಗೋವಿಂದಯ್ಯ ಬೇಸರ



ವಿಶ್ವ ತಂಬಾಕು ರಹಿತ ದಿನಾಚರಣೆಯನ್ನು 8ನೇ ಹೆಚ್ಚುವರಿ ಸತ್ರ ನ್ಯಾಯಾಧೀಶ ಗೋವಿಂದಯ್ಯ ಉದ್ಘಾಟಿಸಿದರು.

ಹುಣಸೂರು, ಜೂ.1– ತಂಬಾಕು ಉತ್ಪನ್ನಗಳ ಕಡೆಗೆ ಯುವ ಸಮೂಹ ಹೆಚ್ಚು ಆಕರ್ಷಿತರಾಗುತ್ತಿರುವುದು ದುರಂತದ ಸಂಗತಿ ಎಂದು 8ನೇ ಹೆಚ್ಚುವರಿ ಸತ್ರ ನ್ಯಾಯಾಧೀಶ ಗೋವಿಂದಯ್ಯ ಬೇಸರ ವ್ಯಕ್ತಪಡಿಸಿದರು.

ತಾಲೂಕು ಕಾನೂನು ಸೇವಾ ಸಮಿತಿ, ವರ್ತಕರ ಸಂಘ, ತಾಲೂಕು ಆರೋಗ್ಯಾಧಿಕಾರಿಗಳ ಕಚೇರಿ ಮತ್ತು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಸಹಯೋಗದಲ್ಲಿ ತರಬೇತಿ ಸಂಸ್ಥೆಯ ಆವರಣದಲ್ಲಿ ಆಯೋಜಿಸಿದ್ದ ವಿಶ್ವ ತಂಬಾಕು ರಹಿತ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಮತ್ತು ಯುವಕರು ತಂಬಾಕನ್ನು ಪ್ರಾರಂಭದಲ್ಲಿ ಕುತೂಹಲದಿಂದ ಸೇದಲು ಆರಂಭಿಸುತ್ತಾರೆ. ಆರಂಭಿಸುವಾಗ ಇರುವ ಸಂತೋಷ ಕೆಲ ದಿನಗಳಲ್ಲಿ ಮಾಯವಾಗಿ ಜಾಡ್ಯವಾಗಿ ಪರಿವರ್ತನೆಯಾಗಲಿದೆ. ಅದನ್ನು ಅರಿಯುವ ವೇಳೆಗೆ ಎಲ್ಲವೂ ಮೀರಿ ಹೋಗಿರುತ್ತದೆ ಎಂದರು.

ಹುಣಸೂರು ಉಪವಿಭಾಗ ವ್ಯಾಪ್ತಿಯಲ್ಲಿ ತಂಬಾಕು ಕೃಷಿ ಪ್ರಧಾನ ವಾಣಿಜ್ಯ ಬೆಳೆಯಾಗಿದೆ. ಹಾಗೆಂದ ಮಾತ್ರಕ್ಕೆ ಅದನ್ನು ಬಳಕೆ ಮಾಡಬೇಕೆಂದಿಲ್ಲ. ವಾಣಿಜ್ಯ ಬೆಳೆಯಾಗಿ ರೈತರು ತಮ್ಮ ಬದುಕು ಕಂಡುಕೊಂಡಿದ್ದಾರೆ. ಆದರೆ ದೇಶದ ಭವಿಷ್ಯದ ಪ್ರಜೆಗಳಾದ ವಿದ್ಯಾರ್ಥಿಗಳು ದುಶ್ಚಟಕ್ಕೆ ಸಿಲುಕಬಾರದು ಎಂದು ಸಲಹೆ ನೀಡಿದರು.

ಕಾನೂನು ಸೇವೆ ಲಭ್ಯ: ಸಮಾಜದಲ್ಲಿ ಶೋಷಿತರಾಗಿ ಆರ್ಥಿಕವಾಗಿ ದುರ್ಬಲರಾಗಿರುವ ಅಸಹಾಯಕರಿಗಾಗಿ ನ್ಯಾಯಾಲಯದಲ್ಲಿ ಕಾನೂನು ಸೇವಾ ಸಮಿತಿ ಮೂಲಕ ಕಾನೂನು ಸೇವೆಯನ್ನು ಉಚಿತವಾಗಿ ನೀಡಲಾಗುತ್ತಿದೆ. ಸಿವಿಲ್ ವ್ಯಾಜ್ಯ, ಅಪಘಾತ, ಕೌಟುಂಬಿಕ ಕಲಹ ಮುಂತಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಬಡಜನರಿಗೆ ಉಚಿತ ಸೇವೆ ನೀಡಿ ನ್ಯಾಯ ಒದಗಿಸಲಾಗುತ್ತಿದೆ. ಈ ಬಗ್ಗೆ ವಿದ್ಯಾರ್ಥಿಗಳು ಗ್ರಾಮೀಣ ಬಡಜನತೆಗೆ ಅರಿವು ಮೂಡಿಸಬೇಕು ಎಂದರು.

ಸಂಚಾರಿ ಗಿರಿಜನ ವೈದ್ಯಾಧಿಕಾರಿ ಡಾ. ಸೌಮ್ಯಶ್ರೀ ಮಾತನಾಡಿ, ಸಿನಿಮಾ ಹೀರೋಗಳು ಸಿಗರೇಟ್ ಸೇದುವ ಸ್ಟೈಲ್‌ಗೆ ಯುವ ಜನರು ಮರುಳಾಗಿ ನಿಮ್ಮ ಬಾಳಿನಲ್ಲೂ ಹೀರೋಯಿಸಂ ಕನಸು ಕಾಣುವುದನ್ನು ಬಿಡಿ. ಧೂಮಪಾನ ಮತ್ತು ಗುಟ್ಕಾ ಸೇವನೆ ಕ್ಯಾನ್ಸರ್ ಕಾಯಿಲೆಗೆ ಮೂಲವಾಗಿದೆ. ಕ್ಯಾನ್ಸರ್ ದೇವರು ಕೊಟ್ಟ ಕಾಯಿಲೆಯಲ್ಲ. ಬದಲಾಗಿ ನಮ್ಮ ಹಣದಿಂದ ತಂಬಾಕು ಖರೀದಿಸಿ ಸೇವನೆ ಮಾಡುವ ಚಟದಿಂದ ತರಿಸಿಕೊಂಡ ಹೆಮ್ಮಾರಿ ಎನ್ನುವುದನ್ನು ಅರಿಯಿರಿ ಎಂದು ಕಿವಿಮಾತು ಹೇಳಿದರು.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶೆ ನಮ್ರತಾ ಎಸ್.ಹೊಸಮಠ ಮಾತನಾಡಿದರು. ಅಧ್ಯಕ್ಷತೆಯನ್ನು ಐಟಿಐ ಪ್ರಾಂಶುಪಾಲ ಟಿ.ಪಿ.ನವೀನ್ ವಹಿಸಿದ್ದರು. ತಾಲೂಕು ಆರೋಗ್ಯಾಧಿಕಾರಿ ರಾಜೇಶ್ವರಿ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಪುಟ್ಟಸ್ವಾಮಿ ಉಪಸ್ಥಿತರಿದ್ದರು.

ಹಾಡಹಗಲೇ ಚಿರತೆ ದಾಳಿಗೆ ಕುರಿ ಬಲಿ



ಚಿರತೆ ದಾಳಿಗೆ ಕುರಿ ಬಲಿಯಾಗಿರುವುದು

ಹನಗೋಡು, ಜೂ.1– ನಾಗರಹೊಳೆ ಉದ್ಯಾನದಂಚಿನ ಗ್ರಾಮಗಳಲ್ಲಿ ವನ್ಯಜೀವಿಗಳ ಉಪಟಳ ದಿನೇ ದಿನೇ ಹೆಚ್ಚುತ್ತಿದ್ದು, ಹಾಡಹಗಲೇ ಚಿರತೆ ದಾಳಿ ನಡೆಸಿ ಕುರಿ ಕೊಂದು ಹಾಕಿರುವ ಘಟನೆ ತಾಲೂಕಿನ ದಾಸನಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಹರೀಶ್ ಅವರಿಗೆ ಸೇರಿದ ಕುರಿ ಸಾವನ್ನಪ್ಪಿರುವುದು. ಹರೀಶ್ ತಮ್ಮ ಜಮೀನಿನ ಬದುವಿನಲ್ಲಿ ಕುರಿ ಮೇಯಲು ಕಟ್ಟಿಹಾಕಿ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಪಕ್ಕದ ಮುನೇಶ್ವರ ತೋಪಿನ ಕಡೆಯಿಂದ ಬಂದ ಚಿರತೆ ಕುರಿ ಮೇಲೆ ದಾಳಿ ನಡೆಸಿ ಕೊಂದು ಹಾಕಿದೆ. ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಹರೀಶ್ ಹಾಗೂ ಕೆಲಸಗಾರರು ಕೂಗಿಕೊಂಡ ವೇಳೆ ಚಿರತೆ ಕುರಿ ಬಿಟ್ಟು ಮುನೇಶ್ವರ ತೋಪಿನತ್ತ ಓಡಿ ಹೋಗಿದೆ. ದಾಸನಪುರ ಗ್ರಾಮ ಉದ್ಯಾನವನದಂಚಿನಲ್ಲೇ ಇದ್ದು ಹಾಡಹಗಲೇ ಚಿರತೆ ದಾಳಿ ನಡೆಸಿ ಮೇಕೆಯನ್ನು ಕೊಂದು ಹಾಕಿರುವುದರಿಂದ ಹಾಡಿ ಜನ ಭಯಭೀತರಾಗಿದ್ದಾರೆ. ವಿಷಯ ತಿಳಿದ ಅರಣ್ಯ ಇಲಾಖೆ ಸಿಬ್ಬಂದಿ ಧಾವಿಸಿ ಮಹಜರ್ ನಡೆಸಿದ್ದಾರೆ. ಮತ್ತೆ ಚಿರತೆ ಕಾಣಿಸಿಕೊಂಡಲ್ಲಿ ಮಾಹಿತಿ ನೀಡಿ ಬೋನ್ ಇರಿಸಿ ಚಿರತೆ ಸೆರೆಗೆ ಕ್ರಮ ವಹಿಸಲಾಗುವುದೆಂದು ತಿಳಿಸಿದ್ದಾರೆ.

ಶಿವಮ್ಮ ನಿಧನ



ಸರಗೂರು, ಜೂ.1– ತಾಲೂಕಿನ ಹಂಚೀಪುರ ಗ್ರಾಮದ ವೀರಶೈವ ಸಮಾಜದ ಗೌಡಿಕೆ ಪುಟ್ಟಣ್ಣ ಅವರ ತಾಯಿ ಶಿವಮ್ಮ(90) ಭಾನುವಾರ ಬೆಳಗ್ಗೆ ನಿಧನರಾದರು.

ಮೃತರು ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಹಿರಿಯ ನಾಗರೀಕರು ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು

ಕರ್ನಾಟಕ ಕಾವೇರಿ ನೀರಾವರಿ ನಿಗಮದ ನಿವೃತ್ತ ಎಂಡಿ ಟಿ.ತಿಮ್ಮೇಗೌಡ ಸಲಹೆ

ಮೈಸೂರು, ಜೂ.1(ಎಂಟಿವೈ)– ಹಿರಿಯ ನಾಗರೀಕರು ಆರೋಗ್ಯದ ಕಡೆ ಹೆಚ್ಚು ಗಮನ ಹರಿಸಬೇಕು ಎಂದು ಕರ್ನಾಟಕ ಕಾವೇರಿ ನೀರಾವರಿ ನಿಗಮದ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಟಿ.ತಿಮ್ಮೇಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಸರಸ್ವತಿ ಸಮುದಾಯ ಭವನದಲ್ಲಿ ಹಿರಿಯ ನಾಗರಿಕರ ಮಂಡಳಿ ಹಾಗೂ ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಮತ್ತು ಕೃಷಿಕ್ ಸರ್ವೋದಯ ಫೌಂಡೇಶನ್ ವತಿಯಿಂದ 'ಹಿರಿಯ ನಾಗರಿಕ ವಿಶ್ವಸ್ಥ ಟ್ರಸ್ಟ್ ಛೇರ್ಮನ್, ಸಮಾಜ ಮುಖಿ ಎಸ್.ವಿ.ಗೌಡಪ್ಪ ಅವರ 93ನೇ ಹುಟ್ಟು ಹಬ್ಬ ಹಾಗೂ ಎಸ್.ವಿ. ಗೌಡಪ್ಪ ಪುರಸ್ಕಾರ ಸಮಾರಂಭ' ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ನಗರ ಹಿರಿಯರ ಸ್ವರ್ಗ ಎಂಬ ಮಾತಿದ್ದು, ಅದಕ್ಕೆ ತಕ್ಕಂತೆ ಮೈಸೂರಲ್ಲಿ ಹಿರಿಯ ನಾಗರೀಕರು ಜೀವನ ಸಾಗಿಸುತ್ತಿದ್ದಾರೆ. ಆದರೂ ಹಿರಿಯ ನಾಗರೀಕರು ತಮ್ಮ ಆರೋಗ್ಯ ಕಡೆ ಹೆಚ್ಚಿನ ಗಮನ ಹರಿಸಬೇಕು. ಆರ್ಥಿಕ ಶಿಸ್ತು ಕಾಪಾಡಿಕೊಂಡರೆ ಬೇರೊಬ್ಬರ ಮೇಲೆ ಅವಲಂಭಿತರಾಗುವುದು ತಪ್ಪುತ್ತದೆ. ಮೈಸೂರಲ್ಲಿ ಹಿರಿಯ ನಾಗರೀಕರ ಕೇಂದ್ರ ಕಾರ್ಯನಿರ್ವಹಿಸುತ್ತಿರುವುದು ಶ್ಲಾಘನೀಯ. ಈ ಕೇಂದ್ರವೂ ಹಿರಿಯ ನಾಗರೀಕ ಹಿತಕಾಯಲು ಇನ್ನಷ್ಟು ಚಟುವಟಿಕೆಗಳು ಮುಂದುವರೆಸಬೇಕು ಅಲ್ಲದೆ, ಸೂಕ್ತವಾದ ಜೀವ ವಿಮೆ ಸೌಲಭ್ಯ ಪಡೆದುಕೊಳ್ಳಲು ಮುಂದಾಗಬೇಕು. ಎಸ್.ವಿ. ಗೌಡಪ್ಪ ಅವರು ಇದುವರೆಗೂ ಹಲವಾರು ಉತ್ತಮ ಕೆಲಸ ಮಾಡಿದ್ದು, 93 ವರ್ಷಗಳ ಸಾರ್ಥಕ ಜೀವನ ಸಾಗಿಸುತ್ತಿದ್ದಾರೆ. ಅವರು ಶತಾಯುಷಿಗಳಾಗಲಿ ಎಂದು ಆಶಿಸುತ್ತೇನೆ ಎಂದರು. ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯು ವಿಶ್ರಾಂತ ಕುಲಪತಿ ಡಾ.ಎನ್.ಎಸ್ ರಾಮೇಗೌಡ ಮಾತನಾಡಿ, ಮನುಷ್ಯ ಹೆಚ್ಚು ಕಾಲ ಬದುಕಲು ಅವರ ಮನಸ್ಸಿನ ಭಾವನೆ, ಅವರ ನಡೆ, ನುಡಿ ಇವು ಮೂರು ಯಾರಲ್ಲಿ ಹೊಂದಾಣಿಕೆಯಲ್ಲಿದೆಯೋ ಅಂತಹವರು ಹೆಚ್ಚಿನ ವರ್ಷ ಬದುಕಲು ಸಾಧ್ಯ. ಅದಕ್ಕೆ ಎಸ್.ವಿ.ಗೌಡಪ್ಪ ಅವರು ಹೊರತಾಗಿಲ್ಲ. ಅವರು ಸಾರ್ಥಕ ಜೀವನವನ್ನು ನಡೆಸಿ, ಎಲ್ಲರಿಗೂ ಮಾದರಿಯಾಗಿದ್ದಾರೆ.

ಇದೇ ವೇಳೆ ಎಸ್.ವಿ.ಗೌಡಪ್ಪ ಪುರಸ್ಕಾರವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸೂಪರಿಂಟೆಂಡೆಂಟ್ ಇಂಜಿನಿಯರ್ ಬಿ.ಟಿ ಶ್ರೀಧರ್, ಪಿರಿಯಾಪಟ್ಟಣದ ಪಿ.ಬಸವನಹಳ್ಳಿ ಪ್ರಗತಿಪರ ರೈತ ಬಿ.ಎ. ಪ್ರಕಾಶ್ ಅವರಿಗೆ ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರ ಮಂಡಳಿ ಅಧ್ಯಕ್ಷ ಡಾ.ಹೆಚ್.ಎಂ. ನಾಗರಾಜು, ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಛೇರ್ಮನ್ ಎಸ್.ವಿ.ಗೌಡಪ್ಪ ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಕಾರ್ಯದರ್ಶಿಗಳಾದ ಡಾ.ಎನ್.ಕೆ. ರಾಮಚಂದ್ರೇಗೌಡ, ಕೆ.ಎಸ್.ಕೃಷ್ಣ ಕೃಷಿಕ್ ಸರ್ವೋದಯ ಫೌಂಡೇಶನ್ ಕಾರ್ಯದರ್ಶಿ ಹೆಚ್.ಕಿಶೋರ್ ಚಂದ್ರ ಉಪಸ್ಥಿತರಿದ್ದರು.



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಸರಸ್ವತಿ ಸಮುದಾಯ ಭವನದಲ್ಲಿ ಹಿರಿಯ ನಾಗರಿಕರ ಮಂಡಳಿ ಹಾಗೂ ಹಿರಿಯ ನಾಗರಿಕರ ವಿಶ್ವಸ್ಥ ಮಂಡಳಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಎಸ್.ವಿ.ಗೌಡಪ್ಪ ಪುರಸ್ಕಾರವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಸುಪರಿಂಟೆಂಡೆಂಟ್ ಇಂಜಿನಿಯರ್ ಬಿ.ಟಿ ಶ್ರೀಧರ್ ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಜೆನೆಟಿಕ್ಸ್ ವಿಭಾಗದ ನಿರ್ದೇಶಕರಾದ ಡಾ.ಸುತ್ತೂರು ಮಾಲಿನಿ ದಂಪತಿಯನ್ನು ಸನ್ಮಾನಿಸಲಾಯಿತು.

ಮೊಬೈಲ್, ಕಂಪ್ಯೂಟರ್ ಅತೀ ಬಳಕೆಯಿಂದ ಮಾನಸಿಕ ಅನಾರೋಗ್ಯ

ಪ್ರಾಂಶುಪಾಲೆ ಪ್ರೊ.ಪ್ರತಿಭಾ ಪಾರ್ಶ್ವನಾಥ್ ಆತಂಕ



'ಡಿಜಿಟಲ್ ಜಗತ್ತಿನಲ್ಲಿ ಮಕ್ಕಳು ಮತ್ತು ಯುವಕರ ಜೀವನ ಕೌಶಲ ಹಾಗೂ ಯೋಗಕ್ಷೇಮ' ಕುರಿತ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನದ ಸಮಾರೋಪದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಪ್ರೊ.ಪ್ರತಿಭಾ ಪಾರ್ಶ್ವನಾಥ್ ಮಾತನಾಡಿದರು. ಮುಕ್ತ ವಿವಿ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮತ್ತಿತರರಿದ್ದರು.

ಮೈಸೂರು, ಜೂ.1(ಎಂಕೆ)– ಡಿಜಿಟಲ್ ಜಗತ್ತಿನಲ್ಲಿ ಅತೀಯಾದ ಮೊಬೈಲ್ ಬಳಕೆ ಹಾಗೂ ಕಂಪ್ಯೂಟರ್ ಮುಂದೆಯೇ ಹೆಚ್ಚಿನ ಸಮಯ ಕಳೆಯುವುದರಿಂದ ದೈಹಿಕ ಮತ್ತು ಮಾನಸಿಕ ಕಾಯಿಲೆಗಳಿಗೆ ತುತ್ತಾಗುವವರ ಸಂಖ್ಯೆ ಹೆಚ್ಚಾಗುತ್ತಿದೆ ಎಂದು ಬೆಂಗಳೂರು ಕೆ.ಆರ್.ಪುರಂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲರಾದ ಪ್ರೊ.ಪ್ರತಿಭಾ ಪಾರ್ಶ್ವನಾಥ್ ಆತಂಕ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕಾವೇರಿ ಸಭಾಂಗಣದಲ್ಲಿ ಆಯೋಜಿಸಿದ್ದ 'ಡಿಜಿಟಲ್ ಜಗತ್ತಿನಲ್ಲಿ ಮಕ್ಕಳು ಮತ್ತು ಯುವಕರ ಜೀವನ ಕೌಶಲ್ಯ ಹಾಗೂ ಯೋಗಕ್ಷೇಮ' ಕುರಿತ ಎರಡು ದಿನಗಳ ಅಂತಾರಾಷ್ಟ್ರೀಯ ಸಮ್ಮೇಳನದ ಸಮಾರೋಪ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮೊಬೈಲ್ ವಿದ್ಯಾರ್ಥಿಗಳಲ್ಲಿರುವ ಕೌಶಲತೆಗಳನ್ನೇ ಕಿತ್ತುಕೊಳ್ಳುತ್ತಿದೆ ಎಂದರು. ಹಿಂದಿನ ಶಿಕ್ಷಣ ಪದ್ಧತಿಯಲ್ಲಿ ಪುರುಷರಿಗೆ 74, ಮಹಿಳೆಯರಿಗೆ 64 ಬಗೆಯ ವಿದ್ಯೆಗಳನ್ನು ಪ್ರಾಯೋಗಿಕವಾಗಿ ಕಲಿಸಲಾಗುತ್ತಿತ್ತು. ಆದರೆ, ಇಂದು ಎಲ್ಲವನ್ನು ಡಿಜಿಟಲ್ ಮೂಲಕವೇ ಕಲಿಸಲಾಗುತ್ತಿದೆ. ಮೊಬೈಲ್ ಬಿಟ್ಟರೆ, ಕಂಪ್ಯೂಟರ್‌ನ ಬಳಕೆಯಿಂದ ವಿದ್ಯಾರ್ಥಿಗಳು ತಮ್ಮಲ್ಲಿರುವ ಕೌಶಲತೆಗಳನ್ನು ಮರೆಯುತ್ತಿದ್ದಾರೆ. ಕಂಪ್ಯೂಟರ್ ಮುಂದೆಯೇ ಕುಳಿತು ದೈಹಿಕ ಮತ್ತು ಮಾನಸಿಕ ಅನಾರೋಗ್ಯಕ್ಕೂ ತುತ್ತಾಗುತ್ತಿದ್ದಾರೆ ಎಂದು ಹೇಳಿದರು.

ಮಕ್ಕಳ ಬೆಳೆಸುವಲ್ಲಿ ಪೋಷಕರು, ಶಿಕ್ಷಕರು ಬಹಳ ಎಚ್ಚರಿಕೆ ವಹಿಸಬೇಕು. ಪೋಷಕರು ತಮ್ಮ ಮಕ್ಕಳಿಗಾಗಿ ಸಮಯ ಕೊಡದಿದ್ದರೆ, ನಿಮ್ಮ ಮಕ್ಕಳು ಮೊಬೈಲ್ ಚಟಕ್ಕೆ ಬಲಿಯಾಗುವುದು ಖಂಡಿತ. ಆನ್‌ಲೈನ್‌ನಲ್ಲಿಯೇ ಎಲ್ಲವೂ ಸಿಗುವುದರಿಂದ ಕಲಿಯುವ ಆಸಕ್ತಿ, ಉತ್ಸಾಹ ಕುಂದುತ್ತಿದೆ. ಡಿಜಿಟಲ್ ಲೈಫ್ ಅನುಕೂಲತೆಗಳಷ್ಟೇ ಅನಾನುಕೂಲಗಳನ್ನು ಹೊಂದಿದ್ದು, ಬಳಕೆಯಲ್ಲಿ ಎಚ್ಚರಿಕೆ, ನಿಯಮಿತವಿರಬೇಕು ಎಂದು ತಿಳಿ ಹೇಳಿದರು.

ಆತ್ಮಹತ್ಯೆ ಮನಸ್ಥಿತಿ!: ಮೊಬೈಲ್ ಗೀಳಿನಿಂದ ಮಾನಸಿಕವಾಗೂ ಕುಗ್ಗುತ್ತಿರುವ ಮಕ್ಕಳಲ್ಲಿ ಸವಾಲುಗಳನ್ನು ಎದುರಿಸುವಂತಹ ಮನಸ್ಥಿತಿಯೇ ಇಲ್ಲದಂತಾಗಿದೆ. ಮೊದಲೆಲ್ಲಾ ಕಡಿಮೆ ಅಂಕಗಳು ಬಂದರೆ, ಮತ್ತೊಮ್ಮೆ ಬರೆದರಾಯಿತು. ಈ ಕೆಲಸ ಇಲ್ಲವಾದರೆ ಮತ್ತೊಂದು ಕೆಲಸ ಎನ್ನುವ ಆತ್ಮವಿಶ್ವಾಸವಿತ್ತು. ಆದರೆ, ಈಗ ಒಂದೆರಡು ಅಂಕ ಕಡಿಮೆ ಬಂದರೂ ಆತ್ಮಹತ್ಯೆ ಮಾಡುಕೊಳ್ಳುವ ಮನಸ್ಥಿತಿಗೆ ವಿದ್ಯಾರ್ಥಿಗಳು ಬಂದಿದ್ದಾರೆ ಎಂದು ವಿಷಾದಿಸಿದರು.

ಕೌಶಲ ಕಾರ್ಯಕ್ರಮಗಳು ಅಗತ್ಯ: ಮೊಬೈಲ್‌ನಿಂದ ಮಂಕಾಗುತ್ತಿರುವ ಮಕ್ಕಳಲ್ಲಿ ನವಚೈತನ್ಯ ತುಂಬ ಬೇಕಾದರೆ ಕೌಶಲತೆ ಕಾರ್ಯಕ್ರಮಗಳು, ಚಟುವಟಿಕೆಗಳು ಹೆಚ್ಚಾಗಬೇಕು. ಅತಿಯಾದ ಮೊಬೈಲ್ ಹಾಗೂ ಕಂಪ್ಯೂಟರ್ ಬಳಕೆಯಿಂದಾಗುವ ತೊಂದರೆಗಳ ಬಗ್ಗೆ ತಿಳಿಹೇಳಬೇಕು. ಎಲ್ಲವೂ ನಿಯಮಿತವಾಗಿದ್ದರೆ ಮಾತ್ರವೇ ಉತ್ತಮ ನಾಗರಿಕ ಸಮಾಜ ನೋಡಲು ಸಾಧ್ಯ ಎಂದು ತಿಳಿಸಿದರು. ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ, ಡೀನ್‌ಗಳಾದ ಪ್ರೊ.ರಾಮನಾಥಂ ನಾಯ್ಡು, ಪ್ರೊ.ಎನ್.ಲಕ್ಷ್ಮಿ ಉಪಸ್ಥಿತರಿದ್ದರು.

ಪಾಲಿಕೆ ಅಧಿಕಾರಿಗಳಿಂದ ಕೆ.ಆರ್.ಆಸ್ಪತ್ರೆ ಕ್ಯಾಂಟಿನ್ ಪರಿಶೀಲನೆ



ಕೆ.ಆರ್.ಆಸ್ಪತ್ರೆ ಕ್ಯಾಂಟಿನ್‌ಗೆ ಶುಕ್ರವಾರ ಭೇಟಿ ನೀಡಿದ ಪಾಲಿಕೆ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಮೈಸೂರು, ಜೂ.1(ಎಂಕೆ)– ಮೈಸೂರಿನ ಕೆಆರ್.ಆಸ್ಪತ್ರೆ ಹಿಂಭಾಗದಲ್ಲಿರುವ ಕ್ಯಾಂಟಿನ್‌ಗೆ ದಿಢೀರ್ ಭೇಟಿ ನೀಡಿದ ನಗರಪಾಲಿಕೆ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಹಳೇ ಜಯದೇವ ಬ್ಲಾಕ್ ಹಿಂಭಾಗದಲ್ಲಿರುವ ಕೃಷ್ಣ ರಾಜೇಂದ್ರ ಉಪಾಹಾರ ಗೃಹ(ಕ್ಯಾಂಟಿನ್)ಕ್ಕೆ ಭೇಟಿ ನೀಡಿದ ನಗರಪಾಲಿಕೆ ಪರಿಸರ ಇಂಜಿನಿಯರ್ ಎಸ್.ಮೈತ್ರಿ, ಹೆಲ್ತ್ ಇನ್‌ಸ್ಪೆಕ್ಟರ್ ಕೃಷ್ಣ ಸೇರಿದಂತೆ ಇತರೆ ಸಿಬ್ಬಂದಿ ಪರಿಶೀಲನೆ ನಡೆಸಿದರು.

ಆಸ್ಪತ್ರೆಗೆ ಅಪಾರ ಸಂಖ್ಯೆಯಲ್ಲಿ ರೋಗಿಗಳು, ಅವರ ಸಂಬಂಧಿಗಳು ಬರಲಿದ್ದು, ಅವರಲ್ಲಿ ಬಹುತೇಕ ಮಂದಿ ಈ ಕ್ಯಾಂಟಿನ್‌ಗೆ ಬರುತ್ತಾರೆ. ಹಾಗಾಗಿ ಗುಣಮಟ್ಟದ ಆಹಾರ ಪೂರೈಕೆ, ಸ್ವಚ್ಛತೆ ಜೊತೆಗೆ ಪ್ಲಾಸ್ಟಿಕ್ ಬಳಕೆ ಮಾಡುತ್ತಿದ್ದಾರೆಯೇ ಎಂದು ಪರಿಶೀಲನೆ ನಡೆಸಿದ್ದೇವೆ ಎಂದು ನಗರಪಾಲಿಕೆ ಪರಿಸರ ಇಂಜಿನಿಯರ್ ಮೈತ್ರಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರತಿನಿತ್ಯ ಪಾಲಿಕೆ ಒಂದಲ್ಲ ಒಂದು ಕಡೆ ಪರಿಶೀಲನೆ ನಡೆಸುತ್ತಿದೆ. ಅದರಂತೆ ಆಸ್ಪತ್ರೆ ಕ್ಯಾಂಟಿನ್‌ನಲ್ಲಿ ಸ್ವಚ್ಛತೆ ಇಲ್ಲ. ಆಹಾರದ ಗುಣಮಟ್ಟ ಸರಿಯಾಗಿಲ್ಲ ಎಂಬ ದೂರುಗಳು ಕೇಳಿ ಬಂದಿದ್ದವು. ಈ ಹಿನ್ನಲೆಯಲ್ಲಿ ಭೇಟಿ ನೀಡಿದ್ದು, ಶುಚಿತ್ವ, ಗುಣಮಟ್ಟ ಕಾಪಾಡುವ ಜೊತೆಗೆ ಪ್ಲಾಸ್ಟಿಕ್ ವಸ್ತುಗಳನ್ನು ಬಳಸದಂತೆ ಎಚ್ಚರಿಕೆ ನೀಡಿದ್ದೇವೆ ಎಂದರು.

ವಿದ್ಯಾರ್ಥಿಗಳು ಸರ್ಕಾರದ ಸವಲತ್ತು ಸದುಪಯೋಗಪಡಿಸಿಕೊಂಡು ಸಾಧನೆ ಮಾಡಬೇಕು

ಮೈಸೂರು,ಜೂ.1(ಎಂಟಿವೈ)– ಸರ್ಕಾರ ವಿದ್ಯಾರ್ಥಿಗಳಿಗಾಗಿ ಪ್ರತಿವರ್ಷ ಕೋಟ್ಯಾಂತರ ರೂ. ಖರ್ಚು ಮಾಡುತ್ತಿದ್ದು, ಸರ್ಕಾರದ ಸವಲತ್ತುಗಳನ್ನು ಸದುಪಯೋಗ ಪಡಿಸಿಕೊಂಡು ಚೆನ್ನಾಗಿ ಓದಿ, ಗುರಿ ಇಟ್ಟುಕೊಂಡು ಸಾಧನೆ ಮಾಡಿ. ಜೀವನವನ್ನು ರೂಪಿಸಿಕೊಳ್ಳಬೇಕು ಎಂದು ನಿಲಯಪಾಲಕರಾದ ಡಿ. ಮೀನಾ ಹೇಳಿದರು.



ನಿಲಯದ ವಾರ್ಷಿಕೋತ್ಸವದ ಉದ್ಘಾಟನಾ ಸಮಾರಂಭ

ಮೈಸೂರಿನ ಬೋಗಾದಿಯಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಡಿ. ದೇವರಾಜ ಅರಸು ಮೆಟ್ರಿಕ್ ನಂತರದ ವೈದ್ಯಕೀಯ ಮತ್ತು ತಾಂತ್ರಿಕ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ ನಡೆದ ನಿಲಯದ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುವುದರೊಂದಿಗೆ ರಾಜ್ಯದಲ್ಲಿ ಹೊಸದಾಗಿ 150 ಹಾಸ್ಟೆಲ್ ಮಂಜೂರು ಮಾಡಿದ್ದಾರೆ. ಇದರಲ್ಲಿ ಮೈಸೂರು ಜಿಲ್ಲೆಗೆ 14 ಹೊಸ ಹಾಸ್ಟೆಲ್‌ಗಳನ್ನು ಮಂಜೂರು ಮಾಡಿರುವುದರಿಂದ ಪ್ರತಿಯೊಬ್ಬ ವಿದ್ಯಾರ್ಥಿಗೂ ಹಾಸ್ಟೆಲ್ ಸೌಲಭ್ಯ ಸಿಗುವಂತಾಗಿದೆ. ನಿಮ್ಮ ತಂದೆ, ತಾಯಿಯರು ಸಹ ದೂರದ ಊರುಗಳಿಂದ ನಿಮ್ಮನ್ನು ಓದಲು ಮೈಸೂರಿಗೆ ಕಳಿಸಿದ್ದಾರೆ. ಸಾಮಾನ್ಯವಾಗಿ ಬಿಸಿಎಂ ಹಾಸ್ಟೆಲ್‌ನಲ್ಲಿರುವವರೆಲ್ಲಾ ರೈತರು, ಬಡವರ ಮಕ್ಕಳೇ ಆಗಿರುವುದರಿಂದ ತಂದೆ, ತಾಯಿಯರ ಕಷ್ಟಗಳನ್ನು ನೆನೆದುಕೊಂಡು ಮೊಬೈಲ್‌ನಿಂದ ದೂರವಿದ್ದು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಂಡು ಸರ್ಕಾರದ ಉನ್ನತ ಹುದ್ದೆಗಳನ್ನು ಅಲಂಕರಿಸುವುದರೊಂದಿಗೆ ತಂದೆ, ತಾಯಿಗೆ ಹಾಸ್ಟೆಲ್‌ಗೆ ಒಳ್ಳೆಯ ಹೆಸರು ತರಬೇಕು ಎಂದರು. ಇದೇ ಸಂದರ್ಭದಲ್ಲಿ ಇಂಜಿನಿಯರಿಂಗ್‌ನಲ್ಲಿ ಹೆಚ್ಚು ಅಂಕ ಪಡೆದು ಖಾಸಗಿ ಕಂಪೆನಿಯಲ್ಲಿ ಕೆಲಸ ಮಾಡುತ್ತಿರುವ ಮಧುರಾ ಅವರನ್ನು ಅಭಿನಂದಿಸಲಾಯಿತು. ಹಿರಿಯ ವಿದ್ಯಾರ್ಥಿನಿಯರು ಕುಡಿಯುವ ನೀರಿನ ಫಿಲ್ಟರ್ ಅನ್ನು ಹಾಸ್ಟೆಲ್‌ಗೆ ನೀಡಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿನಿಯರಾದ ಸ್ವಾತಿ, ಅಮೃತ, ಉಪಸ್ಥಿತರಿದ್ದರು. ಭೂಮಿಕ, ಸುಶ್ಮಿತ, ನಾಗಾಶ್ರಯ, ಕೀರ್ತನ, ಹರ್ಷಿತ, ಸ್ಪಂದನಾ ಉಪಸ್ಥಿತರಿದ್ದರು.

ಬೀಳ್ಕೊಡುಗೆ



ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಹೂಟಗಳ್ಳಿ ವಿಭಾಗದಲ್ಲಿ ಹಿರಿಯ ಸಹಾಯಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಕೆ.ರುದ್ರಪ್ಪ ಮತ್ತು ಅವರ ಪತ್ನಿಯವರನ್ನು ಕೆಪಿಟಿಸಿಎಲ್ ಸಿಬ್ಬಂದಿ ಸನ್ಮಾನಿಸಿ ಬೀಳ್ಕೊಟ್ಟರು.

ಭಾಷೆಯನ್ನು ಭಾಷೆಯಾಗಿಯೇ ನೋಡಿದರೆ ಕಮಲ್ ಹಾಸನ್ ಹೇಳಿಕೆ ವಿವಾದವೇ ಆಗದು



ಮೈಸೂರು ಕಲಾಮಂದಿರದ ಕಿರುರಂಗಮಂದಿರದಲ್ಲಿ ಬಹುಭಾಷಾ ನಟ ಕಿಶೋರ್ ಕುಮಾರ್, ರಂಗನಟಿ ಸಿರಿ ಅಭಿನಯದ 'ಲವ್ ಲೆಟರ್ಸ್ (ನಿನ್ನ ಪ್ರೀತಿಯ ನಾನು)' ನಾಟಕ ಪ್ರದರ್ಶನಗೊಂಡಿತು.

ಮೈಸೂರು, ಜೂ.1(ಎಂಕೆ)– ಕಮಲ್ ಹಾಸನ್ ಅವರ ಹೇಳಿಕೆಯನ್ನು ಭಾವುಕವಾಗಿ ನೋಡುವ ಅಗತ್ಯವಿಲ್ಲ ಎಂದು ಬಹುಭಾಷಾ ನಟ ಕಿಶೋರ್ ಹೇಳಿದ್ದಾರೆ.

ನಟ ಕಮಲ್ ಹಾಸನ್ ವಿವಾದಾತ್ಮಕ ಹೇಳಿಕೆ ಕುರಿತು ಮೈಸೂರಿನಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ನಟ ಕಮಲ್ ಹಾಸನ್ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ಅಂದುಕೊಂಡರೆ, ಅದು ಅವಹೇಳನಕಾರಿ. ಸಾಕಷ್ಟು ತಿಳಿದ ಮನುಷ್ಯ ಏನೋ ಹೇಳಿದ್ದಾರೆ ಎಂದರೆ ಅದರಲ್ಲಿನ ತರ್ಕ ಏನಿದೆ? ಎಂಬುದನ್ನು ಕೇಳಿ ತಿಳಿದುಕೊಳ್ಳೋಣ ಎಂದಿದ್ದಾರೆ.

ಈಗಾಗಲೇ ನಮ್ಮಲ್ಲಿ ಭಾಷೆ, ಜಾತಿ, ಧರ್ಮ ಎಲ್ಲವನ್ನು ಬಂಡವಾಳ ಮಾಡಿಕೊಂಡು ರಾಜಕೀಯ ಮಾಡಿಕೊಂಡಿದ್ದಾರೆ. ಭಾಷೆಯನ್ನು ಭಾವುಕತೆಯಿಂದ ನೋಡದೆ ಭಾಷೆಯನ್ನ ಭಾಷೆಯಾಗಿ ನೋಡಿ. ಅವರ ಹೇಳಿಕೆಯಿಂದ ಯಾರಿಗೂ ಅವಮಾನವಾಗಿಲ್ಲ. ತಮಿಳಿನಿಂದ ಕನ್ನಡ ಬಂದಿದ್ದರೆ ಸರಿ. ಆದರೆ, ಒಂದೊಂದು ಭಾಷೆಯು ಎಲ್ಲಿಂದ ಬಂತು? ಎಂಬ ನಿಖರವಾದ ಮಾಹಿತಿ ಸಿಕ್ಕಿಲ್ಲ. ಈ ಬಗ್ಗೆ ಇನ್ನೂ ಸಂಶೋಧನೆಗಳು ನಡೆಯುತ್ತಲೇ ಇದೆ. ಒಂದು ಭಾಷೆಯಿಂದ ಇನ್ನೊಂದು ಭಾಷೆ ಬಂದಿದೆ ಎಂದರೆ ಅವಮಾನ ಎಂದು ಯಾಕೆ ಭಾವಿಸಬೇಕು ಎಂದು ಹೇಳಿದ್ದಾರೆ.

ಎಲ್ಲಾ ಭಾಷೆಗಳು ಎಲ್ಲಿಂದಲೋ ಹುಟ್ಟಿ ಬಂದಿರುತ್ತವೆ. ಹಾಗಂತ ಒಂದು ಭಾಷೆ ಮೇಲೂ–ಇನ್ನೊಂದು ಭಾಷೆ ಕೀಳು ಎಂಬುದಿಲ್ಲ. ಕನ್ನಡವೂ ಎಲ್ಲಿಂದಲೋ ಹುಟ್ಟಿ ಬಂದಿರುವಂತೆ ತಮಿಳು ಸಹ ಎಲ್ಲಿಂದಲೋ ಹುಟ್ಟಿ ಬಂದಿದೆ. ಆದರೆ, ಭಾವುಕವಾಗಿ ಜನರನ್ನ ರೊಚ್ಚಿಗೆಬ್ಬಿಸಬಾರದು. ಭಾಷೆಯಿಂದ ಭಾಷೆ ಬಂದಿದೆ ಎನ್ನುವುದನ್ನು ಅವಮಾನ ಅಂತ ಯಾಕೆ ತಿಳಿದುಕೊಳ್ಳಬೇಕು. ನನ್ನ ತಾಯಿಯ ಹೊಟ್ಟೆಯಿಂದ ನಾನು ಹುಟ್ಟಿ ಬಂದೆ ಎಂದರೆ ನನಗೆ ಹಾಗೂ ನನ್ನ ತಾಯಿಗೆ ಅವಮಾನವಲ್ಲ. ಅವರು ಹೇಳಿರುವುದರಲ್ಲಿ ಏನೋ ಅರ್ಥ ಇರಬೇಕು ಅದನ್ನು ಕೇಳಿ ಏನು? ಎಂಬುದನ್ನು ತಿಳಿದುಕೊಳ್ಳಬೇಕು. ಅವರ ಹೇಳಿಕೆಯನ್ನು ಅಷ್ಟೊಂದು ಭಾವುಕವಾಗಿ ನೋಡುವ ಅವಶ್ಯಕತೆ ಇಲ್ಲ. ನನ್ನ ಅಭಿಪ್ರಾಯದಲ್ಲಿ ಇದು ಅವಮಾನವಲ್ಲ ಎಂದಿದ್ದಾರೆ.

ಆಪರೇಷನ್ ಸಿಂಧೂರ ದೇಶದೊಳಗೆ ನಡೆದದ್ದು ಹೆಚ್ಚು...

> ❝ ಆಪರೇಷನ್ ಸಿಂಧೂರ ದೇಶದ ಹೊರಗೆ ನಡೆದದ್ದಕ್ಕಿಂತ ದೇಶದೊಳಗೆ ನಡೆದದ್ದು ಹೆಚ್ಚು. ಧ್ವನಿ ಎತ್ತಿದರು ಅದನ್ನು ಅಡಗಿಸುತ್ತಾರೆ. ಆಪರೇಷನ್ ಸಿಂಧೂರ ದೇಶದ ಹೊರಗೆ ನಡೆದಕ್ಕಿಂತ ದೇಶದೊಳಗೆ ನಡೆದಿದೆ. ಮಾಧ್ಯಮಗಳ ಹುಟ್ಟಡಗಿಸುವ ಕೆಲಸವಾಗಿದೆ. ಪಹಲ್ಗಾಮ್‌ನಲ್ಲಿ ನಡೆದ ಘಟನೆ ಬಗ್ಗೆ ಪರಿಹಾರ ಕಂಡುಕೊಳ್ಳಬೇಕೇ ಹೊರತು ರಾಜಕೀಯ ಲಾಭಕ್ಕಾಗಿ ಬಿಟ್ಟು ಕೊಡಬಾರದು. ಘಟನೆ ಹಿಂದಿನ ಸತ್ಯಾಸತ್ಯತೆಗಳೂ ಹೊರ ಬಂದಿಲ್ಲ. ಪ್ರಶ್ನೆ ಕೇಳೋದು ಪ್ರಜಾಪ್ರಭುತ್ವದ ಲಕ್ಷಣ. ಉತ್ತರವನ್ನು ಬಡಿದು ಕೇಳಬೇಕು. ನಾವು ಜಾತಿ–ಧರ್ಮದಲ್ಲಿ ಅಂಧರಾಗಿ ಕುಳಿತಿದ್ದೇವೆ. ಆದರೆ, ದೇಶದ ವಿಚಾರದಲ್ಲೂ ಅಂಧರಾಗಬಾರದು.
>
> – ಕಿಶೋರ್, ಬಹುಭಾಷಾ ನಟ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭೈರವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ರೆಟ್ರೋ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಹಿಟ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಜಿನ್ನ್ (ತ)	4 ಪ್ರದರ್ಶನಗಳು
ಸಂಗಂ	
ಮಂಡ್ಯ (ಕ)	4 ಪ್ರದರ್ಶನಗಳು
ಲಿಡೋ	
ಠಾಣೆ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಟಿವಿ, ಮೊಬೈಲ್ ಹಾವಳಿಯಿಂದ ಸಿನಿಮಾಗೂ ವೀಕ್ಷಕರ ಕೊರತೆ



ಕಲಾಮಂದಿರದ ಕಿರುರಂಗಮಂದಿರದಲ್ಲಿ ನಡೆದ 'ಸ್ವಾತಂತ್ರ್ಯ ಓಟ' ನಾಟಕ ಪ್ರದರ್ಶನವನ್ನು ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು.

ಮೈಸೂರು, ಜೂ.1(ಎಂಕೆ)–ಟಿವಿ, ಮೊಬೈಲ್ ಹಾವಳಿಯಿಂದಾಗಿ ನಾಟಕಗಳಿರಲಿ, ಸಿನಿಮಾಗಳಿಗೆ ವೀಕ್ಷಕರ ಕೊರತೆಯಾಗಿದ್ದು, ಇಂತಹ ಪರಿಸ್ಥಿತಿಯಲ್ಲಿ ನಾಟಕ ಕಲೆಯನ್ನು ಉಳಿಸಿ, ಬೆಳೆಸಬೇಕು ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಹೇಳಿದರು.

ಮೈಸೂರು ಕಲಾಮಂದಿರದ ಕಿರುರಂಗ ಮಂದಿರದಲ್ಲಿ ತರಳಬಾಳು ಸಮಾಗಮ ವತಿಯಿಂದ ಬೋಳುವಾರು ಮಹಮದ್ ಕುಂಞ ಕೃತಿಯಾಧಾರಿತ ಡಾ.ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳ ಮಾರ್ಗದರ್ಶನದಲ್ಲಿ ಶಿಕ್ಷಕರ ಬೇಸಿಗೆ ರಂಗತರಬೇತಿ ಶಿಬಿರದಲ್ಲಿ ಸಿದ್ಧಪಡಿಸಲಾದ 'ಸ್ವಾತಂತ್ರ್ಯ ಓಟ' ನಾಟಕ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಈ ನಾಟಕವು ಭಾರತ–ಪಾಕಿಸ್ತಾನ ವಿಭಜನೆಯ ಸಂದರ್ಭದ ಚಿತ್ರಣ ನೀಡುತ್ತದೆ ಎಂದರು.

ನಾಟಕದಲ್ಲಿ ಬರುವ ದೃಶ್ಯದಂತೆ ಪಹಲ್ಗಾಮ್ ಪ್ರಕರಣದ ನಂತರ ಘಟನೆಯ ಬಳಿಕ ಪಾಕ್ ಪ್ರಜೆಗಳನ್ನು ದೇಶಬಿಟ್ಟು ಕಳುಹಿಸುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಸೂಚಿಸಿದ್ದರು. ಮೈಸೂರಿನ ಮಹಿಳೆಯೊಬ್ಬರು ಪಾಕ್ ಪ್ರಜೆಯನ್ನು ಮದುವೆಯಾಗಿದ್ದು, ಅವರಿಗೆ ಮೂವರು ಮಕ್ಕಳಿದ್ದಾರೆ. ಆಕೆ ವಾಘಾ ಗಡಿಗೆ ಹೋದಾಗ ಫೋನ್ ಮಾಡಿದರೂ ಪತಿ ತೆಗೆಯಲಿಲ್ಲ. ಹೀಗಾಗಿ ತ್ರಿಶಂಕು ಸ್ಥಿತಿಗೆ ಸಿಲುಕಿರುವ ಆಕೆ ಹೈಕೋರ್ಟ್ ಮೆಟ್ಟಿಲೇರಿದ್ದರು. ಇಂತಹ ದೃಶ್ಯಗಳನ್ನು ಈ ನಾಟಕ ಕಟ್ಟಿಕೊಟ್ಟಿದೆ ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ತರಳಬಾಳು ಸಮಾಗಮದ ಅಧ್ಯಕ್ಷ ಡಾ.ಎಸ್.ಬಿ. ವಸಂತಕುಮಾರ್, ಕಾರ್ಯದರ್ಶಿ ಶಿವಕುಮಾರ್ ಹಂಜಿ, ಸದಸ್ಯ ಡಾ.ಗುರುಮೂರ್ತಿ, ರಾಜಶೇಖರಯ್ಯ, ನಾಟಕದ ನಿರ್ದೇಶಕ ಶಶಿಧರ ಭಾರಿಘಾಟ್ ಡಿ.ಎನ್. ಲೋಕಪ್ಪ ಮತ್ತಿತರರಿದ್ದರು.

ಜೆ.ಹೆಚ್. ಮೇಘನಾಗೆ ಪಿಎಚ್.ಡಿ



ಮೈಸೂರು, ಜೂ.1– ಡಾ. ಹೆಚ್.ಕೆ. ಚೇತನ್ ಅವರ ಮಾರ್ಗದರ್ಶನದಲ್ಲಿ ಜೆ.ಹೆಚ್. ಮೇಘನಾ ಅವರು ಗಣಕ ವಿಜ್ಞಾನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಬಾಡಿಗೆಗಿದೆ

ಮೈಸೂರು ನಗರದ ಚಾಮರಾಜ ಜೋಡಿ ರಸ್ತೆಯ ಮೈಸೂರು ಜಿಲ್ಲಾ ಸಹಕಾರ ಒಕ್ಕೂಟದ ಕಟ್ಟಡದ (ತ್ಯಾಗರಾಜ ರಸ್ತೆಗೆ ಇರುವ) 2771 ಚದರಡಿಯ ಜಾಗವನ್ನು ಬಾಡಿಗೆ ನೀಡಲಾಗುತ್ತಿದ್ದು, ಅಗತ್ಯ ಇರುವವರು ಸಂಪರ್ಕಿಸಬೇಕಾಗಿ ಕೋರಿದೆ.

9611944599 / 9845173566

REQUIRED

SALES EXECUTIVE - 2 Nos (M)
SALES RECEPTIONIST - 1 No (F)
SERVICE HELPER - 3 Nos (M)
(Freshers can also apply)
Contact
Ph: 0821- 4000401 / 402
WALK IN INTERVIEW
3rd & 4th June 2025
Time : 11 AM to 1 PM
ARJUN MOTORS
Authorised Yamaha Showroom
937/4, New Kantharaj Urs Road, Laxmipuram, Mysore - 570 004

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಪೈಲ್ವಾನ್ ಶ್ರೀ ಬಿ. ಗುರುಪ್ರಸಾದ್
ಖಜಾಂಚಿ, 10 ಜನರ ಈಶ್ವರ ದೇವಸ್ಥಾನದ ಗರಡಿ ಟ್ರಸ್ಟ್ (ರಿ.)

ಇವರು ದಿ:23.05.2025 ಗುರುವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 02.06.2025 ಸೋಮವಾರ ಮಧ್ಯಾಹ್ನ 12.00 ಗಂಟೆಗೆ 1586/ಎ, 3ನೇ ಕ್ರಾಸ್, ಹೊಸಕೇರಿ, ಕೆ.ಆರ್.ಮೊಹಲ್ಲಾ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ಕೆ.ಜಾನಕಿ ಹಾಗೂ ದೊಡ್ಡಹಟ್ಟಿ ಕುಟುಂಬರ್ಗದವರು

ಅಧ್ಯಕ್ಷರು, ಎನ್. ಬೆಟ್ಟಯ್ಯರವರು | ಧರ್ಮದರ್ಶಿಗಳು, | ಕಾರ್ಯದರ್ಶಿ ಬಿ.ಕೃಷ್ಣಯ್ಯ ಉಪಖಜಾಂಚಿ, ಪೋಲೀಸ್ (ನಿ)



ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀಮತಿ ಲಕ್ಷ್ಮಮ್ಮ

ಇವರು ದಿ:24.05.2025 ಶನಿವಾರ ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 03.06.2025 ಮಂಗಳವಾರ ಬೆಳಗ್ಗೆ 10.30 ಗಂಟೆಗೆ ಎನ್.ಆರ್.ಮೊಹಲ್ಲಾದ ರುದ್ರಭುಮಿ ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀ ಟಿ ನಾಗರಾಜು ಮತ್ತು ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.
ಭೋಜನ: ಮಧ್ಯಾಹ್ನ 12.30 ಗಂಟೆಗೆ
ಸ್ಥಳ: ಗಂಗಡಕಾರ ಒಕ್ಕಲಿಗರ ಶ್ರೀರಾಮ ಮಂದಿರ, ಎನ್.ಆರ್.ಮೊಹಲ್ಲಾ, ಮೈಸೂರು



ಬೇಕಾಗಿದ್ದಾರೆ

SSLC, PUC / ITI / DIPLOMA
ಪಾಸ್ / ಫೇಲ್ ಆಗಿರುವ, 18 ರಿಂದ 25 ವಯೋಮಿತಿಯೊಳಗಿರುವ, ಹುಡುಗರಿಗೆ
Apprentice / Company Trainee
ಕೆಲಸದ ಅವಕಾಶವಿದೆ.
ಸೋಮವಾರದಿಂದ ಶನಿವಾರದವರೆಗೆ ಸಂದರ್ಶನ ಬೆಳಿಗ್ಗೆ 8–00 ರಿಂದ ಮಧ್ಯಾಹ್ನ 4–00 ರವರೆಗೆ ಈ ಕೆಳಕಂಡ ವಿಳಾಸಕ್ಕೆ ಅಥವಾ ದೂರವಾಣಿಗೆ ಕೂಡಲೇ ಸಂಪರ್ಕಿಸುವುದು. ಸೌಲಭ್ಯಗಳು ಹೀಗಿವೆ, ಆಕರ್ಷಕ ಶಿಶುಕ್ಷುವೇತನ (ಸ್ಟೈಪೆಂಡ್), ಕ್ಯಾಂಟೀನ್ ವ್ಯವಸ್ಥೆ, ಸಮವಸ್ತ್ರ, ಶೂಸ್‌ಗಳು, ಅಲ್ಲದೆ ಇತರೆ ಸೌಲಭ್ಯಗಳನ್ನು ನೀಡಲಾಗುವುದು.
ಕೂಡಲೇ ಸಂಪರ್ಕಿಸಿ:
Rane
Rane (Madras) Ltd.
79/84, Hootagalli Industrial Area, Mysore - 570018
Mobile : 90191 85805
Ph: 0821-4005705

ವಾಣಿಜ್ಯ ಪದವೀಧರರೇ ಗಮನಿಸಿ

ಕಲಿಯಿರಿ ಟ್ಯಾಲಿ, ಇ-ಫೈಲಿಂಗ್, ಜಿಎಸ್‌ಟಿ & ಇನ್‌ಕಂ ಟ್ಯಾಕ್ಸ್
ತಕ್ಷಣವೇ ಉದ್ಯೋಗ ಪಡೆದುಕೊಳ್ಳಬಹುದು.
* ವಯಸ್ಸಿನ ಮಿತಿ ಇಲ್ಲ * ಗೃಹಿಣಿಯರಿಗೂ ಅವಕಾಶ.
ತರಗತಿಗಳು ಪ್ರಾರಂಭ 9-6-2025 ರಿಂದ
Contact: GLOBAL ACCOUNTS
Mob: 8951525007

PAPER PUBLICATION

I, Smt. S. SHOBHA, aged about 52 years, wife of H.R. Dinesh, residing at No.148, Ground Floor, 2nd Main, 2nd Cross, Vijayanagara Railway Layout, Metagalli, Mysuru - 570 016 (Mobile No. 82968 61725), intending to purchase the schedule property from D.J. Vikram, Smt. J. Yashodamma, Sri. B.J. Manu and M.D. Mamatha the legal heirs of Late. S. Jagannatha Shetty.

If anybody has got any claim, over the schedule property they have to intimate the same to me within 15 days from the date of this publication. Any claims made thereafter will not be considered.

SCHEDULE : Site Property bearing No.27 measuring East to West 15.24 meters x North to South 9.17 meters situated at Sri Sai Enclave Extension, Kergalli, Mysuru formed in Sy. No. 55/5, 55/6, 55/7, 55/8, 55/9, 55/10, 55/11, 55/12, 55/13, 55/14 of Kergalli Village, Jayapura Hobli, Mysuru Taluk, which is bounded on the East by Site No.2, West by 12 Meters Road, North by Site No.28 and South by Site No.26.

Sd/- (S. SHOBHA)
Intending Purchaser.

Place: Mysuru, Date: 31-05-2025.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ

ಕಛೇರಿ ದೂರವಾಣಿ: 08174–232203
ಸಂಖ್ಯೆ:ಕೃಉಮಾಸ/ಅರಸೀಕೆರೆ/195/2025–26 ದಿನಾಂಕ:29/05/2025

–:: ಟೆಂಡರ್ ಪ್ರಕಟಣೆ (Karnataka Public Procurement Portal ಮೂಲಕ) ::–

2025–26 ನೇ ಸಾಲಿಗಾಗಿ ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹಾಗೂ ಜಾವಗಲ್, ಗಂಡಸಿ, ಜೆ.ಸಿ. ಪುರ, ಬಾಣಾವರ, ಹಬ್ಬನಘಟ್ಟ ಕಾವಲ್ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಭದ್ರತಾ ಸೇವೆಗಾಗಿ ಭದ್ರತಾ ಸಂಸ್ಥೆಯು ಕರ್ನಾಟಕ ಖಾಸಗಿ ಭದ್ರತಾ ಏಜೆನ್ಸಿ ನಿಯಮ 2008 (The Karnataka Private Security Agencies Rules 2008) ರನ್ವಯ ಸಂಬಂಧಪಟ್ಟ ಗೃಹ/ ಪೊಲೀಸ್ ಇಲಾಖೆಯಿಂದ ಲೈಸೆನ್ಸ್ ಪಡೆದಿರುವ ಹಾಗೂ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ/ ಸಂಸ್ಥೆಗಳಿಂದ Karnataka Public Procurement Portal, https://kppp.karnataka.gov.in ಮೂಲಕ ಟೆಂಡರ್‌ಗಳನ್ನು ಏಕ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. 1)ಭರ್ತಿ ಮಾಡಿದ ಇ–ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 18/06/2025 ಸಂಜೆ 4–00 ಗಂಟೆವರೆಗೆ. 2)ಇ–ಟೆಂಡರ್ ಗಳನ್ನು ತೆರೆಯುವ ದಿನಾಂಕ: 19/06/2025 ಸಂಜೆ 4–00 ಗಂಟೆಗೆ ಒಂದು ವೇಳೆ ಸದರಿ ದಿನಾಂಕಗಳಂದು ಸಾರ್ವತ್ರಿಕ ರಜೆ ಘೋಷಣೆ ಆದಲ್ಲಿ ಕಾರ್ಯಾಲಯದ ಮುಂದಿನ ಕೆಲಸದ ದಿನ ಸಿಂಧುವಾಗಿರುತ್ತದೆ. ಕ್ರ.ಸಂ.1)ಕೆಲಸದ ಹೆಸರು: ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಿಬ್ಬಂದಿ ಪೂರೈಸುವುದು. ಪೂರೈಸಬೇಕಾದ ಸಿಬ್ಬಂದಿ ಸಂಖ್ಯೆ 14 ಇ.ಎಂ.ಡಿ ಮೊತ್ತ ರೂ. 80,000=00 ಖಾಲಿ ಟೆಂಡರ್ ಫಾರಂ ಬೆಲೆ Karnataka Public Procurement Portal ನಿಯಮಗಳನ್ವಯ ವಿವರ: ಬೆರಳಚ್ಚುಗಾರರು/ಕಂಪ್ಯೂಟರ್ ಆಪರೇಟರ್ –02 ಡಾಟಾ ಎಂಟ್ರಿ ಆಪರೇಟರ್–01, ವಾಹನ ಚಾಲಕರು–02, ಭದ್ರತಾ ಕಾವಲುಗಾರರು–09 ಟೆಂಡರ್ ಪ್ರೊಸೆಸ್ಸಿಂಗ್ ಫೀ Karnataka Public Procurement Portal ನ ನಿಯಮಗಳನ್ವಯ ಇದ್ದು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳು Karnataka Public Procurement Portalನಲ್ಲಿ ನಮೂದಿಸಿರುವಂತೆ ಇದ್ದು, ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಕಛೇರಿಯಿಂದ ಅಥವಾ https://kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. Karnataka Public Procurement Portal ಟೆಂಡರ್‌ನಲ್ಲಿ ಭಾಗವಹಿಸಲು ನೊಂದಾಯಿಸುವ ಬಗ್ಗೆ ಸಹಾಯವಾಣಿ ದೂರವಾಣಿ ಸಂಖ್ಯೆ +91–8046010000, +91–8068948777 ಅಥವಾ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/–(ಸಿ.ಎಲ್. ಸಿದ್ದರಂಗಸ್ವಾಮಿ)
ಕಾರ್ಯದರ್ಶಿ,
ಕೃ.ಉ.ಮಾ.ಸ, ಅರಸೀಕೆರೆ.

ಸಹಿ/–(ಎಂ.ಜಿ. ಸಂತೋಷ್ ಕುಮಾರ್)
ಆಡಳಿತಾಧಿಕಾರಿಗಳು,
ಕೃ.ಉ.ಮಾ.ಸ, ಅರಸೀಕೆರೆ.

ವಾಸಾಸಂಇ/ಹಿಸನಿ/ಹಾಸನ/168/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಆಧ್ಯಾದೇಶ 2000, ಅಧ್ಯಾಯ –2ರ ಅಧಿನಿಯಮ 2(1)ರ ಪ್ರಕಾರ ಅನುಬಂಧ –ಎ (ನಿರ್ಮಾಣ)
ತಾಲ್ಲೋಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ.,
ನಂ.1, ಇಂಡಸ್ಟ್ರೀಯಲ್ "ಎ" ಲೇಔಟ್, ಬನ್ನಿಮಂಟಪ, ಮೈಸೂರು–570015
ಟೆಂಡರ್ ಕರೆಯುವ ಪ್ರಾಧಿಕಾರದ ಹೆಸರು ಮತ್ತು ವಿಳಾಸ

ಟೆಂಡರ್ ನಂ.1 ದಿನಾಂಕ 30.05.2025

ಕ್ರಸಂ	ಟೆಂಡರ್ ಹೊರಡಿಸಿದ ಪ್ರಾಧಿಕಾರ	ಟೆಂಡರ್ ಕ್ರಮಾಂಕ ಹಾಗೂ ದಿನಾಂಕ	ಕಾಮಗಾರಿಯ ವಿವರ	ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ	ಇ.ಎಂ.ಡಿ ಮೊತ್ತ ರೂ.ಗಳಲ್ಲಿ	Globle positioning System PARA METER	ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಖಾಲಿ ಟೆಂಡರ್ ಫಾರಂಗಳನ್ನು ವಿತರಿಸಲು ದಿನಾಂಕ ಮತ್ತು ಸಮಯ	ಭರ್ತಿ ಮಾಡಿದ ಟೆಂಡರ್ ಫಾರಂ ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	ಸ್ವೀಕರಿಸಲಾದ ಟೆಂಡರ್ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	ಟೆಂಡರ್ ಸ್ವೀಕರಿಸು ಪ್ರಾಧಿಕಾರ
1	2	3	4	5	6	7	8	9	10	11	12
1	ಟಿ.ಎ.ಪಿ.ಸಿ.ಎಂ. ಎಸ್.ಲಿ ಮೈಸೂರು	ಟಿ.ಎ.ಪಿ.ಸಿ.ಎಂ.ಎಸ್/ಮೆ. ವಾಮ.ಕಾ/ಇಟೆಂ/1–2025–26 ದಿನಾಂಕ:	ಸಂಘದ ಪ್ರಾಂಗಣದಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸುವ ಕಾಮಗಾರಿ 371.75 ಚದರ ಮೀಟರ್	83.660422	1,68,000/–	–	16.06–2025ರ ಸಂಜೆ 5 ಗಂಟೆಯವರೆಗೆ	ದಿನಾಂಕ: 02-06-2025 ಬೆಳಗ್ಗೆ 10ರಿಂದ	16–06–2025 ಸಂಜೆ 5 ಗಂಟೆಯವರೆಗೆ	19–06–2025 ಸಂಜೆ 3 ಗಂಟೆಯ ನಂತರ	ಪ್ರಭಾರ ಮುಖ್ಯಕಾರ್ಯ ನಿರ್ವಾಹಕರು ಟಿ.ಎ.ಪಿ.ಸಿ.ಎಂ .ಎಸ್.ಲಿ., ಮೈಸೂರು

ಸೂಚನೆಗಳು :
1. Globle positioning System PARA METER .ಕಾಲಂಗಳನ್ನು ಖಡ್ಡಾಯವಾಗಿ ಭರ್ತಿ ಮಾಡಬೇಕು
2. ಈ ನಮೂನೆಯನ್ನು ದ್ವಿಪ್ರತಿಯಲ್ಲಿ ಸಲ್ಲಿಸಬೇಕು ಹಾಗೂ ವಾರ್ತಾ ಪತ್ರಿಕೆಗೆ ನೀಡುವ ನೋಟೀಸಿನ ಎರಡು ಪ್ರತಿ ಸಹ ಸಲ್ಲಿಸಬೇಕು.
3. ಸೂಚಿಸಿದ ಟೆಂಡರ್ ಪ್ರಕಟಣೆಯು ಸಂಬಂಧಪಟ್ಟ ಅನುಬಂಧದಲ್ಲಿ ಉಲ್ಲೇಖಿತವಾಗಿರಬೇಕು.
4. ಸಂಬಂಧಪಟ್ಟ ಟೆಂಡರ್ ಪ್ರಾಧಿಕಾರದವರ ಸಹಿ ಮತ್ತು ಮೊಹರು ಖಡ್ಡಾಯವಾಗಿರಬೇಕು.
5. ಕಾಲಂಗಳನ್ನು ಅನ್ವಯ ಭರ್ತಿ ಮಾಡಿರಬೇಕು.
6. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಆಧ್ಯಾದೇಶ 2000, ಅಧ್ಯಾಯ –5ರ ಅಧಿನಿಯಮ 17ರ ಪ್ರಕಾರ ಕನಿಷ್ಠ ಸಮಯ ನಿಗಧಿಪಡಿಸಿರಬೇಕುಟೆಂಡರ್ ಬುಲೆಟನ್

ಟೆಂಡರ್ ಕರೆಯುವ ಪ್ರಾಧಿಕಾರದವರ
ಸಹಿ ಮತ್ತು ಮೊಹರು
ಅಧ್ಯಕ್ಷರು, ಸಹಿ/– ಪ್ರಭಾರ ಮುಖ್ಯಕಾರ್ಯನಿರ್ವಾಹಕ
ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರಿ
ಸಂಘ ನಿಯಮಿತ, ಮೈಸೂರು ಪರವಾಗಿ

ಕರ್ನಾಟಕ ಸರ್ಕಾರ
ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಆಧ್ಯಾದೇಶ 2000, ಅಧ್ಯಾಯ –2ರ ಅಧಿನಿಯಮ 2(1)ರ ಪ್ರಕಾರ ಅನುಬಂಧ –ಎ (ನಿರ್ಮಾಣ)
ತಾಲ್ಲೋಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿ.,
ನಂ.1, ಇಂಡಸ್ಟ್ರೀಯಲ್ "ಎ" ಲೇಔಟ್, ಬನ್ನಿಮಂಟಪ, ಮೈಸೂರು–570015
ಟೆಂಡರ್ ಕರೆಯುವ ಪ್ರಾಧಿಕಾರದ ಹೆಸರು ಮತ್ತು ವಿಳಾಸ

ಟೆಂಡರ್ ನಂ.2 ದಿನಾಂಕ 30.05.2025

ಕ್ರಸಂ	ಟೆಂಡರ್. ಹೊರಡಿಸಿದ ಪ್ರಾಧಿಕಾರ	ಟೆಂಡರ್ ಕ್ರಮಾಂಕ ಹಾಗೂ ದಿನಾಂಕ	ಕಾಮಗಾರಿಯ ವಿವರ	ಅಂದಾಜು ಮೊತ್ತ ಲಕ್ಷ ರೂ.ಗಳಲ್ಲಿ	ಇ.ಎಂ.ಡಿ ಮೊತ್ತ ರೂ.ಗಳಲ್ಲಿ	Globle positioning System PARA METER	ಖಾಲಿ ಟೆಂಡರ್ ಫಾರಂಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	ಖಾಲಿ ಟೆಂಡರ್ ಫಾರಂಗಳನ್ನು ವಿತರಿಸಲು ದಿನಾಂಕ ಮತ್ತು ಸಮಯ	ಭರ್ತಿ ಮಾಡಿದ ಟೆಂಡರ್ ಫಾರಂ ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ	ಸ್ವೀಕರಿಸಲಾದ ಟೆಂಡರ್ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ	ಟೆಂಡರ್ ಸ್ವೀಕರಿಸು ಪ್ರಾಧಿಕಾರ
1	2	3	4	5	6	7	8	9	10	11	12
1	ಟಿ.ಎ.ಪಿ.ಸಿ.ಎಂ. ಎಸ್.ಲಿ ಮೈಸೂರು	ಟಿ.ಎ.ಪಿ.ಸಿ.ಎಂ.ಎಸ್/ಮೈ ವಾ.ಮ.ರೀ.ಕಾ/ ಇಟೆಂ/2–2025–26 ದಿನಾಂಕ:	ಸಂಘದ ಪ್ರಾಂಗಣದಲ್ಲಿ ವಾಣಿಜ್ಯ ಮಳಿಗೆಗಳ ರಿಪೇರಿ ಮತ್ತು ಒಳಚರಂಡಿ ನಿರ್ಮಿಸುವ ಕಾಮಗಾರಿ	10.63	26,600/–	–	16.06–2025ರ ಸಂಜೆ 5 ಗಂಟೆಯವರೆಗೆ	ದಿನಾಂಕ:02–06–2025 ಬೆಳಗ್ಗೆ 10ರಿಂದ	16–06–2025 ಸಂಜೆ 5 ಗಂಟೆಯವರೆಗೆ	19–06–2025 ಸಂಜೆ 3 ಗಂಟೆಯ ನಂತರ	ಪ್ರಭಾರ ಮುಖ್ಯಕಾರ್ಯ ನಿರ್ವಾಹಕರು ಟಿ.ಎ.ಪಿ.ಸಿ.ಎಂ. ಎಸ್.ಲಿ., ಮೈಸೂರು

ಸೂಚನೆಗಳು :
1. Globle positioning System PARA METER .ಕಾಲಂಗಳನ್ನು ಖಡ್ಡಾಯವಾಗಿ ಭರ್ತಿ ಮಾಡಬೇಕು
2. ಈ ನಮೂನೆಯನ್ನು ದ್ವಿಪ್ರತಿಯಲ್ಲಿ ಸಲ್ಲಿಸಬೇಕು ಹಾಗೂ ವಾರ್ತಾ ಪತ್ರಿಕೆಗೆ ನೀಡುವ ನೋಟೀಸಿನ ಎರಡು ಪ್ರತಿ ಸಹ ಸಲ್ಲಿಸಬೇಕು.
3. ಸೂಚಿಸಿದ ಟೆಂಡರ್ ಪ್ರಕಟಣೆಯು ಸಂಬಂಧಪಟ್ಟ ಅನುಬಂಧದಲ್ಲಿ ಉಲ್ಲೇಖಿತವಾಗಿರಬೇಕು.
4. ಸಂಬಂಧಪಟ್ಟ ಟೆಂಡರ್ ಪ್ರಾಧಿಕಾರದವರ ಸಹಿ ಮತ್ತು ಮೊಹರು ಖಡ್ಡಾಯವಾಗಿರಬೇಕು.
5. ಕಾಲಂಗಳನ್ನು ಅನ್ವಯ ಭರ್ತಿ ಮಾಡಿರಬೇಕು.
6. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಆಧ್ಯಾದೇಶ 2000, ಅಧ್ಯಾಯ –5ರ ಅಧಿನಿಯಮ 17ರ ಪ್ರಕಾರ ಕನಿಷ್ಠ ಸಮಯ ನಿಗಧಿಪಡಿಸಿರಬೇಕು. ಟೆಂಡರ್ ಬುಲೆಟನ್

ಟೆಂಡರ್ ಕರೆಯುವ ಪ್ರಾಧಿಕಾರದವರ
ಸಹಿ ಮತ್ತು ಮೊಹರು
ಅಧ್ಯಕ್ಷರು, ಸಹಿ/– ಪ್ರಭಾರ ಮುಖ್ಯಕಾರ್ಯನಿರ್ವಾಹಕ
ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರಿ
ಸಂಘ ನಿಯಮಿತ, ಮೈಸೂರು ಪರವಾಗಿ